ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 29 ಗುರುವಾರ 2026


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 280 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲೂ
ಡ್ರಗ್ಸ್ ತಯಾರಿಕೆ!

- ಹೆಬ್ಬಾಳು ಕೈಗಾರಿಕಾ ಪ್ರದೇಶದ ರಸಾಯನಿಕ ಘಟಕವೊಂದರ ಮೇಲೆ ದೆಹಲಿ ರಾಷ್ಟ್ರೀಯ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ ದಾಳಿ; ಶೋಧನೆ
- ಮೈಸೂರು ನಗರ ಪೊಲೀಸರಿಗೆ ಯಾವ ಸುಳಿವು ನೀಡದೆ ಪರಿಶೀಲನೆ



ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕೆಮಿಕಲ್ಸ್ ಕಾರ್ಖಾನೆ.

ಮೈಸೂರು, ಜ.28(ಪಿಎಂ/ಬಿಎಲ್‌ಯು)– ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ, ರಾಜ ಪರಂಪರೆಯ ನಗರ, ಪ್ರವಾಸಿಗರ ನೆಚ್ಚಿನ ತಾಣ ಎಂಬಿತ್ಯಾದಿ ವಿಶೇಷಣಗಳಿಂದ ಪ್ರಖ್ಯಾತಿ ಹೊಂದಿರುವ ಮೈಸೂರು, ಇತ್ತೀಚಿನ ದಿನಗಳಲ್ಲಿ ಅಪರಾಧ, ಅನಾಹುತಗಳಿಂದ ಅಪಖ್ಯಾತಿಗೆ ಗುರಿಯಾಗಿದೆ. ಈಗ ಮಾದಕ ವಸ್ತುಗಳ ತಯಾರಿಕಾ ಜಾಲತಾಣ ಎಂಬ ಕುಖ್ಯಾತಿಯನ್ನೂ ಪಡೆಯುವಂತಾಗಿದೆ.

ಕಳೆದ 2025ರ ಜುಲೈನಲ್ಲಿ ನಗರದ ಹೊರವಲಯದ ರಿಂಗ್ ರಸ್ತೆ ಬೆಲವತ್ತ ಬಳಿಯ ಶೆಡ್‌ವೊಂದರಲ್ಲಿ ಕಾರ್ಯಾಚರಿಸುತ್ತಿದ್ದ ಎಂಡಿಎಂಎ ಡ್ರಗ್ಸ್ ತಯಾರಿಕಾ ಘಟಕದ ಮೇಲೆ ಮಹಾರಾಷ್ಟ್ರ ಪೊಲೀಸರು ದಾಳಿ ನಡೆಸಿದ್ದರು.

ದಿನದ 24 ಗಂಟೆಯೂ ಮಾದಕ ವಸ್ತು ಸರಬರಾಜು ಆಗುತ್ತಿದೆ. ಅದನ್ನು ಯಾರೇ ಬಂದರೂ ತಡೆಯಲು ಸಾಧ್ಯವಿಲ್ಲ ಎನ್ನುವ ಹಂತ ತಲುಪಿರುವಾಗಲೇ ಇದೀಗ ಹೆಬ್ಬಾಳು ಕೈಗಾರಿಕಾ ಪ್ರದೇಶದ ಕೆಮಿಕಲ್ಸ್ ಕಾರ್ಖಾನೆಯೊಂದರ ■6ನೇ ಪುಟಕ್ಕೆ

ಪೊಲೀಸ್ ಪ್ರಕಟಣೆಯೇ ಸಾರಿ ಹೇಳುತ್ತಿದೆ...!

ಮೈಸೂರು, ಜ.28– ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಕೈಗಾರಿಕಾ ಶೆಡ್‌ಗಳನ್ನು ಬಾಡಿಗೆಗೆ ಪಡೆದು, ಅಕ್ರಮ ಚಟುವಟಿಕೆಗಳು ಹಾಗೂ ಮಾದಕ ದ್ರವ್ಯದಂತಹ ವಸ್ತುಗಳನ್ನು ತಯಾರಿಸಲು ಬಳಸುತ್ತಿರುವುದು ಕಂಡು ಬಂದಿರುತ್ತದೆ ಎಂದು ಹೆಬ್ಬಾಳು ಪೊಲೀಸ್ ಠಾಣೆಯಿಂದ ಕೈಗಾರಿಕೋದ್ಯಮಿಗಳಿಗೆ ನೀಡಲಾಗಿರುವ ಸಭಾ ಸೂಚನಾ ಪ್ರಕಟಣೆ ಯಲ್ಲೇ ಉಲ್ಲೇಖಿಸಲಾಗಿದೆ.

ಈ ಬೆಳವಣಿಗೆ ಹಿನ್ನೆಲೆಯಲ್ಲಿ, ನಗರ ಪೊಲೀಸ್ ಆಯುಕ್ತರು ಮೈಸೂರಿನ ಕೈಗಾರಿಕೋದ್ಯಮಿಗಳ ಸಭೆಯನ್ನು ನಾಳೆ (ಗುರುವಾರ) ಬೆಳಗ್ಗೆ 11 ಗಂಟೆಗೆ ಹೆಬ್ಬಾಳು ಸಂಕ್ರಾಂತಿ ಸರ್ಕಲ್‌ನಲ್ಲಿರುವ ಕೆಸಿಜಿ ರೆಸಿಡೆನ್ಸಿಯಲ್ಲಿ ಕರೆದಿರುವುದಾಗಿ ಇಂದು, ಹೆಬ್ಬಾಳು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಅವರು ಹೊರಡಿಸಿರುವ ಸಭಾ ಸೂಚನೆಯಲ್ಲಿ ತಿಳಿಸಿದ್ದಾರೆ.

ಸುತ್ತಿ ಸುತ್ತಿ ಸುಸ್ತಾದ ಮೈಸೂರು ಪೊಲೀಸರು

ಮೈಸೂರು: ಮೈಸೂರಿನ ಡ್ರಗ್ಸ್ ತಯಾರಿಕಾ ಶಂಕೆ ಮೇರೆಗೆ ಕಾರ್ಖಾನೆಯೊಂದರ ಮೇಲೆ ಎನ್‌ಸಿಬಿ ತಂಡ ದಾಳಿ ಮಾಡಿರುವ ವಿಚಾರ ತಿಳಿದು ಮೈಸೂರು ಪೊಲೀಸರು ಎಚ್ಚೆತ್ತುಕೊಂಡರು. ಆದರೆ, ಯಾವ ರಾಜ್ಯದ ಪೊಲೀಸರು, ಎಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆಂಬ ಸ್ಪಷ್ಟ ಮಾಹಿತಿ ಸ್ಥಳೀಯ ಪೊಲೀಸರಿಗೆ ಇರಲಿಲ್ಲ. ಇದರಿಂದ ಮೈಸೂರಿನ ವಿಜಯ ನಗರ, ಹೆಬ್ಬಾಳು, ಮೇಟಗಳ್ಳಿ, ನರಸಿಂಹ ರಾಜ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಸೇರಿದಂತೆ ಸಿಬ್ಬಂದಿ, ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ರೌಂಡ್ಸ್ ಹಾಕಿದರು. ಅದರಲ್ಲೂ ಪ್ರತಿಯೊಂದು ಕೆಮಿಕಲ್ಸ್ ಫ್ಯಾಕ್ಟರಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಇವರಲ್ಲದೆ ಪ್ರತಿಯೊಂದು ಪೊಲೀಸ್ ಠಾಣೆಯ ಎಸ್‌ಬಿ, ನಗರ ಗುಪ್ತಚರ ವಿಭಾಗ, ರಾಜ್ಯ ಗುಪ್ತಚರ ಇಲಾಖೆಯ ಸಿಬ್ಬಂದಿ ಸಹ ಕೈಗಾರಿಕಾ ಬಡಾವಣೆ ಜಾಲಾಡಿದರು. ಬೆಳಿಗ್ಗೆಯಿಂದ ವಿವಿಧೆಡೆ ಪರಿಶೀಲನೆ ನಡೆಸಿದರೂ ಕಾರ್ಯಾಚರಣೆ ಬಗ್ಗೆ ಮಾಹಿತಿ ಸಿಗಲಿಲ್ಲ. ಮಧ್ಯಾಹ್ನದ ನಂತರವಷ್ಟೇ ಇವರಿಗೆ ಮಾಹಿತಿ ಲಭ್ಯವಾಯಿತು. ಅಲ್ಲಿಯವರೆಗೆ ಸುತ್ತಿ ಸುತ್ತಿ ಮೈಸೂರು ಪೊಲೀಸರು ಸುಸ್ತಾಗಿದ್ದರು.

ಕಾರ್ಯಾಚರಣೆಯಲ್ಲ, ಕೇವಲ ಕೇಸ್ ಫಾಲೋ ಅಪ್ ಅಷ್ಟೆ
ಮಾದಕ ವಸ್ತು, ದ್ರವ್ಯಗಳೇನೂ ಸಿಕ್ಕಿಲ್ಲ

ಮೈಸೂರು, ಜ.28(ಪಿಎಂ)– ಇದು ಕಾರ್ಯಾಚರಣೆಯಲ್ಲ, ಕೇವಲ ಫಾಲೋ ಅಪ್ ಕೇಸ್ ಆಗಿದ್ದು, ಕಾರ್ಖಾನೆ ಮಾಲೀಕ ಗಣಪತ್ ಲಾಲ್ ಮನೆಯಲ್ಲಾಗಲೀ, ಹೆಬ್ಬಾಳಿನ ಅವರ ಕಾರ್ಖಾನೆಯಲ್ಲಾಗಲೀ ಮಾದಕ ವಸ್ತು, ದ್ರವ್ಯಕ್ಕೆ ಸಂಬಂಧಿಸಿದಂತೆ ಏನೂ ಸಿಕ್ಕಿಲ್ಲ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.


ಸೀಮಾ ಲಾಟ್ಕರ್

ಹೆಬ್ಬಾಳು ಕೈಗಾರಿಕಾ ಪ್ರದೇಶದ ಗಣಪತ್ ಲಾಲ್ ಮಾಲೀಕತ್ವದ ಕಾರ್ಖಾನೆಗೆ ಬುಧವಾರ ಮಧ್ಯಾಹ್ನ ಭೇಟಿ ನೀಡಿದ್ದ ಅವರು ಆ ಬಳಿಕ ಸಂಜೆ ವೇಳೆಗೆ ಹೆಬ್ಬಾಳು ಪೊಲೀಸ್ ಠಾಣೆ ಆವರಣದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು.

ಎನ್‌ಸಿಬಿ ತಂಡವು ಫಾಲೋ ಅಪ್ ಕೇಸ್ ಸಂಬಂಧ ವಿಚಾರಣೆ ನಡೆಸುತ್ತಿದೆ. ಗುಜರಾತಿನ ಅಹ್ಮದಾಬಾದ್‌ನಲ್ಲಿ ಎನ್‌ಸಿಬಿ ಅಧಿಕಾರಿಗಳು ಒಬ್ಬ ಆರೋಪಿ ಬಂಧಿಸಿದ್ದರು. ಈ ಸಂಬಂಧ ವಿಚಾರಣೆಗಾಗಿ ಇಲ್ಲಿಗೆ ಬಂದಿದ್ದಾರೆ. ಬಂಧಿತ ಆರೋಪಿಯು ಹೆಬ್ಬಾಳು ಕೈಗಾರಿಕಾ ಪ್ರದೇಶದ ಕೆಮಿಕಲ್ಸ್ ಕಾರ್ಖಾನೆಯೊಂದರ ಮಾಲೀಕ ಗಣಪತ್ ಲಾಲ್ ಅವರ ಹತ್ತಿರದ ಸಂಬಂಧಿ. ಹೀಗಾಗಿ ಗಣಪತ್ ಲಾಲ್ ಮನೆಯಲ್ಲಿ ಸಹ ಎನ್‌ಸಿಬಿ ತಂಡ ತಪಾಸಣೆ ನಡೆಸಿದೆ. ಆದರೆ ಮನೆಯಲ್ಲಿ ಸಹ ಏನೂ ಸಿಕ್ಕಿಲ್ಲ ಎಂದು ಹೇಳಿದರು. ಜೊತೆಗೆ ಗಣಪತ್ ಲಾಲ್ ■6ನೇ ಪುಟಕ್ಕೆ

ವಿಮಾನ ಅಪಘಾತದಲ್ಲಿ ಮಹಾರಾಷ್ಟ್ರ ಡಿಸಿಎಂ ಅಜಿತ್ ಪವಾರ್ ಸಾವು

ಪುಣೆಯ ಬಾರಾಮತಿಯಲ್ಲಿ ಲಘು ವಿಮಾನ ಪತನ; ಅಜಿತ್ ಸೇರಿ ಐವರು ಸಜೀವ ದಹನ


ವಿಮಾನ ಪತನವಾಗಿರುವುದು.

ಮುಂಬೈ, ಜ.28– ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ವಿಮಾನ ಅಪಘಾತದಲ್ಲಿ ದುರ್ಮರಣಕ್ಕೀಡಾಗಿದ್ದಾರೆ. ಇವರು ಪ್ರಯಾಣಿಸುತ್ತಿದ್ದ ವಿಮಾನ ಪುಣೆಯ ಬಾರಾಮತಿಯಲ್ಲಿ ಪತನವಾಗಿದೆ. ಇವರೊಂದಿಗೆ ಇನ್ನೂ ನಾಲ್ವರು ಸಾವಿಗೀಡಾಗಿದ್ದಾರೆ.

ಫೆಬ್ರವರಿ 5ರಂದು ರಾಜ್ಯದಲ್ಲಿ ನಡೆಯಲಿರುವ ಜಿಲ್ಲಾ ಪಂಚಾಯತ್ ಚುನಾವಣೆಯ ಅಂಗವಾಗಿ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಲು ಅಜಿತ್ ಪವಾರ್ ಇಂದು ಬೆಳಗ್ಗೆ ಮುಂಬೈನಿಂದ ಬಾರಾಮತಿಗೆ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ವಿಮಾನವು ಇಂದು ಬೆಳಗ್ಗೆ 8.10ಕ್ಕೆ ಮುಂಬೈನ ಛತ್ರಪತಿ ಶಿವಾಜಿ ಟರ್ಮಿನಲ್‌ನಿಂದ ಟೇಕಾಫ್ ಆಗಿದೆ. ಬಳಿಕ 35 ನಿಮಿಷಗಳಲ್ಲಿ ಅಂದರೆ 8.45ಕ್ಕೆ ರಾಡಾರ್ ಸಂಪರ್ಕ ಕಳೆದುಕೊಂಡಿದೆ. ಪೈಲಟ್‌ಗೆ ರನ್‌ವೇ ಸ್ಪಷ್ಟವಾಗಿ ಕಾಣಿಸದೆ ವಿಮಾನವು ಆರಂಭದಲ್ಲಿ ಒಂದು ಸುತ್ತು ಹಾರಾಟ ನಡೆಸಿದ ನಂತರವೂ ರನ್‌ವೇ ಅಸ್ಪಷ್ಟವಾಗಿ ಕಾಣಿಸಿದೆ. ಪೈಲಟ್ ಲ್ಯಾಂಡಿಂಗ್‌ಗೆ ಯತ್ನಿಸಿದ್ದಾರೆ. ಆದರೆ, ಲ್ಯಾಂಡಿಂಗ್ ಕ್ಲಿಯರೆನ್ಸ್ ಪಡೆಯಲು ಸಾಧ್ಯವಾಗಿಲ್ಲ. ಮತ್ತೊಮ್ಮೆ ಲ್ಯಾಂಡಿಂಗ್ ಪ್ರಯತ್ನದಲ್ಲಿದ್ದಾಗ ದುರಂತ ಸಂಭವಿಸಿದೆ ಎಂದು ವಿಮಾನಯಾನ ಸಚಿವಾಲಯದ ಅಧಿಕೃತ ಪ್ರಕಟಣೆ ತಿಳಿಸಿದೆ.

ಅಜಿತ್ ಪವಾರ್ ಪ್ರಯಾಣಿಸುತ್ತಿದ್ದ ಲಿಯರ್ ಜೆಟ್–45ಎಕ್ಸ್‌ಆರ್ (ವಿಟಿ–ಎಸ್‌ಎಸ್‌ಕೆ) ವಿಮಾನವು ಉನ್ನತ ಕಾರ್ಯಕ್ಷಮತೆ ಹೊಂದಿದ್ದು ಸೂಪರ್ ಲೈಟ್ ಜೆಟ್ ಆಗಿದೆ. ಅದು, ವೇಗ, ಇಂಧನ ದಕ್ಷತೆ ಅಧಿಕ ಎತ್ತರದ ಸಾಮರ್ಥ್ಯಗಳಿಗೆ ಹೆಸರುವಾಸಿಯಾಗಿದೆ. ಜೊತೆಗೆ ಅನುಭವಿ ಪೈಲಟ್‌ಗಳಿದ್ದರೂ ವಿಮಾನ ಅಪಘಾತ ಸಂಭವಿಸಿರುವುದಕ್ಕೆ ಆಶ್ಚರ್ಯ ವ್ಯಕ್ತವಾಗಿದೆ.


ಅಜಿತ್ ಪವಾರ್

ವಿಮಾನ ಪತನಗೊಳ್ಳುತ್ತಿದ್ದಂತೆ ಬೆಂಕಿ ಹೊತ್ತಿಕೊಂಡಿದೆ. ಈ ಜ್ವಾಲೆಯಲ್ಲಿ ಐವರು ಸಜೀವ ದಹನವಾಗಿದ್ದಾರೆ. ಒಂದು ಹಂತದಲ್ಲಿ ದೇಹಗಳನ್ನು ಪತ್ತೆಹಚ್ಚುವುದು ಕಷ್ಟಸಾಧ್ಯವಾಗಿತ್ತು. ಡಿಎನ್‌ಎ ಪರೀಕ್ಷೆಗಾಗಿ ತಯಾರಿ ನಡೆದಿತ್ತು ಆದರೆ, ಅಜಿತ್ ಪವಾರ್ ಅವರ ಕೈಯ್ಯಲ್ಲಿದ್ದ ಕೈಗಡಿಯಾರದಿಂದ ಅವರನ್ನು ■6ನೇ ಪುಟಕ್ಕೆ

ಮುಡಾ ಹಗರಣ: ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ನಿರಾಳ

ಲೋಕಾಯುಕ್ತ ಸಲ್ಲಿಸಿದ್ದ 'ಬಿ' ರಿಪೋರ್ಟ್ ಪುರಸ್ಕರಿಸಿದ ಕೋರ್ಟ್


ಪಾರ್ವತಿ



ಸಿದ್ದರಾಮಯ್ಯ

ಬೆಂಗಳೂರು: ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಅವರ ಕುಟುಂಬಕ್ಕೆ ಬಿಗ್ ರಿಲೀಫ್ ಸಿಕ್ಕಿದ್ದು ಲೋಕಾಯುಕ್ತ ಸಲ್ಲಿಸಿದ ಬಿ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಪುರಸ್ಕರಿಸಿದೆ. ಅದರಂತೆ ಸಿದ್ದರಾಮಯ್ಯ, ಪತ್ನಿ ಪಾರ್ವತಿ, ಬಾಮೈದ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಜಮೀನು ಮಾಲೀಕ ದೇವರಾಜುಗೆ ಬಿಗ್ ರಿಲೀಫ್ ಸಿಕ್ಕಿದೆ. ಈ ನಾಲ್ವರ ಕುರಿತಂತೆ ಲೋಕಾಯುಕ್ತ ಸಲ್ಲಿಸಿದ್ದ ಬಿ ರಿಪೋರ್ಟ್ ಅನ್ನು ಕೋರ್ಟ್ ಪುರಸ್ಕರಿಸಿದೆ. ಇನ್ನು ಉಳಿದವರ ವಿರುದ್ಧ ತನಿಖೆ ನಡೆಸಲು ಕೋರ್ಟ್ ಆದೇಶಿಸಿದೆ.

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ, ಪತ್ನಿ ಪಾರ್ವತಿ ಸೇರಿ ನಾಲ್ವರ ವಿರುದ್ಧ ಲೋಕಾಯುಕ್ತ ನೀಡಿದ್ದ ಕ್ಲೀನ್‌ಚಿಟ್ ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ವಜಾ ಮಾಡಿದೆ. ಲೋಕಾಯುಕ್ತ ಪೊಲೀಸರ ಬಿ–ರಿಪೋರ್ಟ್ ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಜನಪ್ರತಿನಿಧಿಗಳ ■6ನೇ ಪುಟಕ್ಕೆ


ಕುವೆಂಪು ಉದಯರವಿ ನಿವಾಸ ರಾಷ್ಟ್ರೀಯ ಸ್ಮಾರಕವಾಗಿಸುವ ಸಂಬಂಧ ಶೀಘ್ರದಲ್ಲೇ ಸೂಕ್ತ ನಿರ್ಧಾರ

ಶಾಸಕ ಹರೀಶ್‌ಗೌಡರಿಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಭರವಸೆ


ಕುವೆಂಪು

ಮೈಸೂರು, ಜ.28(ಎಂಕೆ)– ಮೈಸೂರಿನ ವಿವಿಪುರಂನಲ್ಲಿರುವ ರಾಷ್ಟ್ರಕವಿ ಕುವೆಂಪು ಅವರ 'ಉದಯರವಿ' ನಿವಾಸ ವನ್ನು ಸ್ಮಾರಕ ಮತ್ತು ಮ್ಯೂಸಿಯಂ(ವಸ್ತು ಸಂಗ್ರಹಾಲಯ) ಆಗಿ ಅಭಿವೃದ್ಧಿ ಪಡಿಸಬೇಕೆಂಬ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್. ತಂಗಡಗಿ, ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಮೈಸೂರಿನ ವಿವಿ ಪುರಂನಲ್ಲಿರುವ ರಾಷ್ಟ್ರಕವಿ ಕುವೆಂಪು ಅವರು ವಾಸವಿದ್ದ ಉದಯರವಿ ನಿವಾಸವನ್ನು ಸ್ಮಾರಕ, ಮ್ಯೂಸಿಯಂ ಆಗಿ ಅಭಿವೃದ್ಧಿಪಡಿಸುವ ಕುರಿತು ಶಾಸಕ ಕೆ.ಹರೀಶ್‌ಗೌಡರ ಪ್ರಶ್ನೆಗೆ ಉತ್ತರಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವರು, ■6ನೇ ಪುಟಕ್ಕೆ


ಕುವೆಂಪು ಅವರ ಉದಯರವಿ ನಿವಾಸ.

ವಾಜಮಂಗಲ ಬಳಿ ಬೆಳ್ಳಂಬೆಳಿಗ್ಗೆ ಎಂಡಿಎ ಕಾರ್ಯಾಚರಣೆ
ಅನಧಿಕೃತ ಕಟ್ಟಡ ನೆಲಸಮ

ಲಕ್ಷಾಂತರ ಬೆಲೆ ಬಾಳುವ ಸಿಎ ನಿವೇಶನ ಎಂಡಿಎ ವಶಕ್ಕೆ

ಮೈಸೂರು, ಜ.28(ಆರ್‌ಕೆ)– ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಕ್ಕೆ ಸೇರಿದ ಲಕ್ಷಾಂತರ ರೂ. ಬೆಲೆಬಾಳುವ ಸಿಎ (ನಾಗರಿಕ ಸೌಲಭ್ಯ) ನಿವೇಶನದಲ್ಲಿ ಅನಧಿಕೃತವಾಗಿ ನಿರ್ಮಾಣವಾಗುತ್ತಿದ್ದ ಕಟ್ಟಡವನ್ನು ಇಂದು ಮುಂಜಾನೆ ಪ್ರಾಧಿಕಾರದ ಅಧಿಕಾರಿಗಳು ನೆಲಸಮಗೊಳಿಸಿದ್ದಾರೆ.

ಎಂಡಿಎ ಕಾರ್ಯದರ್ಶಿ ಜಾನ್ಸನ್ ಅವರ ಆದೇಶದ ಮೇರೆಗೆ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗೇಶ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಮಂಜುನಾಥ್, ಮೋಹನ್ ಕುಮಾರ್, ಸಂಪತ್ ಕುಮಾರ್, ನಗರ ಯೋಜಕ ಶಾಖೆಯ ಸಹಾಯಕ ನಿರ್ದೇಶಕ ಶ್ರೀಧರ್ ಕಿರಿಯ ಇಂಜಿನಿಯರ್ ಜಿ. ರಾಜಶೇಖರ್, ಭೂಮಾಪಕ ಹನುಮೇಗೌಡ ಹಾಗೂ ಸಿಬ್ಬಂದಿ ಬುಧವಾರ ಮುಂಜಾನೆ 5.45 ರಿಂದ ಬೆಳಿಗ್ಗೆ 8 ಗಂಟೆವರೆಗೆ ಕಾರ್ಯಾಚರಣೆ ನಡೆಸಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸಿದರು. ಈ ಸಂಬಂಧ ಜನವರಿ 27 ರಂದು ಅಧಿಕೃತ ಜ್ಞಾಪನ ಹೊರಡಿಸಿರುವ ಎಂಡಿಎ ಕಾರ್ಯದರ್ಶಿಯವರು ಮೈಸೂರು ತಾಲೂಕು, ■6ನೇ ಪುಟಕ್ಕೆ



ಕಟ್ಟಡ ನೆಲಸಮಗೊಳಿಸುತ್ತಿರುವುದು.



ಪ್ರಾಧಿಕಾರದ ಆಸ್ತಿಗಳನ್ನು ರಕ್ಷಿಸಲೆಂದೇ ಪ್ರತ್ಯೇಕ ತಂಡವನ್ನು ರಚಿಸಲಾಗಿತ್ತು. ಅದಕ್ಕೆ ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಿ, ಜವಾಬ್ದಾರಿ ನೀಡಿದ್ದು ನಿಜ. ಆದರೆ ಅವರಿಗೆ ತಮ್ಮ ದೈನಂದಿನ ಕೆಲಸವೂ ಇರುವುದರಿಂದ ಒತ್ತುವರಿ ಪತ್ತೆ ಮಾಡಿ ತೆರವುಗೊಳಿಸುವುದು ಕಷ್ಟವಾಗಿದೆ. ಹಾಗಾಗಿ ನಿವೃತ್ತ ಪೊಲೀಸ್ ಅಧಿಕಾರಿಗಳನ್ನೊಳಗೊಂಡ ಪ್ರತ್ಯೇಕ ತಂಡವನ್ನು ರಚಿಸಲು ಇತ್ತೀಚೆಗೆ ನಡೆದ ಪ್ರಾಧಿಕಾರದ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಶೀಘ್ರ ಪ್ರತ್ಯೇಕ ತಂಡ ರಚಿಸಿ, ಆಸ್ತಿಗಳನ್ನು ರಕ್ಷಿಸುವ ಕಾರ್ಯಾಚರಣೆ ಮಾಡಲಾಗುವುದು. - **ಕೆ.ಆರ್. ರಕ್ಷಿತ್**, ಎಂಡಿಎ ಕಮೀಷನರ್.

ಕಂಡವರ ಪಾಲಾಗುತ್ತಿವೆ ಎಂಡಿಎ ಆಸ್ತಿಗಳು

ಮೈಸೂರು, ಜ.28(ಆರ್‌ಕೆ)– ಎಂಡಿಎಯಿಂದ ಕೆಲವು ವಸತಿ ಬಡಾವಣೆಗಳನ್ನು, ಮೈಸೂರು ಮಹಾನಗರ ಪಾಲಿಕೆ ಹಾಗೂ ಇನ್ನಿತರೆ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಿರುವುದರಿಂದ ಪ್ರಾಧಿಕಾರಕ್ಕೆ ಸೇರಿದ ಕೆಲವು ಆಸ್ತಿಗಳನ್ನು ಕಂಡ–ಕಂಡವರು ಕಬಳಿಸುತ್ತಿದ್ದಾರೆ.

ಒಮ್ಮೆ ಹಸ್ತಾಂತರ ಮಾಡಿದ ಬಳಿಕ ಪಾಲಿಕೆ, ನಗರ ಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯ್ತಿ ಅಧಿಕಾರಿಗಳು ಆ ಆಸ್ತಿಗಳನ್ನು ಸಂರಕ್ಷಿಸಬೇಕು. ಆದರೆ ಅವರಿಗೆ ಎಂಡಿಎ ಆಸ್ತಿ ಯಾವುದು, ಸರ್ಕಾರಿ ಜಾಗ ಯಾವುದು ಎಂಬುದರ ಅರಿವೇ ಇಲ್ಲ. ಅವರು ಅದನ್ನು ಗಮನಿಸುವುದೂ ಇಲ್ಲ. ಸಿಎ ನಿವೇಶನದಲ್ಲಿ ಬೇರೆ ಯಾರಾದರೂ ಕಟ್ಟಡ ನಿರ್ಮಿಸುತ್ತಿದ್ದರೆ, ಅದರ ಮಾಹಿತಿ ಪಡೆದುಗೊಳ್ಳುವ ಜವಾಬ್ದಾರಿ ಹೊತ್ತ ಅಧಿಕಾರಿಗಳು ಮೌನ ವಹಿಸುತ್ತಿರುವುದು ಒತ್ತುವರಿಗೆ ಪ್ರಮುಖ ಕಾರಣವಾಗಿದೆ. ಸರ್ಕಾರಿ ಆಸ್ತಿಗಳನ್ನು ರಕ್ಷಿಸುವ ಮಹತ್ತರ ಜವಾಬ್ದಾರಿ ಹೊತ್ತಿರುವ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದಲ್ಲಿ ಅನಧಿಕೃತ ಕಟ್ಟಡಗಳು ತಲೆ ಎತ್ತಿ ಮುಂದೆ ಸರ್ಕಾರಕ್ಕೆ ತಲೆನೋವು ಉಂಟಾಗಲಿದೆ. ಆದ್ದರಿಂದ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮೈಸೂರು ಮಿತ್ರ ಗುರುವಾರ 29 ಜನವರಿ 2026

ದೇವಗಹಳ್ಳಿಯಲ್ಲಿ 32 ಲಕ್ಷ ವೆಚ್ಚದ ವಿವಿಧ ಅಭಿವೃದ್ಧಿ ಕಾರ್ಯ ಉದ್ಘಾಟಿಸಿದ ಶಾಸಕ ಜಿ.ಟಿ. ದೇವೇಗೌಡ



ಮೈಸೂರು ತಾಲೂಕಿನ ಜಯಪುರ ಹೋಬಳಿಯ ದೇವಗಹಳ್ಳಿ ಗ್ರಾಮಸ್ಥರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿದರು.

ಮೈಸೂರು: ತಾಲೂಕಿನ ಜಯಪುರ ಹೋಬಳಿಯ ದೇವಗಹಳ್ಳಿ ಗ್ರಾಮದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು 32 ಲಕ್ಷ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಬುಧವಾರ ಉದ್ಘಾಟಿಸಿದರು.

10 ಲಕ್ಷ ರೂ. ವೆಚ್ಚದ ಶುದ್ಧ ಕುಡಿಯುವ ನೀರಿನ ಘಟಕ, 12 ಲಕ್ಷ ವೆಚ್ಚದ ಸರ್ಕಾರಿ ಶಾಲೆ ಕೊಠಡಿ ನಿರ್ಮಾಣ, 10 ಲಕ್ಷ ವೆಚ್ಚದ ಅಂಗನವಾಡಿ ಕಟ್ಟಡಗಳನ್ನು ಉದ್ಘಾಟಿಸಿದರು. ಗ್ರಾಮದ ವಿಘ್ನೇಶ್ವರ ದೇವಾಲಯ ನಿರ್ಮಾಣಕ್ಕೆ ಭೂಮಿ ಪೂಜೆ ಮಾಡಿದರು. ನೂತನ ಕಟ್ಟಡಗಳನ್ನು ಉದ್ಘಾಟಿಸಿದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಕೃಷ್ಣ, ಗೋಪಾಲಪುರ ಗ್ರಾಪಂ ಅಧ್ಯಕ್ಷ ರಾಮಲಿಂಗಚಾರಿ, ಮಾಜಿ ಅಧ್ಯಕ್ಷ ಜಿ.ಕೆ. ಬಸವೇಗೌಡ, ಗ್ರಾಪಂ ಸದಸ್ಯರಾದ ದೇವಗಹಳ್ಳಿ ಸಿದ್ದಯ್ಯ, ಶಿಲ್ಪ, ಮಹದೇವ್ರು, ಮಾದಪ್ಪ, ದೇವಗಹಳ್ಳಿ ಡೇರಿ ಅಧ್ಯಕ್ಷ ರಾಜಶೇಖರ ಮೂರ್ತಿ, ಮುಖಂಡರಾದ ಶಿವಣ್ಣ, ಸಂತೋಷ್, ವೀರಾಜಪ್ಪ, ಬಸವಣ್ಣ, ಗ್ರಾಮಸ್ಥರಾದ ವೆಂಕಟೇಶ್, ಕೆಂಚಯ್ಯ, ಡಿ.ವಿ.ಲಿಂಗರಾಜು, ಮಹದೇವಸ್ವಾಮಿ, ಸುರೇಶ, ಪ್ರಜ್ವಲ್, ಯೋಗಿ, ಮನು, ಮಂಜು, ವಿಜಯ್, ಗುರು, ವಿನಯ್, ಅಭಿ, ಸಂಜಯ್, ಪ್ರಜ್ಞ, ಅವಿನಾಶ್, ದೊರೆ ರಾಜು, ಕೆಂಚಪ್ಪ, ರಾಮಚಂದ್ರ, ಸೋಮಣ್ಣ, ಸುಜೇಂದ್ರ, ಬೋರಯ್ಯ, ಶಿವರಾಜು, ಪುನೀತ್ ಹಾಜರಿದ್ದರು.

ಕನಿಷ್ಟ ಪಿಂಚಣಿ 7,500 ರೂ.ಗೆ ಹೆಚ್ಚಿಸಲು ಆಗ್ರಹ

ಸಂಸದ ಯದುವೀರ್ ಕಚೇರಿ ಬಳಿ ಪ್ರತಿಭಟನೆ



ಕೇಂದ್ರ ಬಜೆಟ್‌ನಲ್ಲಿ ಕನಿಷ್ಠ ಪಿಂಚಣಿಯನ್ನು ತಿಂಗಳಿಗೆ 7,500 ಹೆಚ್ಚಳ ಮಾಡಬೇಕೆಂದು ಒತ್ತಾಯಿಸಿ ಇಪಿಎಸ್–95 ರಾಷ್ಟ್ರೀಯ ಸಂಘರ್ಷ ಸಮಿತಿ ವತಿಯಿಂದ ಕಾಡಾ ಕಚೇರಿಯಲ್ಲಿರುವ ಸಂಸದರ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.28(ಜಿಎ)–ಮುಂಬರುವ ಕೇಂದ್ರ ಬಜೆಟ್‌ನಲ್ಲಿ ಕನಿಷ್ಠ ಪಿಂಚಣಿಯನ್ನು ತಿಂಗಳಿಗೆ 7,500 ಹಾಗೂ ಬೆಲೆ ಏರಿಕೆ ಪರಿಹಾರ ಸಹಿತ ಹೆಚ್ಚಳ ಮಾಡಬೇಕೆಂದು ಒತ್ತಾಯಿಸಿ ಇಪಿಎಸ್–95 ರಾಷ್ಟ್ರೀಯ ಸಂಘರ್ಷ ಸಮಿತಿಯಿಂದ ಕಾಡಾ ಕಚೇರಿಯಲ್ಲಿರುವ ಸಂಸದ ಯದುವೀರ್ ಒಡೆಯರ್ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯಸಭೆಯಲ್ಲಿ 2013ರಲ್ಲಿ ಸಲ್ಲಿಸಲಾದ 'ಕೋಶಿಯಾರಿ ಸಮಿತಿ'ಯ ಶಿಫಾರಸುಗಳು ಇದುವರೆಗೂ ಅಂಗೀಕಾರವಾಗಿಲ್ಲ. ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ 16ನೇ, 17ನೇ ಹಾಗೂ 18ನೇ ಲೋಕಸಭಾ ಅವಧಿಗಳಲ್ಲಿಯೂ ತಪ್ಪು ಮತ್ತು ಅಪೂರ್ಣ ಮಾಹಿತಿಯನ್ನು ಸಂಸತ್ತಿಗೆ ಒದಗಿಸಿದೆ. ಸಚಿವಾಲಯ ಇಪಿಎಸ್–95 ನಿಧಿಯಲ್ಲಿ ಕೊರತೆ ಇದೆ ಎಂಬಂತೆ ವರದಿಗಳನ್ನು ಮುಂದಿಟ್ಟಿದ್ದರೂ, 1995ರಿಂದಲೂ ಸದಾ ಮಿತವ್ಯಯದಲ್ಲೇ ಇದೆ. ಇಪಿಎಫ್‌ಒ 2023–24ರ ವಾರ್ಷಿಕ ವರದಿಯಲ್ಲಿಯೂ ಕೊರತೆ ಅಂದಾಜು ಇದ್ದರೂ, ನಿಧಿಗೆ ಇದುವರೆಗೆ ನಗದು ಹರಿವಿನ ಸಮಸ್ಯೆ ಎದುರಾಗಿಲ್ಲ. ಆದರೆ, ಕೇಂದ್ರ ಸರ್ಕಾರ ಪಿಂಚಣಿ ನಿಧಿ ಕೊರತೆಯಿದೆ ಎಂದು ಸುಳ್ಳು ಮಾಹಿತಿ ನೀಡುತ್ತಿದೆ ಎಂದು ಕಿಡಿಕಾರಿದರು.

1996ರಲ್ಲಿ ಕಾರ್ಮಿಕ ಸಚಿವಾಲಯ ಸೇವಾವಧಿಗೆ ಅನುಗುಣವಾಗಿ ನಿಗದಿಪಡಿಸಿರುವ ಪಿಂಚಣಿ ಪ್ರಮಾಣವನ್ನು 81 ಲಕ್ಷ ಇಪಿಎಸ್ ಪಿಂಚಣಿದಾರರಿಗೆ ಅನ್ವಯಿಸಲಾಗಿಲ್ಲ. ಬಹುತೇಕ ಪಿಂಚಣಿದಾರರು 30 ವರ್ಷಕ್ಕಿಂತ ಹೆಚ್ಚಿನ ಸೇವಾವಧಿ ಪೂರ್ಣಗೊಳಿಸಿದ್ದು, ನಿಧಿಗೆ ಲಕ್ಷಾಂತರ ರೂಪಾಯಿ ಕೊಡುಗೆ ನೀಡಿದರೂ, ಪ್ರಸ್ತುತ ಪಡೆಯುತ್ತಿರುವ ಪಿಂಚಣಿ ಅತ್ಯಂತ ಅಲ್ಪವಾಗಿದೆ. ಇಪಿಎಸ್–95 ಒಂದು ಸಾಮಾಜಿಕ ಕಲ್ಯಾಣ ಯೋಜನೆ ಆಗಿರುವುದರಿಂದ ಕೇಂದ್ರ ಸರ್ಕಾರ ಹೆಚ್ಚಿನ ಕೊಡುಗೆ ನೀಡುವ ಮೂಲಕ ನಿಧಿಯ ಸ್ಥಿರತೆ ಮತ್ತು ವೃದ್ಧಾಪ್ಯ ಪಿಂಚಣಿದಾರರ ಜೀವನ ಭದ್ರತೆ ಖಚಿತಪಡಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷಷಡ್ಷರಿ, ಸಂಚಾಲಕ ಸೈಯದ್ ಮೊಹಮ್ಮದ್, ಶ್ರೀಕಂಠ ಪ್ರಸಾದ್, ಚಾಮರಾಜನಗರ ಜಿಲ್ಲಾಧ್ಯಕ್ಷ ಮಹದೇವು, ವಿವಿಧ ಕಾರ್ಖಾನೆಗಳ ನಿವೃತ್ತ ನೌಕರರು ಪಾಲ್ಗೊಂಡಿದ್ದರು.

> "ಕನಿಷ್ಠ ಪಿಂಚಣಿಯನ್ನು 7,500ಕ್ಕೆ ಹೆಚ್ಚಿಸಿ, ಬೆಲೆ ಏರಿಕೆ ಪರಿಹಾರ ಸೇರಿಸಬೇಕು. 2013ರ 'ಕೋಶಿಯಾರಿ ಸಮಿತಿ'ಯ ಶಿಫಾರಸುಗಳಿಂದಲೂ ನಿರೀಕ್ಷೆಯಲ್ಲಿರುವ 81 ಲಕ್ಷ ಪಿಂಚಣಿದಾರರಿಗೆ ನ್ಯಾಯ ಒದಗಿಸಬೇಕು. ಮುಂಬರುವ ಬಜೆಟ್ ಅಧಿವೇಶನದಲ್ಲಿ ಸರ್ಕಾರ ಪಿಂಚಣಿದಾರರ ಬೇಡಿಕೆಗೆ ಸ್ಪಂದಿಸಬೇಕು.
> –ಪ್ರತಿಭಟನಾಕಾರರು

ಮೈಸೂರಲ್ಲಿಂದು ವಿಶೇಷಚೇತನರಿಗೆ ಉದ್ಯೋಗ ಮೇಳ

ನಾಳೆಯಿಂದ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ, ಓಪನ್ ಡೇ ಸಮಾವೇಷನಾತ್ಮಕ ಕಾರ್ಯಕ್ರಮ



ಸುದ್ದಿಗೋಷ್ಠಿಯಲ್ಲಿ ಎಪಿಡಿ ನಿರ್ದೇಶಕ ಮಲ್ಲಿಕಾರ್ಜುನಯ್ಯ ಮಾತನಾಡಿದರು.

ಮೈಸೂರು,ಜ.28(ಜಿಎ)–ಮೈಸೂರಿನ ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ (ಕೆಎಸ್‌ಟಿಎ) ಹಾಗೂ ದಿ ಅಸೋಸಿಯೇಷನ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ಸಹಯೋಗದಲ್ಲಿ ವಿಶೇಷ ಚೇತನರಿಗೆ ಉದ್ಯೋಗ ಮೇಳ, ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಮತ್ತು ಓಪನ್ ಡೇ ಅನ್ನು ಜ.29ರಿಂದ 3 ದಿನಗಳ ಸಮಾವೇಷನಾತ್ಮಕ ಕಾರ್ಯಕ್ರಮವನ್ನು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಬಿ.ಇಳಂಗೋವನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.29ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4ಗಂಟೆಯವರೆಗೆ ವಿಶೇಷ ಚೇತನರಿಗಾಗಿ ಒಂದು ದಿನದ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ವಿಶೇಷ ಚೇತನ ಅಭ್ಯರ್ಥಿಗಳಿಗೆ ಉದ್ಯೋಗದಾತರೊಂದಿಗೆ ಸಂವಹನ ನಡೆಸಿ ಉದ್ಯೋಗಾವಕಾಶಗಳನ್ನು ಅನ್ವೇಷಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದರು.

ಜ.30, 31ರಂದು ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಮತ್ತು ಓಪನ್ ಡೇ ನಡೆಯಲಿದ್ದು, ರಾಜ್ಯ ವಿವಿಧ ಜಿಲ್ಲೆಗಳ ವಿಶೇಷ ಚೇತನ ವಿದ್ಯಾರ್ಥಿಗಳು ಪ್ರಸ್ತುತಪಡಿಸುವ 50ಕ್ಕೂ ಹೆಚ್ಚಿನ ವಿಜ್ಞಾನ ಮಾದರಿಗಳು ಪ್ರದರ್ಶನಗೊಳ್ಳಲಿವೆ. ಅತ್ಯುತ್ತಮ ಮಾದರಿಗಳಿಗೆ ನಗದು ಬಹುಮಾನ, ಪ್ರಮಾಣ ಪತ್ರ ಹಾಗೂ ಸ್ಮರಣಿಕೆಗಳನ್ನು ನೀಡಲಾಗುತ್ತಿದೆ. ಭಾಗವಹಿಸುವ ಎಲ್ಲ ವಿದ್ಯಾರ್ಥಿಗಳಿಗೂ ಪ್ರಮಾಣ ಪತ್ರ ವಿತರಿಸಲಾಗುತ್ತದೆ. ಓಪನ್ ಡೇ ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಮನರಂಜನಾ ಕ್ರೀಡೆಗಳು ಹಾಗೂ ಆಹಾರ ಮೇಳ ಆಯೋಜಿಸಲಾಗಿದೆ ಎಂದರು.

ಈ ಮೂರು ದಿನಗಳ ಕಾರ್ಯಕ್ರಮಕ್ಕೆ ಸುಮಾರು 2,500ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಉದ್ಯೋಗದಾತರು, ಪಾಲಿಟೆಕ್ನಿಕ್‌ನ ಹಳೆಯ ವಿದ್ಯಾರ್ಥಿಗಳು, ಪಾಲಕರು, ಸಾರ್ವಜನಿಕರು ಭಾಗವಹಿಸುವ ನಿರೀಕ್ಷೆಯಿದೆ. ಮಾಹಿತಿಗಾಗಿ 8050709919, 9448826306 ಸಂಪರ್ಕಿಸಿ ಎಂದರು.

ವಿಜ್ಞಾನ ವಸ್ತುಪ್ರದರ್ಶನ ಮತ್ತು ಓಪನ್ ಡೇ ಅನ್ನು ಜ.30ರಂದು ಬೆಳಗ್ಗೆ 11 ಗಂಟೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ದೇಶಕ ಬಿ.ಸದಾಶಿವ ಪ್ರಭು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಎಚ್‌ಇಆರ್ ನಿರ್ದೇಶಕ ಡಾ.ಬಿ.ಸುರೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಆಗಮಿಸಲಿದ್ದಾರೆ. ಜ.31ರಂದು ಸಂಜೆ 4ಗಂಟೆಗೆ ಪಾಲಿಟೆಕ್ನಿಕ್‌ನ ಆವರಣದಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಜಂಟಿ ನಿರ್ದೇಶಕ ಡಾ.ಕೆ.ಜಿ.ಬಸವ ಕುಮಾರ್, ಮೈಸೂರು ಡೆಫ್ ಅಸೋಸಿಯೇಷನ್ ಅಧ್ಯಕ್ಷ ಲಯನ್ ಎಸ್.ಮೂರ್ತಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎನ್.ಎಂ.ಶಿವ ಕುಮಾರಸ್ವಾಮಿ, ಕೆ.ಕುಶಾಲ್, ಮಲ್ಲಿಕಾರ್ಜುನಯ್ಯ, ಬಸವರಾಜು ಇದ್ದರು.

ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟವಾಗಿ ಉಳಿಸಿಕೊಳ್ಳಲು

ನಾಳೆ ಮೈಸೂರಲ್ಲಿ 'ಸೌಹಾರ್ದ ನಡಿಗೆ'

ಮೈಸೂರು,ಜ.28(ಜಿಎ)–ರಾಷ್ಟ್ರಕವಿ ಕುವೆಂಪು ಅವರು ಬಣ್ಣಿಸಿದಂತೆ ಕರ್ನಾಟಕ ಮತ್ತು ದೇಶವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸೌಹಾರ್ದ ಪರ ಸಂದೇಶದೊಂದಿಗೆ ನಾವೆಲ್ಲಾ ಮತ್ತೊಮ್ಮೆ ಒಂದುಗೂಡಬೇಕಿದೆ. ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿಯವರು ಹುತಾತ್ಮರಾದ ಜ.30ರಂದು ಮೈಸೂರಿನಲ್ಲಿ 'ಸೌಹಾರ್ದ ನಡಿಗೆ' ಏರ್ಪಡಿಸಲಾಗಿದೆ ಎಂದು ಪ್ರಗತಿಪರ ಚಿಂತಕರಾದ ಪ್ರೊ.ಕಾಳಚನ್ನೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಗತಿಪರ ಸಂಘಟನೆಗಳು, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ಕೇಂದ್ರ ಕಾರ್ಮಿಕ ಸಂಘಟನೆಗಳು, ದಲಿತ ಸಂಘರ್ಷ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಭಾರತ ವಿದ್ಯಾರ್ಥಿ ಫೆಡರೇಷನ್, ಇನ್ಸಾಫ್ ಮೈಸೂರು, ಕನ್ನಡ ಪರ ಸಂಘಟನೆಗಳು, ಸಮುದಾಯ ಮೈಸೂರು, ಹವ್ಯಾಸಿ ರಂಗ ತಂಡಗಳು ನಡಿಗೆಗೆ ಸಾಥ್ ನೀಡಿವೆ ಎಂದರು.

ಅಂದು ಮಧ್ಯಾಹ್ನ 3 ಗಂಟೆಗೆ ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್‌ನಿಂದ ಸೌಹಾರ್ದ ನಡಿಗೆ ಹೊರಡಲಿದ್ದು, ಅಝಾಮ್ ಮಸೀದಿ, ಅಶೋಕ ರಸ್ತೆಯ ಮೂಲಕ ಪುರಭವನದ ಅಂಬೇಡ್ಕರ್ ಪ್ರತಿಮೆ ಮುಂದೆ ಸಾಗಿ ಗಾಂಧಿ ಚೌಕದಲ್ಲಿರುವ ಗಾಂಧಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಗುವುದು. ನಂತರ, ಚಿಕ್ಕಗಡಿಯಾರದ ಬಳಿ ಸೌಹಾರ್ದ ಗೀತಗಾಯನ ನಡೆಯಲಿದೆ. ನಂತರ ಗಣ್ಯರು ಸೌಹಾರ್ದ ಪರ ಮಾತುಗಳು ಜೊತೆಗೂಡಲಿವೆ. ಈ ಸೌಹಾರ್ದ ಪರ ಕಾರ್ಯಕ್ರಮಗಳಿಗೆ ಕೈಜೋಡಿಸಿ ಎಲ್ಲರೂ ಪಾಲ್ಗೊಳ್ಳಿ ಎಂದು ಕರೆ ನೀಡಿದರು.

ಜಾತಿ ಮತಗಳ ಹೆಸರಿನಲ್ಲಿ ಸಮಾಜದ ಶಾಂತಿ–ಸಹಬಾಳ್ವೆಯನ್ನು ಕದಡುವ ಸಂಕುಚಿತವಾದಿ ವಿಛಿದ್ರಕಾರಿ ಶಕ್ತಿಗಳು ಸಮಾಜದಲ್ಲಿ ಮೇಲುಗೈ ಸಾಧಿಸುತ್ತಿರುವ ಪರಿಸ್ಥಿತಿಯಲ್ಲಿ ಭಾರತ ಇಂದು ಸಿಲುಕಿದೆ. ಹಸಿವು, ಅನಕ್ಷರತೆ, ಬಡತನ, ನಿರುದ್ಯೋಗ ಮುಂತಾದ ಬದುಕಿನ ಬವಣೆಗಳನ್ನು ಬಗೆಹರಿಸಿಕೊಂಡು ಹೋಗಲು ಹೆಣಗುತ್ತಿರುವ ಜನರ ಐಕ್ಯತೆಯನ್ನು ಒಡೆಯುವುದೇ ನಿತ್ಯ ಕೃತ್ಯಗಳನ್ನಾಗಿಸಿಕೊಂಡ ಹಲವು ಶಕ್ತಿಗಳು ಅವಿರತವಾಗಿ ಕೆಲಸ ಮಾಡುತ್ತಿವೆ. ಹಿಂಸೆಯ ಮಾತುಗಳು ಎಲ್ಲೆಲ್ಲೂ ಮೆರೆಯುತ್ತಿವೆ. ದ್ವೇಷದ ಕಿಡಿಗಳು ನಿರಂತರ ಸಿಡಿಯುತ್ತಿವೆ. ವಿವೇಕ ಹೀನ ಮತಾಂಧತೆ ಸಮಾಜವನ್ನು ಆವರಿಸಿಕೊಳ್ಳುತ್ತಿದೆ.. ಇಂತಹ ಸನ್ನಿವೇಶದಲ್ಲಿ ಮತ್ತೊಮ್ಮೆ ಜನವರಿ 30ರ 'ಹುತಾತ್ಮ ದಿನ' ಹತ್ತಿರ ಬಂದಿದೆ. ನಮ್ಮ ದೇಶ ಭಾರತ ಮತ್ತೆ ಅಂತಹುದೇ ವಿಭಜನೆಯ ದಳ್ಳುರಿಗೆ ಬಲಿಯಾಗಬಾರದು ಎಂದರು. ಸುದ್ದಿಗೋಷ್ಠಿಯಲ್ಲಿ ಜಗದೀಶ್ ಸೂರ್ಯ, ನೆಲೆ ಗೋಪಾಲ ಕೃಷ್ಣ, ಸವಿತ ಪ.ಮಲ್ಲೇಶ್, ನೂರ್‌ಮರ್ಚೆಂಟ್, ವರಳ್ಳಿ ಆನಂದ್, ಗಜೇಂದ್ರ, ಅಭಿ ಉಪಸ್ಥಿತರಿದ್ದರು.

ಕಾರ್ಮಿಕ ಕೋಡ್, ವಿಬಿ ಜಿ ರಾಮ್ ಜಿ ಕಾಯ್ದೆ ರದ್ದಿಗೆ ಆಗ್ರಹಿಸಿ ಫೆ.12, ಮೈಸೂರಲ್ಲಿ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ, ಸ್ವಯಂಪ್ರೇರಿತ ಬಂದ್‌ಗೆ ಕರೆ

ಮೈಸೂರು,ಜ.28(ಜಿಎ)–ಕಾರ್ಮಿಕ 4 ಕೋಡ್‌ಗಳನ್ನು ರದ್ದುಪಡಿಸಬೇಕು, ವಿಬಿ ಜಿ ರಾಮ್ ಜಿ ಕಾಯ್ದೆ ಹಿಂಪಡೆಯಬೇಕು ಎಂಬ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ವತಿಯಿಂದ ಫೆ.12ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಹಾಗೂ ಸ್ವಯಂಪ್ರೇರಿತ ಬಂದ್‌ಗೆ ಕರೆ ನೀಡಿವೆ. ಹೀಗಾಗಿ ನಗರದ ಜನತೆಯೂ ಬೆಂಬಲಿಸಬೇಕೆಂದು ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಎನ್.ಕೆ.ಬಾಲಾಜಿರಾವ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮುಷ್ಕರ ಹಾಗೂ ಸ್ವಯಂಪ್ರೇರಿತ ಬಂದ್‌ಗೆ ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು, ಸ್ವತಂತ್ರ ಒಕ್ಕೂಟಗಳಾದ ನೌಕರರ ಸಂಘಗಳು ಜಂಟಿಯಾಗಿ ಕರೆ ನೀಡಿವೆ ಎಂದರು. ಖಚಿತ ಮತ್ತು ಉತ್ತಮ ಉದ್ಯೋಗ ಹಾಗೂ ಕನಿಷ್ಠ ಕೂಲಿ ನೀಡಬೇಕು, ಸಂಘಟಿಸುವ ಹಕ್ಕು ಮತ್ತು ಸಾಮಾಜಿಕ ಚೌಕಾಶಿ ಹಕ್ಕು ಇರಬೇಕು, ರೈತರ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ನೀಡಬೇಕು, ಎಲ್ಲರಿಗೂ ಸಾಮಾಜಿಕ ಭದ್ರತೆ ಮತ್ತು ನಿವೃತ್ತಿ ವೇತನ ನೀಡಬೇಕು, ಎಲ್ಲರಿಗೂ ಆಹಾರ, ವಸತಿ, ವಿದ್ಯಾಭ್ಯಾಸ ಮತ್ತು ಆರೋಗ್ಯಕ್ಕೆ ಕ್ರಮ ಕೈಗೊಳ್ಳಬೇಕು. ಸೂಪರ್ ಶ್ರೀಮಂತರ ಮೇಲೆ ತೆರಿಗೆ ವಿಧಿಸಬೇಕೆಂದು ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ 4 ಕಾರ್ಮಿಕ ಕೋಡ್ ಸಂವಿಧಾನದಲ್ಲಿ ಒದಗಿಸಲಾದ ಜೀವನೋಪಾಯದ ವೇತನವನ್ನು ಮರೆಮಾಚಿ, ಕನಿಷ್ಠ ವೇತನದ ವೈಜ್ಞಾನಿಕ ಮಾನದಂಡವನ್ನು ಖಾತ್ರಿ ಪಡಿಸದೆ, 178 ರೂ.ಗಳ ಕೆಳಮಟ್ಟದ ವೇತನ ಜಾರಿ ಮಾಡಿದೆ. ಮುಷ್ಕರದ ನೋಟಿಸ್ ನೀಡಲು ಅನೇಕ ನಿರ್ಬಂಧ ಹಾಕಲಾಗಿದೆ. ಮುಷ್ಕರ ನಡೆಸಿದರೆ, ಸಾಮಾಜಿಕ ರಜೆ ಹಾಕಿದರೆ, ಅದನ್ನು ಅಪರಾಧ ಎಂದು ಘೋಷಿಸಬಹುದಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಎಂ.ಅಣ್ಣಪ್ಪ, ಜಿ.ಜಯರಾಂ, ಎಚ್.ಎಂ.ಬಸವರಾಜು ಉಪಸ್ಥಿತರಿದ್ದರು.

ರಾಜ್ಯಪಾಲರು, ಆರ್‌ಎಸ್‌ಎಸ್ ಕಚೇರಿ ದೂರವಾಣಿ ಕದ್ದಾಲಿಸಲಾಗುತ್ತಿದೆ...!

- ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ವಿಪಕ್ಷ ನಾಯಕ ಅಶೋಕ್
- ಕಾನೂನು ಸಚಿವ ಎಚ್.ಕೆ.ಪಾಟೀಲ್, ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗಳೇ ಇದಕ್ಕೆ ಪುಷ್ಟಿ!

ಬೆಂಗಳೂರು, ಜ.28(ಕೆಎಂಶಿ)– ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹಾಗೂ ಆರ್‌ಎಸ್‌ಎಸ್ ಕಚೇರಿಯ ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸದನದಲ್ಲಿಂದು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಲೋಕಭವನ ಮತ್ತು ಆರ್‌ಎಸ್‌ಎಸ್ ಕಚೇರಿ ದೂರವಾಣಿ ಕಾದ್ದಾಲಿಕೆ ಮಾಡಲಾಗುತ್ತಿದೆ ಎಂಬುದು ಸ್ವತಃ ಕಾನೂನು ಸಚಿವ ಎಚ್.ಕೆ.ಪಾಟೀಲ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರ ಬಾಯಿಂದಲೇ ಬಂದಿದೆ.

ಇವರದ್ದಷ್ಟೇ ಅಲ್ಲದೆ, ನನ್ನದೂ ಸೇರಿದಂತೆ ಇನ್ನೂ ಯಾರ್ಯಾರ ದೂರವಾಣಿ ಕದ್ದಾಲಿಕೆ ಮಾಡುತ್ತಿದ್ದೀರೋ ತಿಳಿಯದು. ಈ ಬಗ್ಗೆ ಉನ್ನತ ಮಟ್ಟದ ತನಿಖೆ ಆಗಬೇಕು ಎಂದು ಒತ್ತಾಯಿಸಿದರು.

ಟೆಲಿಫೋನ್ ಕದ್ದಾಲಿಕೆ ಆರೋಪದ ಮೇಲೆ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಇದೆಲ್ಲ ತಿಳಿದ ನಂತರವೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಫೋನ್ ಕದ್ದಾಲಿಕೆ ಮಾಡುತ್ತಿದೆಯೇ ಎಂದು ಖಾರವಾಗಿ ಪ್ರಶ್ನಿಸಿದರು. ಸರ್ಕಾರ ಸಿದ್ಧಪಡಿಸಿದ ಭಾಷಣ ಓದದಂತೆ ರಾಜ್ಯಪಾಲರಿಗೆ ಕೇಂದ್ರದಿಂದ ದೂರವಾಣಿ ಕರೆ ಬಂದಿತ್ತು ಎಂಬುದಾಗಿ ಕಾನೂನು ಸಚಿವ ಎಚ್.ಕೆ. ಪಾಟೀಲ್ ಹೇಳಿದ್ದಾರೆ. ಹಾಗಾದರೆ ಇವರಿಗೆ ದೂರವಾಣಿ ಕರೆ ಬಂದಿತ್ತೆಂಬುದನ್ನು ಯಾರು ಹೇಳಿದರು ಎಂದರು.

ಮಧ್ಯಪ್ರವೇಶಿಸಿದ ಸಚಿವ ಪಾಟೀಲ್, ಕೇಂದ್ರ ಗೃಹ ಸಚಿವಾಲಯದಿಂದಲೇ ರಾಜ್ಯಪಾಲರಿಗೆ ದೂರವಾಣಿ ಕರೆ ಬಂದಿದೆ ಎನ್ನುತ್ತಿದ್ದಂತೆ, ಪ್ರಿಯಾಂಕ್ ಖರ್ಗೆ, ಅಷ್ಟೇ ಅಲ್ಲ ಆರ್‌ಎಸ್‌ಎಸ್ ಕಚೇರಿಯಿಂದಲೂ ಬಂದಿದೆ ಎಂದರು. ಅಶೋಕ್ ಮಾತನಾಡಿ, ಅವರಿಗೆ ಕರೆಗಳು ಬಂದಿರುವುದು ನಿಮಗೆ ಹೇಗೆ ತಿಳಿಯಿತು. ನೀವು ಲೋಕಭವನ ಮತ್ತು ಆರ್‌ಎಸ್‌ಎಸ್ ಕಚೇರಿಗಳ ಫೋನ್ ಕದ್ದಾಲಿಕೆ ಮಾಡುತ್ತಿದ್ದೀರಿ. ಈ ಕುರಿತು ನಾವು ಆರೋಪ ಮಾಡುತ್ತಿಲ್ಲ. ನಿಮ್ಮ ಬಾಯಿಂದಲೇ ಬಂದಿದೆ. ಇದರ ತನಿಖೆ ಆಗಲೇಬೇಕು ಎಂದು ಪಟ್ಟು ಹಿಡಿದರು.


ಕದ್ದಾಲಿಕೆ ವಿಚಾರವನ್ನು ಅಶೋಕ್ ಬಲವಾಗಿ ಪ್ರತಿಪಾದಿಸುತ್ತಿದ್ದಂತೆ, ಆಡಳಿತ ಪಕ್ಷದ ಕೆಲವು ಸದಸ್ಯರು ಪ್ರತಿಭಟಿಸಿ ಗದ್ದಲ ಎಬ್ಬಿಸಿದರು. ಈ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ಜೋರಾಗುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ.ಖಾದರ್ ಕಲಾಪವನ್ನು ಭೋಜನ ವಿರಾಮಕ್ಕೆ ಮುಂದೂಡಿದರು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರ ಆಯ್ಕೆ




ಮೈಸೂರು: 2026–27ನೇ ಸಾಲಿನ ಮೈಸೂರು ಜಿಲ್ಲಾ ಬಸವಬಳಗಗಳ ಒಕ್ಕೂಟದ ಅಧ್ಯಕ್ಷರಾಗಿ ಎಂ.ಚಂದ್ರಶೇಖರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ನಡೆದ ವಿವಿಧ ವೀರಶೈವ ಲಿಂಗಾಯಿತ ಮುಖಂಡರ ಸಭೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು: ವಿ.ವಿ ಮೊಹಲ್ಲಾ ವಿಭಾಗದ ಮೇಟಗಳ್ಳಿ ವ್ಯಾಪ್ತಿಯ 11 ಕೆ.ವಿ ಕೊಠಾರಿ ವಿದ್ಯುತ್ ಮಾರ್ಗದಲ್ಲಿ ತುರ್ತು ಕಾಮಗಾರಿ ನಿಮಿತ್ತ ಜನವರಿ 29ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ತಾಲೂಕು ಕೋ–ಆಪರೇಟಿವ್ ಕೆ.ಐ.ಎ.ಡಿ.ಬಿ ಲೇಔಟ್, CIPET ಎದುರು ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರೊ.ತಿಪ್ಪೇಸ್ವಾಮಿ ನಿಧನಕ್ಕೆ ಸುತ್ತೂರು ಶ್ರೀಗಳ ಸಂತಾಪ



ಮೈಸೂರು, ಜ. 28– ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಹಿಂದಿ ಪ್ರಾಧ್ಯಾಪಕರಾಗಿದ್ದ ಪ್ರೊ.ತಿಪ್ಪೇಸ್ವಾಮಿಯವರ ಅಗಲುವಿಕೆ ವಿಷಾದದ ಸಂಗತಿ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಮೂಲತಃ ತುಮಕೂರು ಜಿಲ್ಲೆಯ ಕೊರಟಗೆರೆಯವರಾದ ಪ್ರೊ.ತಿಪ್ಪೇಸ್ವಾಮಿಯವರಿಗೆ ಮೈಸೂರು ಕರ್ಮಭೂಮಿಯಾಗಿತ್ತು. ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲ ಅವರು ಸ್ನಾತಕೋತ್ತರ ಹಿಂದಿ ವಿಭಾಗದ ಪ್ರಾಧ್ಯಾಪಕರಾಗಿದ್ದರು.

ಹಿಂದಿ ಸಾಹಿತ್ಯದಲ್ಲಿ ಅಪ್ರತಿಮ ವಿದ್ವಾಂಸರಾಗಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಅವರೊಬ್ಬ ಶ್ರೇಷ್ಠ ಅನುವಾದಕರಾಗಿದ್ದರು. ಹಿಂದಿಯಿಂದ ಕನ್ನಡಕ್ಕೆ, ಕನ್ನಡದಿಂದ ಹಿಂದಿಗೆ ಅವರು ಮಾಡಿರುವ ಅನುವಾದಗಳನ್ನು ಗಮನಿಸಿದರೆ, ಎರಡು ಭಾಷಿಕ ಸಂಸ್ಕೃತಿಗಳ ಕುರಿತು ಅವರಿಗಿದ್ದ ಕಾಳಜಿ, ಬದ್ಧತೆ, ಪರಿಶ್ರಮ ಸ್ಪಷ್ಟವಾಗುತ್ತದೆ. ಅವರ ಮನೆಗೆ ಅನುವಾದ ಎಂಬ ಹೆಸರಿಟ್ಟಿರುವುದನ್ನು ನೋಡಿದರೆ ಅನುವಾದದ ಸಾಧ್ಯತೆಗಳು ಮತ್ತು ಸಾಮರ್ಥ್ಯಗಳ ಬಗೆಗೆ ಅವರಿಗಿದ್ದ ಬದ್ಧತೆ ವ್ಯಕ್ತವಾಗುತ್ತದೆ. ಅವರ ಅಗಲುವಿಕೆಯಿಂದ ಹಿರಿಯ ವಿದ್ವಾಂಸರೊಬ್ಬರು ಅಸ್ತಂಗತವಾದಂತಾಗಿದೆ. ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಕಟವಾಗುವ ಪ್ರಸಾದ ಪತ್ರಿಕೆ ಸಂಪಾದಕರಾಗಿ ಕೆಲವು ಕಾಲ ಸೇವೆ ಸಲ್ಲಿಸಿದ್ದರು. ವಿದ್ಯಾರ್ಥಿಗಳಾಗಿದ್ದಾಗ ಶ್ರೀಮಠದ ವಿದ್ಯಾರ್ಥಿನಿಲಯದ ಅಂತೇವಾಸಿಗಳಾಗಿದ್ದರೆಂಬುದು ಹೆಮ್ಮೆಯ ಸಂಗತಿ. ಶ್ರೀಮಠದ ಬಗ್ಗೆ ಅಪಾರವಾದ ಭಕ್ತಿ, ಗೌರವಗಳನ್ನು ಹೊಂದಿದ್ದರು.

ದಿವಂಗತರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬವರ್ಗದವರು ಮತ್ತು ಬಂಧುಬಾಂಧವರಿಗೆಲ್ಲ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಸುತ್ತೂರು ಶ್ರೀಗಳು ಹಾರೈಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.1.2026 ಗುರುವಾರ, ಮಳೆ ನಕ್ಷತ್ರ: ಶ್ರವಣ 24.01.2026 ರಿಂದ 05.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** 42ನೇ ಪ್ರತಿಷ್ಠಾಪನಾ ವಾರ್ಷಿಕೋತ್ಸವ, ಮುಡುಕುತೊರೆ ಪಾರ್ವತಿ ಅಮ್ಮನವರಿಗೆ ವಿಶೇಷ ಪೂಜೆ, ಶ್ರೀ ವೀರಭದ್ರೇಶ್ವರ ಸ್ವಾಮಿಯ ಪ್ರತಿಷ್ಠಾಪನಾ ವಾರ್ಷಿಕೋತ್ಸವ, 101 ಗಣೇಶನಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ಬೆಳಗ್ಗೆ 10ಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಗಣಪತಿ ದೇವಸ್ಥಾನ, ಅಗ್ರಹಾರ, ಬೆಳಗ್ಗೆ 9ಕ್ಕೆ
- **ಕಾವೇರಿ ಆಯುರ್ವೇದ ಆಸ್ಪತ್ರೆ:** ರಕ್ತ ಪದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ. ಮೋತಿಯಾ ಬಿಂದು (cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿ ದೋಷಗಳ (Refra ctrive errors) ತಿದ್ದುಪಡಿ, ಅಂಬ್ಲಾಯೋಪಿಯಾ ನಿರ್ವಹಣೆ, ಮಧು ಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನಿಟಿಸ್ ಫಿಗ್ಮೆಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಭಂಗು, ಚರ್ಮರೋಗ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಮೈಸೂರು ವಿವಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ರೂಸಾ 2.0 ಪ್ರಾಯೋಜಿತ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವ ಪ್ರೊ. ಎನ್. ನಾಗರಾಜ, ಅಧ್ಯಕ್ಷತೆ : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ಹೆಚ್.ಪಿ. ಜ್ಯೋತಿ, ಸ್ಥಳ: ಎಂಎಂಟಿಟಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ
- **ಮೈಸೂರು ವಿವಿ ಪ್ರಸಾರಾಂಗ, ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಅಧ್ಯಕ್ಷತೆ : ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ಪ್ರಭಾರ ಪ್ರಿನ್ಸಿಪಾಲ್ ಪ್ರೊ. ಶ್ರೀವತ್ಸ, ಡಾ. ವೆಂಕಟೇಶ್ ಅವರಿಂದ ದೈನಂದಿನ ಆರೋಗ್ಯ : ಆಯುರ್ವೇದ ಕುರಿತು ಉಪನ್ಯಾಸ, ಸ್ಥಳ: ಕಾಲೇಜಿನ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಮಹಿಳಾ ಕಾಲೇಜು, ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ವಿಭಾಗ :** ರಾಜ್ಯ ಮಟ್ಟದ ಮ್ಯಾನ್. ಕಾಮ್. ಫೆಸ್ಟ್, ಆವಿಷ್ಕಾರ 'ಆರೋಹಣ'ದ ಲಾಂಛನ ಅನಾವರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಮುಖ್ಯ ಅತಿಥಿಗಳು : ನಟ ನಿಹಾರ್ ಮುಖೇಶ್, ರಾಪ್ ಗಾಯಕಿ ಕು. ಐಸಿರಿ ಶರ್ಮ, ಪ್ರಿನ್ಸಿಪಾಲ್ ಡಾ. ರೇಚಣ್ಣ, ಡಾ. ವಿ. ಗಂಗಾಧರಸ್ವಾಮಿ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಮಧ್ಯಾಹ್ನ 3ಕ್ಕೆ.
- **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ರಂಗ ಮತ್ತು ನೃತ್ಯ ತರಬೇತಿ ಶಿಬಿರ, ಉದ್ಘಾಟನೆ : ಚಿಂತಕ ಪ್ರೊ. ಕಾಳೇಗೌಡ ನಾಗವಾರ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅತಿಥಿಗಳು : ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಡಾ. ಬಿ. ಸುಜಾತ, ಡಾ. ಕಾವೇರಿ ಪ್ರಕಾಶ್, ಪ್ರೊ. ವಿಜಯಲಕ್ಷ್ಮಿ ಮನಾಪುರ, ಸ್ಥಳ: ಚಿಂತನಾ ಚಾವಡಿ, ಕಲಾಮಂದಿರದ ಮುಂಭಾಗ, ಸಂಜೆ 4.30ಕ್ಕೆ.
- **ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ, ಶ್ರೀರಂಗಪಟ್ಟಣ :** ರಾಮಾಯಣ ಪ್ರವಚನ ಮಾಲಿಕೆ, ವಿಮರ್ಶಕ, ಚಿಂತಕ ವಿದ್ವಾನ್ ಗ.ನಾ. ಭಟ್ಟ ಅವರಿಂದ ಕಿಷ್ಕಿಂದಕಾಂಡ–ಪ್ರವಚನ ಎಂಟನೆಯ ಸರಣಿ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.
- **ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಟೆಂಪಲ್ ಟ್ರಸ್ಟ್:** 60ನೇ ವರ್ಷದ ತೈಪೂಸಂ ಮಹೋತ್ಸವ–2026, ಪೂಜಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು. ನಾಟ್ಯ ಸಂಸ್ಕೃತಿ ಕಲಾನಿಕೇತನದ ವಿದುಷಿ ಎಸ್.ಎನ್. ಮೇಘನರಾವ್ ತಂಡದವರಿಂದ ಭರತನಾಟ್ಯ ನೃತ್ಯ ಪ್ರದರ್ಶನ, ಮನು ವಿದ್ಯಾ ಕಲ್ಚರಲ್ ಫೌಂಡೇಷನ್ ಶ್ರೀಮತಿ ಎಸ್. ನೇತ್ರ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿಶ್ವೇಶ್ವರನಗರ. ಸಂಜೆ 6.30ಕ್ಕೆ.
- **ಸಾಧನಾ ಮಂದಿರ(ಮೈಸೂರು):** ಸರಳವಾಗಿ ಕಲಿತು ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ವಿಶೇಷ ತರಬೇತಿ ಸ್ವಾಮಿ ಹಂಸಾನಂದ ಅವರಿಂದ. ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್.ಮೊಹಲ್ಲಾ, ಸಂಜೆ 6.30 ರಿಂದ.
- **ರಂಗವಲ್ಲಿ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** ತಟ್ಟೆ ಇಡ್ಲಿ ರಾದ್ಧಾಂತ ಪತ್ತೇದಾರಿ ಹಾಸ್ಯ ನಾಟಕ ಪ್ರದರ್ಶನ, ನಿರ್ದೇಶನ : ರಂಗಾಯಣದ ಹಿರಿಯ ಕಲಾವಿದ ಮಾಯಸಂದ್ರ ಕೃಷ್ಣಪ್ರಸಾದ್, ಬೆಳಕಿನ ವಿನ್ಯಾಸ : ಮಧು ನೀನಾಸಂ, ರಂಗ ವಿನ್ಯಾಸ : ಹೆಚ್.ಕೆ. ದ್ವಾರಕಾನಾಥ್ ರಂಗವಿನ್ಯಾಸ, ಸಂಗೀತ ಹಿನ್ನೆಲೆ : ಉದಿತ್ ಹರಿತಸ್, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಡಾ. ಎಂ.ಎ. ಜ್ಯೋತಿ ಮತ್ತು ನಿತಿನ್ ರಾಜಾರಾಂ ಶಾಸ್ತ್ರೀ, ವ್ಯಾಖ್ಯಾನ–ಕೆ. ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮುಕ್ತ .ಟಿ – ಹಾಡುಗಾರಿಕೆ, 11.00 ಸುತ್ತ ಮುತ್ತ– ಪ್ರಸ್ತುತಿ – ಚಂದನಾ .ಸಿ, ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಅರ್ಚನಾ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಚರ್ಚೆ, 6.50 ಕೃಷಿರಂಗ, ಹಣ್ಣು–ಹೊನ್ನು ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಮಾವು ಮತ್ತು ಬಾಳೆಯಲ್ಲಿ ಖಟಾವು, ಗ್ರೇಡಿಂಗ್ ಹಣ್ಣು ಮಾಡುವುದು ಮತ್ತು ಮಾರಾಟ ಈ ಕುರಿತು ಕೋಲಾರದ ತೋಟಗಾರಿಕಾ ಮಹಾ ವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಹೆಚ್.ಸಿ.ಕೃಷ್ಣ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 7.45 ವಿಧಾನ ಮಂಡಲದಲ್ಲಿ ಇಂದು, 8.00 ಯುವವಾಣಿ –ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ–ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತಾ ಸರಣಿ ಕಾರ್ಯಕ್ರಮ, ವಿಷಯ–ಅರ್ಥಶಾಸ್ತ್ರ, ಭಾಗವಹಿಸುವವರು–ಮೈಸೂರಿನ ಸಪ್ತಗಿರಿ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕರಾದ ವೀಣಾ ಎಂ.ಕೆ., ಪ್ರಸ್ತುತಿ ದಿಗ್ವಿಜಯ್ .ಬಿ, 9.30 ಕನ್ನಡ ಭಾರತಿ, 10.00 ಸಂಸತ್ತಿನ ಉಭಯ ಸದನಗಳ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

ಹಿರಿಯ ಕಾರ್ಮಿಕ ಮುಖಂಡ ಅನಂತ್ ಸುಬ್ಬರಾವ್ ನಿಧನ

ಇಂದಿನ ಸಾರಿಗೆ ನೌಕರರ ಪ್ರತಿಭಟನೆ ಮುಂದೂಡಿಕೆ



ಬೆಂಗಳೂರು, ಜ.28– ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕರು ಹಾಗೂ ರಾಜ್ಯದ ಹಿರಿಯ ಕಾರ್ಮಿಕ ಮುಖಂಡರಾದ ಅನಂತ್ ಸುಬ್ಬರಾವ್(84) ನಿಧನರಾಗಿದ್ದಾರೆ.

ಇವರು ನಾಳೆ(ಜ.29) ಸಾರಿಗೆ ನೌಕರರ ಬೆಂಗಳೂರು ಚಲೋ ಪ್ರತಿಭಟನೆ ಹಮ್ಮಿಕೊಂಡಿದ್ದರು. ಸಂಜೆ 5 ಗಂಟೆಗೆ ವಿಜಯ ನಗರದ ತಮ್ಮ ನಿವಾಸದಲ್ಲಿ ಅಸ್ವಸ್ಥಗೊಂಡ ಅನಂತ್ ಸುಬ್ಬರಾವ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಅವರು ಚಿಕಿತ್ಸೆ ಫಲಿಸದೆ ನಿಧನರಾಗಿದ್ದಾರೆ. ಇಂದು ಬೆಳಗ್ಗೆ ಮಾಧ್ಯಮದ ಜೊತೆ ನಾಳೆಯ ಹೋರಾಟದ ಕುರಿತು ಮಾತನಾಡಿದ್ದರು. ಸಾರಿಗೆ ನೌಕರರ ಬೇಡಿಕೆ ಈಡೇರುವವರೆಗೆ ಪ್ರತಿಭಟನೆ ಮಾಡುವುದಾಗಿ ತಿಳಿಸಿದ್ದರು.

ಮುಷ್ಕರಕ್ಕೆ ಭಾರೀ ತಯಾರಿ: ಸಾರಿಗೆ ನೌಕರರ ಸಮಸ್ಯೆಗಳಿಗೆ ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡುತ್ತಿದ್ದ ಅನಂತ್ ಸುಬ್ಬರಾವ್, 4 ದಶಕಗಳ ಕಾಲ ಹೋರಾಟ ನಡೆಸುತ್ತಾ ಬಂದಿದ್ದಾರೆ. ಇವರು ಜಂಟಿ ಕ್ರಿಯಾ ಸಮಿತಿಯ ಅಧ್ಯಕ್ಷರಾಗಿದ್ದರು. ಪ್ರಮುಖವಾಗಿ ಎಸ್ಮಾ ಜಾರಿಗೆ ಭಾರೀ ವಿರೋಧ ವ್ಯಕ್ತಪಡಿಸಿದ್ದ ಅನಂತ್ ಸುಬ್ಬರಾವ್ ಸಾರಿಗೆ ನೌಕರರ ಪರವಾಗಿ ಹಲವು ಹೋರಾಟಗಳಲ್ಲಿ ಮುಂದಾಳತ್ವ ವಹಿಸಿದ್ದರು.

ಅನಂತ್ ಸುಬ್ಬರಾವ್ ನಿಧನದಿಂದ ನಾಳೆ ನಡೆಯಬೇಕಿದ್ದ ಸಾರಿಗೆ ನೌಕರರ ಮುಷ್ಕರವನ್ನು ಮುಂದೂಡಲಾಗಿದೆ.

ಎಸ್ಮಾ ಭಸ್ಮವಾಗಲಿದೆ!: ಇತ್ತೀಚೆಗೆ ರಾಜ್ಯ ಸಾರಿಗೆ ಇಲಾಖೆ ಎಸ್ಮಾ ಜಾರಿಗೆ ಮುಂದಾಗಿತ್ತು. ಈ ಕುರಿತು ಸೂಚನೆಯನ್ನು ನೀಡಿತ್ತು. ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಅನಂತ್ ಸುಬ್ಬರಾವ್ ಎಸ್ಮಾ ಜಾರಿ ಮಾಡಿದರೆ ನಾವು ಅಂಜಲ್ಲ, ಎಸ್ಮಾ ಭಸ್ಮವಾಗಲಿದೆ ಎಂದಿದ್ದರು. ಯಾವಾಗ ಬೇಕಾದರೂ ಸಾರಿಗೆ ಬಂದ್ ಆಗಬಹುದು. ನಮ್ಮ ನೌಕರರು ರೆಡಿಯಾಗಿದ್ದಾರೆ. ಸಾರಿಗೆ ಬಂದ್ ಮಾಡೇ ಮಾಡುತ್ತೇವೆ. ಈ ಬಾರಿ ಅನೌನ್ಸ್ ಮಾಡದೆ ಸಾರಿಗೆ ಬಂದ್ ಮಾಡಲಿದ್ದೇವೆ. ಮರ್ಯಾದೆಯಿಂದ ನಮ್ಮ ಕರೆದು ಹಿಂಬಾಕಿ ಸೆಟ್ಲ್ ಮಾಡಿ ಎಂದು ಸರ್ಕಾರಕ್ಕೆ ಅನಂತ್ ಸುಬ್ಬರಾವ್ ಎಚ್ಚರಿಕೆ ನೀಡಿದ್ದರು.

ಚಾಮರಾಜಪುರಂ ರೈಲು ನಿಲ್ದಾಣದ ಬಳಿ ಕಸದ ರಾಶಿ...!



ಪೈಲ್ವಾನ್ ಬಸವಯ್ಯ ವೃತ್ತದಿಂದ ಶಾಲೆ ಸಂಪರ್ಕಿಸುವ ಮುಖ್ಯರಸ್ತೆಯ ಬದಿಯಲ್ಲಿ ವೈದ್ಯಕೀಯ ತ್ಯಾಜ್ಯ ಹಾಕಲಾಗಿರುವುದು

ಕೊಳೆತು ನಾರುತ್ತಿರುವ ಕಸ, ವೈದ್ಯಕೀಯ ತ್ಯಾಜ್ಯ; ಅನಾರೋಗ್ಯದ ಆತಂಕ

ಮೈಸೂರು, ಜ.28(ವಿವಿಹೆಚ್)– ರಸ್ತೆಯ ಬದಿ ಎಲ್ಲೆಂದರಲ್ಲಿ ಬಿದ್ದಿರುವ ಕಸದ ರಾಶಿ, ಶಾಲಾ ಮಕ್ಕಳು ದುರ್ನಾತದಿಂದ ಮೂಗು ಮುಚ್ಚಿಕೊಂಡೇ ಬರುವ ದುಸ್ಥಿತಿ... ಇದು ನಗರದ ಚಾಮರಾಜಪುರಂ ರೈಲು ನಿಲ್ದಾಣದ ಹಿಂಬದಿಯಲ್ಲಿರುವ ಕ್ಯಾಪಿಟಲ್ ಆಂಗ್ಲ ಮಾಧ್ಯಮ ಶಾಲೆಯ ಬಳಿ ಕಂಡು ಬರುವ ದೃಶ್ಯ.



ರೈಲ್ವೆ ಕಾಂಪೌಂಡ್ ಬಳಿ ಚೆಲ್ಲಾಡಿರುವ ಕಸದ ರಾಶಿ.

ಹಸಿ ಕಸ–ಒಣ ಕಸ, ಪ್ಲಾಸ್ಟಿಕ್, ಇತರೆ ತ್ಯಾಜ್ಯಗಳು ಸೇರಿದಂತೆ ಎಲ್ಲ ಕಸಗಳು ರೈಲು ಹಳಿಯ ಬದಿಯಲ್ಲಿ ಹಾಕಲಾಗುತ್ತಿದೆ. ಚಾಮರಾಜಪುರಂನ ಪೈಲ್ವಾನ್ ಬಸವಯ್ಯ ವೃತ್ತದ ಒಂದೆಡೆ ಶಾಲೆ, ಮತ್ತೊಂದೆಡೆ ರೈಲು ನಿಲ್ದಾಣ, ಅದರ ಬದಿಯಲ್ಲಿ ಮಂಟೇಸ್ವಾಮಿ ದೇವಸ್ಥಾನವಿದ್ದು, ರೈಲ್ವೆ ಗೇಟ್ ಬಳಿಯ ಶಾಲೆ ಸಂಪರ್ಕಿಸುವ ಮುಖ್ಯ ರಸ್ತೆಯ ಸುತ್ತಮುತ್ತ ಕಸದ ರಾಶಿಯೇ ತುಂಬಿದ್ದು, ಸೊಳ್ಳೆ ನೊಣಗಳ ಹಾವಳಿ ಮಿತಿ ಮೀರಿರುವುದರಿಂದ ಸಾಂಕ್ರಾಮಿಕ ರೋಗ ಹರಡುವ ಬೀತಿ ಎದುರಾಗಿದೆ.

ವೈದ್ಯಕೀಯ ತ್ಯಾಜ್ಯ: ಸ್ಥಳೀಯರು ತಾವು ದಿನನಿತ್ಯ ಬಳಸುವ ಕಚ್ಚಾ ಸಾಮಾಗ್ರಿಗಳಾದ ಚಾಪೆ, ದಿಂಬು, ಕಸದ ಬುಟ್ಟಿ, ಹಳೆಯ ಬಟ್ಟೆಗಳು, ಪ್ಲಾಸ್ಟಿಕ್, ಆಹಾರ ಪದಾರ್ಥಗಳನ್ನು ಸಾಮಾನ್ಯವಾಗಿ ರಸ್ತೆಬದಿಯಲ್ಲಿ ಹಾಕುತ್ತಾರೆ. ಆದರೆ ಅಚ್ಚರಿಯೆಂಬಂತೆ ನಿರ್ಭೀತಿಯಿಂದ ವೈದ್ಯಕೀಯ ತ್ಯಾಜ್ಯಗಳನ್ನು ನಡು ರಸ್ತೆಯ ಲ್ಲಿಯೇ ಅನಾಮಧೇಯರು ಬಿಸಾಡಿ ಹೋಗಿದ್ದಾರೆ. ಈ ಬಗ್ಗೆ ಸ್ಥಳೀಯರು ಆಕ್ರೋಶ ಹೊರಹಾಕಿದ್ದು, ಆಹಾರ ಅರಸುತ್ತಾ ಕಸದ ರಾಶಿಯಲ್ಲಿ ಹುಡುಕಾಟ ನಡೆಸುವ ಮೂಕ ಪ್ರಾಣಿಗಳಿಗೆ ಈ ಔಷಧಿಗಳಿಂದ ಜೀವಕ್ಕೆ ತೊಂದರೆಯಾದಲ್ಲಿ ಯಾರು ಹೊಣೆ? ಆಡಳಿತ, ಅಧಿಕಾರಿಗಳ ಮೇಲೆ ಯಾವುದೇ ಭಯವಿಲ್ಲದೇ ಮೆಡಿವೇಸ್ಟ್‌ನ್ನು ರಸ್ತೆ ಬದಿಯಲ್ಲಿ ಬಿಸಾಡಿರುವುದು ನಿಜಕ್ಕೂ ಆತಂಕದ ಸಂಗತಿಯಾಗಿದೆ. ಮುಂಜಾವಿನ ಇಬ್ಬನಿ, ಬೆಳಗಿನ ಬಿಸಿಲಿಗೆ ಔಷಧಗಳು ವಾತಾವರಣಕ್ಕೆ ವ್ಯತಿರಿಕ್ತ ಪರಿಣಾಮ ಉಂಟುಮಾಡಿ, ಜೀವ ಹಾನಿಯಾದಲ್ಲಿ ಹೊಣೆ ಯಾರು? ನಮಗೆ ಅರಿವಿಲ್ಲದೇ ಯಾರೋ ಬಂದು ಈ ತ್ಯಾಜ್ಯಗಳನ್ನು ಇಲ್ಲಿ ಬಿಸಾಡಿದ್ದಾರೆ. ವೈದ್ಯಕೀಯ ತ್ಯಾಜ್ಯವನ್ನು ಬಿಸಾಡಿರುವವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ, ಇಂತಹ ಘಟನೆ ಮತ್ತೆ ನಡೆಯದಂತೆ ನೋಡಿಕೊಳ್ಳಬೇಕು. ಜೊತೆಗೆ ಕಸವನ್ನು ಎಸೆಯಲು ಸೂಕ್ತ ಪಾಯಿಂಟ್ ಒಂದನ್ನು ಗುರುತಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ರೈಲ್ವೆ ಹಳಿ ಬದಿಯಲ್ಲಿ ದುರ್ನಾತ: ಚಾಮರಾಜಪುರಂ ರೈಲು ನಿಲ್ದಾಣದ ಕಾಂಪೌಂಡ್ ಒಳಭಾಗದಲ್ಲಿ ಸ್ವಚ್ಛತೆ ಯಿಲ್ಲದೇ ಗಬ್ಬೆದ್ದು ನಾರುತ್ತಿದೆ. ರೈಲು ನಿಲ್ದಾಣದ ಆವರಣದಲ್ಲಿ ಗಿಡ, ಗಂಟಿಗಳು ಬೆಳೆದಿದ್ದು, ಅದರ ಸುತ್ತೆಲ್ಲಾ ಪ್ಲಾಸ್ಟಿಕ್‌ಗಳೇ ದರ್ಬಾರು ನಡೆಸುತ್ತಿವೆ. ಶೂ, ಚಪ್ಪಲಿ, ಸೂಟ್‌ಕೇಸ್ ಸೇರಿದಂತೆ ಅನೇಕ ಸಾಮಾಗ್ರಿಗಳು ಗುಡ್ಡೆಯಾಗಿದ್ದು, ಅದರ ಪಕ್ಕದಲ್ಲೇ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಇದರಿಂದಾಗಿ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಹೆಚ್ಚಾಗುತ್ತದೆ ಎನ್ನುತ್ತಾರೆ ಸ್ಥಳೀಯರು.

ಪಾಲಿಕೆ ಹಾಗೂ ರೈಲ್ವೆ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಕಸದ ರಾಶಿ ತೆರವಾಗದೇ ಸ್ಥಳೀಯರ ಆರೋಗ್ಯದ ಮೇಲೆ. ಅದರಲ್ಲೂ ಅದರ ಬದಿಯ ರಸ್ತೆಯಲ್ಲಿ ದಿನನಿತ್ಯ ಸಂಚರಿಸುವ ಶಾಲಾ ಮಕ್ಕಳ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುತ್ತಿದೆ. ಸಂಬಂಧಪಟ್ಟ ಸಚಿವರು ಈ ಬಗ್ಗೆ ಗಮನ ಹರಿಸಿ ಕಸ ತೆರವು ಮಾಡುವಂತೆ ಮನವಿ ಮಾಡಿದ್ದಾರೆ.

ರಾಜ್ಯಪಾಲರ ನಡೆ ಆತಂಕಕಾರಿ...!

ಎ.ಎಸ್.ಪೊನ್ನಣ್ಣನವರ ಹೇಳಿಕೆಗೆ ವಿಪಕ್ಷ ನಾಯಕ ಅಶೋಕ್ ಆಕ್ಷೇಪ

ಭಯ ಬೀಳಲು ಆತಂಕವಾದಿಗಳ ಸಭೆಯಲ್ಲ; ಹೀಗೆ ಭಾವಿಸಿದರೆ ನಾವೆಲ್ಲ ಆತಂಕವಾದಿಗಳಾಗುತ್ತೇವೆ!

ಬೆಂಗಳೂರು, ಜ.28(ಕೆಎಂಶಿ)– ವಿಧಾನಸಭೆಯಲ್ಲಿ ಆತಂಕದ ವಾತಾವರಣ ಇದೆಯೇ? ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪ್ರಶ್ನಿಸಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಮಾತನಾಡಿದ ಅವರು, ರಾಜ್ಯಪಾಲರ ನಡೆ ಆತಂಕಕಾರಿ ಎಂಬುದಾಗಿ ಕಾಂಗ್ರೆಸ್‌ನ ಎ.ಎಸ್.ಪೊನ್ನಣ್ಣ ಹೇಳಿದ್ದಾರೆ. ರಾಜ್ಯಪಾಲರು ಭಯಭೀತರಾಗಿ ಇಲ್ಲಿಗೆ ಬಂದಿರಲಿಲ್ಲ, ಭಯಬೀಳಲು ಇದು ಆತಂಕವಾದಿಗಳ ಸಭೆ ಅಲ್ಲ. ಒಂದು ವೇಳೆ ಇಲ್ಲಿ ಆತಂಕದ ವಾತಾವರಣ ಇದೆ ಎಂದಾದರೆ ಇಲ್ಲಿರುವ ನಾವೆಲ್ಲ ಆತಂಕವಾದಿಗಳಾಗುತ್ತೇವೆ. ಈ ಸದನಕ್ಕೆ ಗೌರವ ಇಲ್ಲವಾಗುತ್ತಿದೆ ಎಂದು ತಿರುಗೇಟು ನೀಡಿದರು.



ವಿಪಕ್ಷ ನಾಯಕ ಆರ್.ಅಶೋಕ್

ಜಂಟಿ ಅಧಿವೇಶನದ ವೇಳೆ ಗದ್ದಲ ಸೃಷ್ಟಿಸಿ ಭಯದ ವಾತಾವರಣ ನಿರ್ಮಿಸಿದವರು ಯಾರು, ಅಂತಹವರನ್ನು ಕೂಡಲೇ ಸದನದಿಂದ ಹೊರಹಾಕಿ, ರಾಜ್ಯಪಾಲರನ್ನು ಅಪಮಾನಿಸಿದವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಒತ್ತಾಯಿಸಿದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಬಟ್ಟೆ ಹರಿದವರು ಯಾರು, ಸದಸ್ಯರಿಗೆ ರಕ್ಷಣೆ ಎಲ್ಲಿದೆ, ಮುಖ್ಯಮಂತ್ರಿ ಮತ್ತು ಕಾನೂನು ಸಚಿವರು ರಾಜ್ಯಪಾಲರಿಗೆ ಅಗೌರವ ಮಾಡಿಲ್ಲ ಎನ್ನುತ್ತಾರೆ. ಅಗೌರವ ಮಾಡಿರುವುದು ಜಗಜ್ಜಾಹೀರಾಗಿದೆ. ಅಗೌರವ ಮಾಡಿರುವುದಕ್ಕೆ ಕ್ಷಮಾಪಣೆಯನ್ನೂ ಸರ್ಕಾರ ಕೇಳಲಿಲ್ಲ. ಕನಿಷ್ಠ ವಿಷಾದವನ್ನೂ ವ್ಯಕ್ತಪಡಿಸಲಿಲ್ಲ. ರಾಜ್ಯಪಾಲರನ್ನು ರಾಜ್ಯದ ಮೊದಲ ಪ್ರಜೆ ಎಂದು ಪರಿಗಣಿಸಲಾಗುತ್ತದೆ.

ರಾಜ್ಯಪಾಲರ ಭಾಷಣಕ್ಕೆ ಸದನದಲ್ಲಿ ಸಲ್ಲಿಸುತ್ತಿರುವುದು ವಂದನಾ ನಿರ್ಣಯವೋ, ಖಂಡನಾ ನಿರ್ಣಯವೋ ಸ್ಪಷ್ಟಪಡಿಸಬೇಕು. ಆಡಳಿತ ಪಕ್ಷದವರು ಖಂಡನಾ ನಿರ್ಣಯದ ರೀತಿ ಮಾತನಾಡಿದ್ದಾರೆ.

ಅಧಿವೇಶನ ನಡೆಯುವ ಸಂದರ್ಭದಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಗಾಂಧೀಜಿ ಹೆಸರಿಡುವ ಘೋಷಣೆ ಮಾಡಿದ್ದೀರಿ. ಇದು ಯಾವ ಕಾನೂನಿನಲ್ಲಿ ಇದೆ ಎಂದು ಪ್ರಶ್ನಿಸಿದರು. ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾತನಾಡಿ, ಮುಂದಿನ ಅಧಿವೇಶನದಲ್ಲಿ ಈ ಬಗ್ಗೆ ಘೋಷಿಸಲಾಗುವುದು ಎಂದಷ್ಟೇ ಮುಖ್ಯಮಂತ್ರಿ ಹೇಳಿದ್ದಾರೆ. ಬಜೆಟ್ ಕಾರ್ಯಕ್ರಮವನ್ನು ವರ್ಷವಿಡೀ ಚರ್ಚಿಸುತ್ತೇವೆ. ಸದನ ನಡೆಯುವಾಗ ಸಂಪುಟ ಸಭೆಗಳ ನಿರ್ಧಾರಗಳನ್ನೂ ಪ್ರಕಟಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

25 ನಿಗಮ ಮಂಡಳಿಗಳ ಅಧ್ಯಕ್ಷರ ಅಧಿಕಾರಾವಧಿ ಮುಂದುವರಿಕೆ

ಬೆಂಗಳೂರು, ಜ.28– 25 ನಿಗಮ ಮಂಡಳಿಗಳ ಅಧ್ಯಕ್ಷರ ಅಧಿಕಾರಾವಧಿ ಮುಂದುವರಿಕೆ ಮಾಡಿ ರಾಜ್ಯ ಸರ್ಕಾರ ಆದೇಶ ಮಾಡಿದೆ. ಶಾಸಕರಿಗೆ ಮಾತ್ರ ಅನ್ವಯವಾಗುವಂತೆ ಅಧಿಕಾರಾವಧಿ ಮುಂದುವರಿಕೆ ಮಾಡಲಾಗಿದೆ.

2024ರ ಜ.26ರಂದು ನಿಗಮ ಮಂಡಳಿ ಅಧ್ಯಕ್ಷರನ್ನ ನೇಮಕ ಮಾಡಿದ್ದ ರಾಜ್ಯ ಸರ್ಕಾರ ಎರಡು ವರ್ಷಗಳ ಅವಧಿಗೆ ನೇಮಕ ಆದೇಶ ಹೊರಡಿಸಲಾಗಿತ್ತು. ಮೊನ್ನೆಯಷ್ಟೇ ಅವಧಿ ಮುಗಿದ ಕಾರಣ 25 ಶಾಸಕರ ಅಧ್ಯಕ್ಷ ಸ್ಥಾನದ ಅಧಿಕಾರ ಅವಧಿಯನ್ನ ಮುಂದುವರಿಸಿದ್ದಾರೆ. ಅಷ್ಟೇ ಅಲ್ಲ 25 ಶಾಸಕರಿಗೆ ಕ್ಯಾಬಿನೆಟ್ ದರ್ಜೆ ಸಚಿವ ಸ್ಥಾನಮಾನದೊಂದಿಗೆ ಮುಂದಿನ ಆದೇಶದ ತನಕ ಮುಂದುವರೆಸಲು ಹೊಸ ಆದೇಶ ಹೊರಡಿಸಲಾಗಿದೆ.

ಶಾಸಕರಾದ ಶರತ್ ಬಚ್ಚೇಗೌಡ, ಶಿವಲಿಂಗೇಗೌಡ, ಪುಟ್ಟರಂಗಶೆಟ್ಟಿ, ಹೆಚ್‌ಸಿ ಬಾಲಕೃಷ್ಣ, ಎಸ್‌ಆರ್ ಶ್ರೀನಿವಾಸ್, ಎನ್‌ಎ ಹ್ಯಾರೀಸ್, ಬಿಕೆ ಸಂಗಮೇಶ್, ಅಬ್ಬಯ್ಯ ಪ್ರಸಾದ್, ಬೇಳೂರು ಗೋಪಾಲಕೃಷ್ಣ ಸೇರಿದಂತೆ 25 ಶಾಸಕರಿಗೆ ನಿಗಮ ಮಂಡಳಿ ಅಧ್ಯಕ್ಷರಾಗಿ ಮುಂದುವರಿಯುವ ಭಾಗ್ಯ ಸಿಕ್ಕಿದೆ.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಜ. 28– ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಫೆ. 3ರಿಂದ 7ರವರೆಗೆ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಿಗ್ಗೆ 6 ರಿಂದ 8–30 ಹಾಗೂ ಸಂಜೆ 6 ರಿಂದ 8–30ರವರೆಗೆ ಎರಡು ಅವಧಿಯಲ್ಲಿ ಶಿಬಿರ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ರಾಜ್ಯದಲ್ಲಿ 77,646 ಹೆಕ್ಟೇರ್ ಮಳೆಯಾಶ್ರಿತ ಪ್ರದೇಶ ಸವಳು–ಜವಳು ಬಾಧಿತ

ಮಣ್ಣಿನ ಸುಧಾರಣೆಗೆ ಹಲವು ಕ್ರಮ: ಕೃಷಿ ಸಚಿವ ಚಲುವರಾಯಸ್ವಾಮಿ ವಿವರಣೆ

ಬೆಂಗಳೂರು, ಜ.28(ಕೆಎಂಶಿ)– ರಾಜ್ಯದಲ್ಲಿ ದೂರ ಸಂವೇದಿ ಅನ್ವಯಿತ ಕೇಂದ್ರದಲ್ಲಿರುವ ದತ್ತಾಂಶದ ಅನ್ವಯ 77,646.6 ಹೆಕ್ಟೇರ್ ಮಳೆಯಾಶ್ರಿತ ಪ್ರದೇಶ ಸವಳು–ಜವಳು ಬಾಧಿತವಾಗಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.



ಪ್ರಶ್ನೋತ್ತರ ವೇಳೆಯಲ್ಲಿ ಭರಮಗೌಡ ಅಲಗೌಡ ಕಾಗೆ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಉತ್ತರ ಕರ್ನಾಟಕದ 13 ಜಿಲ್ಲೆಗಳಲ್ಲಿ 56,621.34 ಹೆಕ್ಟೇರ್ ಸವಳು–ಜವಳು ಬಾಧಿತ ಪ್ರದೇಶವಾಗಿದೆ. ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ–ಸಮಸ್ಯಾತ್ಮಕ ಮಣ್ಣುಗಳ ಸುಧಾರಣೆ ಕಾರ್ಯಕ್ರಮದಡಿ 2016–17ನೇ ಸಾಲಿನಿಂದ 2025–26ನೇ ಸಾಲಿನವರೆಗೆ 31.43 ಕೋಟಿ ರೂ. ವೆಚ್ಚದಲ್ಲಿ ಸವಳು–ಜವಳು ಬಾಧಿತ ಪ್ರದೇಶಗಳಲ್ಲಿ ಅಂತರಬಸಿ ಕಾಲುವೆ ನಿರ್ಮಾಣದ ಮೂಲಕ ಮಣ್ಣಿನ ಸುಧಾರಣೆ ಉಪಚಾರವನ್ನು 4,208.19 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ ಎಂದರು.

ಕಳೆದ ವರ್ಷ ಕೇಂದ್ರ ಸರ್ಕಾರ 13 ಕೋಟಿ ರೂ. ಹೆಚ್ಚುವರಿಯಾಗಿ ನೀಡಿತ್ತು. ಈ ವರ್ಷ 4 ಕೋಟಿ ರೂ. ಬಿಡುಗಡೆ ಮಾಡಲು ಒಪ್ಪಿದೆ. ರಾಜ್ಯ ಬಜೆಟ್‌ನಲ್ಲೂ ಸವಳು–ಜವಳು ಸಮಸ್ಯೆ ನಿವಾರಣೆಗೆ ಅನುದಾನ ಒದಗಿಸುವಲ್ಲಿ ಆಲೋಚಿಸಲಾಗುತ್ತಿದೆ. 2024–25 ನೇ ಸಾಲಿನಲ್ಲಿ ಮನ್ರೇಗಾ ಯೋಜನೆಯಡಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ 53.98 ಹೆಕ್ಟೇರ್ ಸವಳು–ಜವಳು ಪ್ರದೇಶವನ್ನು 20.03 ಲಕ್ಷ ರೂ.ಗಳ ವೆಚ್ಚದೊಂದಿಗೆ ಮಾಡಲಾಗಿದೆ.

ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 5,82,055 ರೈತರಿಗೆ 99,033.50 ಲಕ್ಷ ರೂ. ಬೆಳೆ ವಿಮೆ ಪರಿಹಾರ ವಿತರಣೆ ಮಾಡಲಾಗಿದೆ. ಕಲಬುರಗಿ ಜಿಲ್ಲೆಗೆ ವಿಮಾ ಕಂತಿನ ಮೊತ್ತದ ಶೇ.110ಕ್ಕಿಂತ ಹೆಚ್ಚು ಪರಿಹಾರ ದೊರೆತಿದೆ.

ಪ್ರಸಕ್ತ ಸಾಲಿನಲ್ಲಿ 988 ಕೋಟಿ ರೂ. ಬೆಳೆ ವಿಮೆ ಪರಿಹಾರ ಬಿಡುಗಡೆ ಮಾಡಲಾಗಿದೆ. ಜೊತೆಗೆ 168.59 ಕೋಟಿ ರೂ. ಹೆಚ್ಚುವರಿ ಅನುದಾನ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕಲಬುರಗಿ ಜಿಲ್ಲೆಗೆ 128 ಕೋಟಿ ರೂ. ಬಿಡುಗಡೆ ಮಾಡಬೇಕಿದೆ. ಅತೀ ಹೆಚ್ಚು ಬೆಳೆ ವಿಮೆ ಪರಿಹಾರ ಈ ಜಿಲ್ಲೆಗೆ ದೊರೆತಿದೆ ಎಂದರು.

ಹೊಳೆನರಸೀಪುರದ ಹಳೆಕೋಟೆಯಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಒಂದು ಕೋಟಿ ರೂ. ಮಂಜೂರು

ರೇವಣ್ಣ ಬೇಡಿಕೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಅಸ್ತು

ಬೆಂಗಳೂರು, ಜ.28(ಕೆಎಂಶಿ)– ಹೊಳೆನರಸೀಪುರ ತಾಲೂಕು ಹಳೆಕೋಟೆ ಆವರಣದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಒಂದು ಕೋಟಿ ರೂ. ಮಂಜೂರು ಮಾಡಿ ಆದೇಶಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ವಿಧಾನಸಭೆಗಿಂದು ತಿಳಿಸಿದ್ದಾರೆ.



ತಂಗಡಗಿ



ಹೆಚ್.ಡಿ.ರೇವಣ್ಣ


ಪ್ರಶ್ನೋತ್ತರ ವೇಳೆಯಲ್ಲಿ ಹೆಚ್.ಡಿ.ರೇವಣ್ಣ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಸರ್ಕಾರದ ಮಾರ್ಗಸೂಚಿ ಅನ್ವಯ ಹಂತ ಹಂತವಾಗಿ ಹಾಸನ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. 2024–25ನೇ ಸಾಲಿನಲ್ಲಿ ಹರದನಹಳ್ಳಿ ಗ್ರಾಮದಲ್ಲಿ ನಿರ್ಮಿಸುತ್ತಿರುವ ಒಕ್ಕಲಿಗರ ಸಮುದಾಯ ಭವನ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡುವ ಕುರಿತು ಪ್ರಸ್ತಾವನೆ ಸಲ್ಲಿಸಲು ಹಿಂದುಳಿದ ವರ್ಗಗಳ ಆಯುಕ್ತರಿಗೆ ಸೂಚಿಸಲಾಗಿದೆ ಎಂದರು.

ಅಪೂರ್ಣವಾಗಿರುವ ಕಟ್ಟಡದ ಕಾಮಗಾರಿ ಪೂರ್ಣಗೊಳಿಸಲಾಗುವುದು. ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದರೆ, ಪರಿಶೀಲಿಸಿ ಕಾಮಗಾರಿ ಪೂರ್ಣಗೊಳಿಸುವುದಾಗಿ ಹೇಳಿದರು. ಕೊಳ್ಳೇಗಾಲದ ಸುವರ್ಣ ಕರ್ನಾಟಕ ಭವನ ನಿರ್ಮಾಣಕ್ಕೆ ಆದಷ್ಟು ಶೀಘ್ರ ಹಣ ಬಿಡುಗಡೆ ಮಾಡಿ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಎಆರ್. ಕೃಷ್ಣಮೂರ್ತಿ ಅವರ ಪ್ರಸ್ತಾವಕ್ಕೂ ಉತ್ತರಿಸಿದರು. ಸುಮಾರು 18 ವರ್ಷದಿಂದ ಈ ಕಟ್ಟಡದ ಕಾಮಗಾರಿ ವಿಳಂಬವಾಗಿದೆ. ಜಿಲ್ಲಾಧಿಕಾರಿ ಒದಗಿಸಿರುವ ಮಾಹಿತಿ ಪರಿಶೀಲಿಸಿ ಆರ್ಥಿಕ ಇಲಾಖೆಯ ಸಹಮತ ಕೋರಲು ಕ್ರಮ ವಹಿಸಲಾಗುತ್ತಿದೆ. ಈಗಾಗಲೇ ಕಾಮಗಾರಿಗೆ 125 ಲಕ್ಷ ರೂ. ಗಳನ್ನು ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ ಎಂದರು.

ರಾಜ್ಯಪಾಲರ ಬಗ್ಗೆ ಟೀಕೆ ಮಾಡಿದರೆ ಶಿಸ್ತು ಕ್ರಮ

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಎಚ್ಚರಿಕೆ

ಬೆಂಗಳೂರು, ಜ.28(ಕೆಎಂಶಿ)–ಸದನದಲ್ಲಿ ರಾಷ್ಟ್ರಪತಿ ಅಥವಾ ರಾಜ್ಯಪಾಲರ ಬಗ್ಗೆ ನಿಂದನೆ ಹಾಗೂ ಟೀಕೆ ಮಾಡಿದವರ ವಿರುದ್ಧ ಅತ್ಯಂತ ಶಿಸ್ತು ಕ್ರಮ ಜರುಗಿಸಬೇಕಾಗುತ್ತದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸದಸ್ಯರಿಗೆ ಎಚ್ಚರಿಕೆ ನೀಡಿದ್ದಾರೆ.



ಬಸವರಾಜ ಹೊರಟ್ಟಿ

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಚರ್ಚೆ ಕುರಿತಂತೆ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಏರುಧ್ವನಿಯಲ್ಲಿ ಚರ್ಚೆ ನಡೆಯಿತು.

ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ರಾಜ್ಯಪಾಲರ ಭಾಷಣ ಕುರಿತು ಆಡಳಿತ ಪಕ್ಷದವರೇ ತಗಾದೆ ತೆಗೆದಿದ್ದಾರೆ. ಮತ್ತೊಂದೆಡೆ ವಂದನಾ ನಿರ್ಣಯ ಚರ್ಚೆ ತೆಗೆದುಕೊಳ್ಳುವಂತೆಯೂ ಮನವಿ ಮಾಡುತ್ತಿದ್ದಾರೆ. ಮೊದಲು ನಿಮ್ಮ ನಿರ್ಣಯ ತಿಳಿಸಿ ಎಂದು ಮನವಿ ಮಾಡಿದರು.

ಸದನದ ನಿಯಮ ಓದಿದ ಸಭಾಪತಿ ಬಸವರಾಜ ಹೊರಟ್ಟಿ, ಕರ್ನಾಟಕ ವಿಧಾನಮಂಡಲ ದೇಶದಲ್ಲೇ ಅತ್ಯಂತ ಹಿರಿಮೆ, ಗರಿಮೆ, ಹಿನ್ನೆಲೆಯುಳ್ಳ ಸದನವಾಗಿದೆ. ಶತಮಾನಗಳ ಇತಿಹಾಸವುಳ್ಳ ಸದನ ಅನೇಕ ಸಂಸದೀಯ ಪಟುಗಳು ಮತ್ತು ದಿಗ್ಗಜರನ್ನು ನೀಡಿದ ಕೀರ್ತಿಗೆ ಪಾತ್ರವಾಗಿದೆ ಎಂದರು. ಕಳೆದ ಜ.22 ರಂದು ವಿಧಾನಮಂಡಲದ ಉಭಯಸದನಗಳ ಜಂಟಿ ಅಧಿವೇಶನ ಉದ್ದೇಶಿಸಿ ಘನತೆವೆತ್ತ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಭಾಷಣ ಮಾಡಲು ಸದನಕ್ಕೆ ಬಂದಿದ್ದರು. ಆ ವೇಳೆ ಒಂದು ಸಾಲಿನ ಭಾಷಣ ಓದಿ ಜೈ ಹಿಂದ್ ಜೈ ಕರ್ನಾಟಕ ಎಂದು ಹೇಳಿ ಸದನದಿಂದ ನಿರ್ಗಮಿಸಿದ್ದಾರೆ.


ನಮ್ಮ ಸಂಸದೀಯ ನಡವಳಿಕೆ ಹಾಗೂ ವಿಧಾನ ಪರಿಷತ್ ಕಾರ್ಯಕಲಾಪಗಳ ಪ್ರಕಾರ ರಾಜ್ಯಪಾಲರು ಇಡೀ ಭಾಷಣ ಓದಬಹುದು. ಇಲ್ಲವೇ ಒಂದು ಸಾಲನ್ನು ಓದಿದರೂ ಅದನ್ನು ಪೂರ್ಣವಾಗಿ ಓದಿದ್ದಾರೆ ಎಂದು ಪರಿಭಾವಿಸಲಾಗುತ್ತದೆ. ರಾಜ್ಯಪಾಲರು ಒಂದು ಸಾಲನ್ನು ಓದಿ ಸದನದಿಂದ ನಿರ್ಗಮಿಸಿದರು. ಇದನ್ನು ಪೂರ್ಣ ಭಾಷಣ ಎಂದೇ ನಾವು ಹೇಳುತ್ತೇವೆ. ನಮ್ಮ ಸದನದ ನಿಯಮಗಳ ಪ್ರಕಾರ ಸದಸ್ಯರು ರಾಷ್ಟ್ರಪತಿ ಅಥವಾ ರಾಜ್ಯಪಾಲರ ಬಗ್ಗೆ ಸದನದಲ್ಲಿ ನಿಂದನೆ, ಟೀಕೆ ಮಾಡುವಂತಿಲ್ಲ.

ಸದನದ ಗೌರವ, ಪಾವಿತ್ರ್ಯತೆ ಎತ್ತಿಹಿಡಿಯಬೇಕು. ರಾಷ್ಟ್ರಪತಿ ದೇಶದ ಪ್ರಥಮ ಪ್ರಜೆ, ಅದೇ ರೀತಿ ರಾಜ್ಯಪಾಲರು ಕಾರ್ಯಾಂಗದ ಮುಖ್ಯಸ್ಥರು, ಅವರ ಬಗ್ಗೆ ಯಾರೊಬ್ಬರೂ ಟೀಕೆ ಮಾಡುವಂತಿಲ್ಲ. ಮಾಡಿದರೆ ಶಿಸ್ತುಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮಹಾಂತೇಶ್ ಬೀಳಗಿ ಪುತ್ರಿಗೆ ಸರ್ಕಾರಿ ನೌಕರಿ: ನೇಮಕಾತಿ ಆದೇಶ ಪತ್ರ ಹಸ್ತಾಂತರಿಸಿದ ಸಿಎಂ

ಬೆಂಗಳೂರು: ಇತ್ತೀಚೆಗೆ ಭೀಕರ ಕಾರು ಅಪಘಾತದಲ್ಲಿ ಮೃತಪಟ್ಟ ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರ ಪುತ್ರಿ ಚೈತನ್ಯಾ ಬೀಳಗಿ ಅವರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಕೆಲಸ ನೀಡಿ ರಾಜ್ಯ ಸರ್ಕಾರ ಬುಧವಾರ ಆದೇಶಿಸಿದೆ.

ಚೈತನ್ಯಾ ಬೀಳಗಿ ಅವರಿಗೆ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಸಹಾಯಕಿ ಉದ್ಯೋಗ ನೀಡಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಅವರಿಗೆ ನೇಮಕಾತಿ ಆದೇಶ ಪತ್ರವನ್ನು ಹಸ್ತಾಂತರಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಚೈತನ್ಯಾ ಬೀಳಗಿಗೆ ನೇಮಕಾತಿ ಆದೇಶ ಪತ್ರವನ್ನು ಹಸ್ತಾಂತರಿಸಿದರು.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಿಎಂ ಸಿದ್ದರಾಮಯ್ಯ ಅವರು, ಹಿರಿಯ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರು ಸೇವೆಯಲ್ಲಿರುವಾಗಲೇ ನಿಧನ ಹೊಂದಿದ ಹಿನ್ನೆಲೆಯಲ್ಲಿ ಅವರ ಪುತ್ರಿ ಚೈತನ್ಯಾ ಎಮ್.ಬೀಳಗಿ ಅವರಿಗೆ ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗದ ನೇಮಕಾತಿ ಪತ್ರವನ್ನು ಇಂದು ಹಸ್ತಾಂತರಿಸಿ, ತಂದೆಯಂತೆಯೇ ಸಮಾಜಮುಖಿಯಾಗಿ ಕರ್ತವ್ಯ ನಿರ್ವಹಿಸುವಂತೆ ಶುಭ ಕೋರಿದೆ ಎಂದು ತಿಳಿಸಿದ್ದಾರೆ.

ಈ ವೇಳೆ ಸಚಿವರಾದ ಎಚ್.ಕೆ. ಪಾಟೀಲ್, ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್, ಕಾಂಗ್ರೆಸ್ ಪಕ್ಷದ ಮುಖ್ಯ ಸಚೇತಕರಾದ ಅಶೋಕ್ ಪಟ್ಟಣ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು ಉಪಸ್ಥಿತರಿದ್ದರು.

ಕಳೆದ ವರ್ಷ ನವೆಂಬರ್ 25ರಂದು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಗೌನಳ್ಳಿ ಕ್ರಾಸ್ ಬಳಿ ಸಂಭವಿಸಿದ ಕಾರು ಅಪಘಾತದಲ್ಲಿ ಕರ್ನಾಟಕ ರಾಜ್ಯ ಖನಿಜ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಮಹಾಂತೇಶ್ ಬೀಳಗಿ ಅವರು ಮೃತಪಟ್ಟಿದ್ದರು.

ಗುತ್ತಿಗೆ ಆಧಾರಿತ ವೈದ್ಯಾಧಿಕಾರಿ ನೇಮಕಾತಿಗೆ ನೇರ ಸಂದರ್ಶನ

ಮೈಸೂರು, ಜ.28– ಮೈಸೂರು ಜಿಲ್ಲೆಯಲ್ಲಿನ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ತಜ್ಞ ವೈದ್ಯಾಧಿಕಾರಿಗಳು, ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ (ರೋಸ್ಟರ್ ಕಂ ಮೆರಿಟ್ ಆಧಾರಿತ) ನೇಮಕ ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳಿಗೆ ಫೆ.3 ರಂದು ಬೆಳಿಗ್ಗೆ 10.30 ಗಂಟೆಗೆ ನಜರ್‌ಬಾದ್‌ನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿಯಲ್ಲಿ ನೇರ ಸಂದರ್ಶನವನ್ನು ಮಾಡಲಾಗುತ್ತದೆ. ಆಸಕ್ತರು ಅನ್ವಯವಾಗುವ ತಮ್ಮ ಎಲ್ಲ ದೃಢೀಕೃತ ದಾಖಲಾತಿಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು.

ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು (3), ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು (7), ಹಿರಿಯ ವೈದ್ಯಾಧಿಕಾರಿಗಳು(2) ಹುದ್ದೆಗಳಿಗೆ ನೇರ ಸಂದರ್ಶನ ನಡೆಸಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇನ್ಮುಂದೆ ಹೀಗೆಲ್ಲಾ ರಿಸರ್ವೇಶನ್ ಕೇಳೋ ಹಾಗಿಲ್ಲ! ಸುಪ್ರೀಂಕೋರ್ಟ್ ಹೊಸ ರೂಲ್ಸ್

ನವದೆಹಲಿ, ಜ.28– ನೀಟ್–ಪಿಜಿ ಪ್ರವೇಶ ಪ್ರಕ್ರಿಯೆಯಲ್ಲಿ ಅಲ್ಪಸಂಖ್ಯಾತ ಕೋಟಾವನ್ನು ದುರುಪಯೋಗಪಡಿಸಿಕೊಳ್ಳುವ ಪ್ರಯತ್ನಗಳ ಬಗ್ಗೆ ಸುಪ್ರೀಂಕೋರ್ಟ್ ಗಂಭೀರ ಎಚ್ಚರಿಕೆ ನೀಡಿದೆ.

ಅಲ್ಪಸಂಖ್ಯಾತ ಸ್ಥಾನಮಾನವನ್ನು ಕೇವಲ ದಾಖಲೆಗಳ ಮೂಲಕ ಪಡೆದು ವಿಶೇಷ ಸೌಲಭ್ಯಗಳನ್ನು ಪಡೆಯುವ ಪ್ರವೃತ್ತಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಇಂತಹ ಪ್ರಕರಣಗಳು ಸಂವಿಧಾನಾತ್ಮಕ ಮೌಲ್ಯಗಳಿಗೆ ಧಕ್ಕೆ ತರುತ್ತವೆ ಎಂಬ ಸಂದೇಶವನ್ನು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ.

ಪ್ರಕರಣದ ಹಿನ್ನೆಲೆ ಏನು: ಅಲ್ಪಸಂಖ್ಯಾತ ಕೋಟಾದಡಿ ನೀಟ್–ಪಿಜಿಗೆ ಪ್ರವೇಶ ಕೋರಿ ಜಾಟ್ ಸಮುದಾಯದ ಅಭ್ಯರ್ಥಿಯೊಬ್ಬರು ಅರ್ಜಿ ಸಲ್ಲಿಸಿದ್ದರು. ತಮ್ಮನ್ನು ಬೌದ್ಧ ಧರ್ಮದ ಅಲ್ಪಸಂಖ್ಯಾತ ಎಂದು ಘೋಷಿಸಿಕೊಂಡು ವಿಶೇಷ ಸೌಲಭ್ಯ ಪಡೆಯಲು ಯತ್ನಿಸಿದ್ದ ಈ ಅರ್ಜಿ ವಿಚಾರಣೆ ವೇಳೆ, ಅರ್ಜಿದಾರರ ಹಿಂದಿನ ದಾಖಲೆಗಳಲ್ಲಿ ಅವರು ಸಾಮಾನ್ಯ ವರ್ಗದ ಅಭ್ಯರ್ಥಿ ಎಂದು ಉಲ್ಲೇಖಿಸಿದ್ದ ಅಂಶವು ನ್ಯಾಯಾಲಯದ ಗಮನ ಸೆಳೆದಿದೆ.

ಸಿಜೆಐ ನೇರ ಪ್ರಶ್ನೆ: ಸುದ್ದಿ ಮಾಧ್ಯಮ ವರದಿ ಮಾಡಿರುವಂತೆ, ವಿಚಾರಣೆಯ ವೇಳೆ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಅರ್ಜಿದಾರರ ವಕೀಲರನ್ನು ನೇರವಾಗಿ, ನೀವು ಪುನಿಯಾ ಸಮುದಾಯದವರೇ ಎಂದು ಪ್ರಶ್ನಿಸಿ, 'ನೀವು ಯಾವ ಅಲ್ಪಸಂಖ್ಯಾತ ಗುಂಪಿಗೆ ಸೇರಿದ್ದೀರಿ' ಎಂದು ಕೇಳಿದರು. ಆ ವೇಳೆ, ವಕೀಲರು, 'ತಮ್ಮ ಕಕ್ಷಿದಾರ ಜಾಟ್ ಪುನಿಯಾ' ಎಂದು ಉತ್ತರಿಸಿದರು. ಇದರಿಂದ ಕೆರಳಿದ ನ್ಯಾಯ ಮೂರ್ತಿ, ಹಾಗಾದರೆ ನೀವು ಹೇಗೆ ಅಲ್ಪಸಂಖ್ಯಾತರಾಗಲು ಸಾಧ್ಯ



ಎಂಬ ಪ್ರಶ್ನೆಯು ನ್ಯಾಯಾಲಯದಿಂದ ತಕ್ಷಣವೇ ಕೇಳಿಬಂತು.

ಹೊಸ ರೀತಿಯ ವಂಚನೆ: ಮುಂದುವರೆದು, ಅರ್ಜಿದಾರರು ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಮತ್ತು ಇದು ಅವರ ಸಂವಿಧಾನಾತ್ಮಕ ಹಕ್ಕು ಎಂಬ ವಾದವನ್ನು ವಕೀಲರು ಮುಂದಿಟ್ಟರು. ಆದರೆ ಈ ವಾದವನ್ನು ಟೀಕಿಸಿದ, ಮುಖ್ಯ ನ್ಯಾಯಮೂರ್ತಿಗಳು, ಇದನ್ನು ಹೊಸ ರೀತಿಯ ವಂಚನೆ ಎಂದು ಕರೆದರು. ಮುಂದುವರೆದು, ಕೇವಲ ಮತಾಂತರದ ಆಧಾರದಲ್ಲಿ ಅಲ್ಪಸಂಖ್ಯಾತ ಕೋಟಾದ ಲಾಭ ಪಡೆಯುವುದು ಸ್ವೀಕಾರಾರ್ಹವಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿತು.

ಏತನ್ಮಧ್ಯೆ, ಅಲ್ಪಸಂಖ್ಯಾತ ಸ್ಥಾನಮಾನದ ಬಗ್ಗೆ ಕಠಿಣ ನಿಲುವು ತಾಳಿದ ಸುಪ್ರೀಂಕೋರ್ಟ್, ಆರ್ಥಿಕವಾಗಿ ದುರ್ಬಲ ವರ್ಗಕ್ಕಿಂತ ಮೇಲಿರುವ ಹಾಗೂ ಹಿಂದಿನ ಅರ್ಜಿಗಳಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿ ಎಂದು ಘೋಷಿಸಿಕೊಂಡವರು, ನಂತರ ಧಾರ್ಮಿಕ ಗುರುತನ್ನು ಬದಲಿಸಿ ವಿಶೇಷ ಸೌಲಭ್ಯ ಪಡೆಯಲು ಅವಕಾಶ ನೀಡಲಾಗುವುದಿಲ್ಲ. ಅಲ್ಪಸಂಖ್ಯಾತರ ರಕ್ಷಣೆಯ ಉದ್ದೇಶ ನಿಜವಾಗಿಯೂ ಹಿಂದುಳಿದ ಸಮುದಾಯಗಳಿಗೆ ನೆರವು ನೀಡುವುದೇ ಹೊರತು, ನಿಯಮಗಳನ್ನು ತಪ್ಪಿಸಲು ಬಳಸುವುದು ಅಲ್ಲ ಎಂದು ತಿಳಿಸಿತು. ಮುಂದುವರೆದು, ಪ್ರಕರಣ ಸಂಬಂಧ, ಹರಿಯಾಣ ರಾಜ್ಯದಲ್ಲಿ ಅಲ್ಪಸಂಖ್ಯಾತ ಪ್ರಮಾಣ ಪತ್ರಗಳನ್ನು ನೀಡುವ ಮಾರ್ಗಸೂಚಿಗಳ ಕುರಿತು ಸ್ಪಷ್ಟ ಮಾಹಿತಿ ನೀಡುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ ನ್ಯಾಯಾಲಯ, "ಕೇವಲ ಕಾಗದದ ಹಕ್ಕುಗಳ ಆಧಾರದ ಮೇಲೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲಾಗುವುದಿಲ್ಲ" ಎಂದು ಪುನರುಚ್ಚರಿಸಿತು. ಇದರೊಂದಿಗೆ, ನೀಟ್–ಪಿಜಿ ಪ್ರವೇಶಕ್ಕೆ ಸಂಬಂಧಿಸಿದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿತು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಜೀವನದಲ್ಲಿ ಏನ್ ಆಗ್ಬೇಕು ಅಂದುಕೊಂಡಿದ್ದೀಯಾ ಗುಂಡ?
ಗುಂಡ : ನಾನು ನನ್ನ ತಂದೆಯಂತೆ ಡಾಕ್ಟರ್ ಆಗ್ಬೇಕು ಅಂದುಕೊಂಡಿದ್ದೀನಿ.
ಮೇಷ್ಟ್ರು : ಹಾಗಾದ್ರೆ ನಿನ್ನ ತಂದೆ ಡಾಕ್ಟರಾ...?
ಗುಂಡ : ಇಲ್ಲ ಸಾರ್, ಅವರೂ ಡಾಕ್ಟರ್ ಆಗ್ಬೇಕು ಅಂದುಕೊಂಡಿದ್ದರಂತೆ!

ಮೈಸೂರು ಮಿತ್ರ
ಗುರುವಾರ, ಜನವರಿ 29, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನಂಬಿ ಬದುಕುವುದು ಬೇರೆ. ನಂಬಿಸುತ್ತ ಬದುಕುವುದು ಬೇರೆ. ನಂಬಿ ಬದುಕುವವರಲ್ಲಿ ಪ್ರೀತಿ ಇರುತ್ತದೆ. ನಂಬಿಸುತ್ತ ಬದುಕುವವರಲ್ಲಿ ಸ್ವಾರ್ಥ ಇರುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೆಣ್ಣಿಗೆ ಹಠವಿರಬಾರದು, ಗಂಡಿಗೆ ಚಟವಿರಬಾರದು

ನಿಮ್ಮ ಪತ್ರಗಳು

ಮಲ್ಲಯ್ಯನ ಬೆಟ್ಟ ಪುನರುಜ್ಜೀವನಗೊಳಿಸಿ

ಮಾನ್ಯರೆ,

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿರುವ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟ (ಮಲ್ಲಯ್ಯನ ಬೆಟ್ಟ) ಪ್ರಸಿದ್ಧ ಪ್ರವಾಸಿ ಮತ್ತು ಧಾರ್ಮಿಕ ತಾಣವಾಗಿದೆ. ಇದು ಮೈಸೂರಿನ ಅತಿ ಎತ್ತರದ ಬೆಟ್ಟಗಳಲ್ಲಿ ಒಂದಾಗಿದ್ದು, ನೈಸರ್ಗಿಕ ಸೌಂದರ್ಯ ಮತ್ತು ಚಾರಣಕ್ಕೆ ಹೆಸರುವಾಸಿಯಾಗಿದೆ.

ಸಾವಿರ ವರ್ಷಗಳ ಭವ್ಯ ಇತಿಹಾಸವಿರುವ ಸಮುದ್ರ ಮಟ್ಟದಿಂದ 4400 ಅಡಿ ಎತ್ತರದಲ್ಲಿರುವ ಈ ಅದ್ಭುತ ತಾಣವು ಕೇವಲ ಮೂಲಸೌಕರ್ಯದ ಕೊರತೆಯಿಂದ ಸೊರಗುತ್ತಿರುವುದು ನಮ್ಮ ಆಡಳಿತ ವ್ಯವಸ್ಥೆಯ ಅತಿ ದೊಡ್ಡ ವೈಫಲ್ಯ. ಸೌಂದರ್ಯ ಸವಿಯಲು ಬರುವ ಪ್ರವಾಸಿಗರಿಗೆ ಕುಡಿಯುವ ನೀರು ಮತ್ತು ಶೌಚಾಲಯದಂತಹ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗದ ಸರ್ಕಾರಕ್ಕೆ ಮತ್ತು ಪ್ರವಾಸೋದ್ಯಮ ಇಲಾಖೆಗೆ ನಾಚಿಕೆಯಾಗಬೇಕು. ಐತಿಹಾಸಿಕ ಸ್ಮಾರಕಗಳನ್ನು ಕೇವಲ ಕಲ್ಲು ಮಣ್ಣು ಎಂದು ಭಾವಿಸುವ ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಅಮೂಲ್ಯ ಪರಂಪರೆಗಳು ಅನಾಥವಾಗಿವೆ. ಪ್ರವಾಸೋದ್ಯಮದ ಹೆಸರಿನಲ್ಲಿ ಬರುವ ಕೋಟಿಗಟ್ಟಲೆ ಅನುದಾನ ಎಲ್ಲಿಗೆ ಹೋಗುತ್ತಿದೆ? ಅಧಿಕಾರಿಗಳ ಅಂಧಾಭಿಮಾನ ಮತ್ತು ನಿರಾಸಕ್ತಿಯಿಂದಾಗಿ ನಮ್ಮ ಅಮೂಲ್ಯ ಸ್ಮಾರಕಗಳು ಅನಾಥವಾಗಿವೆ. ಸೌಂದರ್ಯ ಸವಿಯಲು ಬರುವ ಭಕ್ತರು ಮತ್ತು ಪ್ರವಾಸಿಗರು ವ್ಯವಸ್ಥೆಗೆ ಶಪಿಸುವಂತಾಗಿರುವುದು ವಿಷಾದನೀಯ. ಈ ಆಡಳಿತಾತ್ಮಕ ಜಡತ್ವ ಹೀಗೆಯೇ ಮುಂದುವರಿದರೆ ಮುಂದಿನ ತಲೆಮಾರಿಗೆ ನಾವು ಕೇವಲ ಸ್ಮಶಾನಗಳಂತಹ ಪಾಳುಬಿದ್ದ ಕಟ್ಟಡಗಳನ್ನು ಮಾತ್ರ ಬಿಟ್ಟು ಹೋಗುತ್ತೇವೆ. ಇನ್ನಾದರೂ ಸಂಬಂಧಪಟ್ಟವರು ಕುರುಡುತನ ಬಿಟ್ಟು ಈ ತಾಣದ ಪುನರುಜ್ಜೀವನಕ್ಕೆ ಮುಂದಾಗಲಿ.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.

ಶಾರದಾ ವಿಲಾಸದಲ್ಲಿ ಆಸನದ ವ್ಯವಸ್ಥೆ ಸರಿಪಡಿಸಲಿ!

ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ಶಾರದಾ ವಿಲಾಸ ಶತಮಾನೋತ್ಸವ ಭವನದ ಸಭಾಂಗಣದಲ್ಲಿ ಆಸನಗಳು ಪ್ಲಾಸ್ಟಿಕ್‌ನಿಂದ ಕೂಡಿದ್ದು, ಚಿಕ್ಕದಾಗಿ ಇವೆ. ಇದರಿಂದ ಕಾರ್ಯಕ್ರಮಕ್ಕೆ ಬರುವ ಅದರಲ್ಲೂ ದಪ್ಪಗಿರುವ ವ್ಯಕ್ತಿಗಳಿಗೆ ಕುಳಿತುಕೊಳ್ಳಲು ತುಂಬಾ ಮುಜುಗರ ಆಗುತ್ತದೆ. ಅವರು ಕಾರ್ಯಕ್ರಮವನ್ನು ಪೂರ್ತಿ ನೋಡಿ ಆನಂದಿಸಬೇಕೆಂದು ಬಂದಿರುತ್ತಾರೆ. ಆಸನದ ಅವ್ಯವಸ್ಥೆಯಿಂದ ಅವರು ಅರ್ಧಕ್ಕೆ ಜಾಗ ಖಾಲಿ ಮಾಡುತ್ತಾರೆ. ಆಡಳಿತ ಮಂಡಳಿಯವರು ಒಂದು ಕಾರ್ಯಕ್ರಮಕ್ಕೆ ಸುಮಾರು 18ರಿಂದ 20 ಸಾವಿರ ರೂ.ಗಳನ್ನು ಬಾಡಿಗೆಯಾಗಿ ಪಡೆದುಕೊಳ್ಳುತ್ತಾರೆ. ಆಸನಗಳನ್ನು ದೊಡ್ಡದಾಗಿ ಮಾಡಿಸಿ, ಕುಷನ್‌ನಿಂದ ನವೀಕರಣ ಮಾಡಬೇಕಿದೆ. ಇದು ಬಹಳ ವರ್ಷಗಳಿಂದ ಹೀಗೆ ಇದೆ. ಇದು ಬಿಟ್ಟರೆ ಧ್ವನಿವರ್ಧಕ ಹಾಗೂ ವೇದಿಕೆ ಸಮಸ್ಯೆ ಏನೂ ಕಾಣಿಸುತ್ತಿಲ್ಲ. ತಿಂಗಳಲ್ಲಿ ಸುಮಾರು 10ರಿಂದ 15 ಕಾರ್ಯಕ್ರಮಗಳು ಈ ಸಭಾಂಗಣದಲ್ಲಿ ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಆಡಳಿತ ಮಂಡಳಿಯವರು ಮುತುವರ್ಜಿ ವಹಿಸಿ ಈಗಿರುವ ಆಸನಗಳನ್ನು ತೆಗೆದು, ನೂತನ ಆಸನಗಳಾಗಿ ಪರಿವರ್ತಿಸಬೇಕೆಂದು ವಿನಂತಿ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಅಂಕೇಗೌಡರಿಗೆ ಪದ್ಮಶ್ರೀ ಶ್ಲಾಘನೀಯ ಕಾರ್ಯ

ಮಾನ್ಯರೆ,

ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಜನಿಸಿದ ಪುಸ್ತಕ ಪ್ರೇಮಿ ಅಂಕೇಗೌಡರು, ಹರಳಹಳ್ಳಿ ಗ್ರಾಮದಲ್ಲಿ ಪುಸ್ತಕ ಮನೆ ಆರಂಭಿಸಿ ತಮ್ಮ ಬೃಹತ್ ಗ್ರಂಥಾಲಯದಲ್ಲಿ 15 ಲಕ್ಷಕ್ಕಿಂತ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ, ಅಕ್ಷರ ಕಲಿಯುವ ಮಕ್ಕಳಿಂದ ವಯೋವೃದ್ಧರ ತನಕ ಓದುವಂತಹ ಎಲ್ಲ ರೀತಿಯ ಅಪರೂಪದ ಪುಸ್ತಕಗಳು ಸಿಗುವಂತೆ ಮಾಡಿರುವ, ಇವರ ಸಾಮಾಜಿಕ ಸೇವೆಯನ್ನು ಕೇಂದ್ರ ಸರ್ಕಾರ ಗುರುತಿಸಿ ಪದ್ಮಶ್ರೀ ಪ್ರಶಸ್ತಿ ನೀಡಿರುವುದು ತುಂಬಾ ಶ್ಲಾಘನೀಯ. ಯಾವುದೇ ಪ್ರಶಸ್ತಿಯ ಬಗ್ಗೆ ಆಸಕ್ತಿ ಇಲ್ಲದ ನನಗೆ ಕೇಂದ್ರ ಸರ್ಕಾರ ಕೊಡಮಾಡುವ ಪದ್ಮಶ್ರೀ ಮಹೋನ್ನತ ಪ್ರಶಸ್ತಿ ಬಂದಿರುವುದು ಸಂತಸ ತಂದಿದೆ ಎಂದು ಹೇಳಿರುವುದು ಮನ ಮೆಚ್ಚುವಂತದ್ದು. ತಮ್ಮ ಸಂಪಾದನೆಯ 60 ಪರ್ಸೆಂಟ್ ಹಣವನ್ನು ಪುಸ್ತಕಗಳಿಗೆ ವಿನಿಯೋಗಿಸಿ ತಮ್ಮ ಪುಸ್ತಕ ಪ್ರೇಮವನ್ನು ಬಹು ಎತ್ತರಕ್ಕೆ ಕೊಂಡೊಯ್ದ ಇವರಿಗೆ ಎಲ್ಲಾ ರೀತಿಯಲ್ಲೂ ಸಹಕಾರ ನೀಡಿದ ಇವರ ಪತ್ನಿಯ ಸೇವೆಯನ್ನು ಅಂಕೇಗೌಡರು ಪ್ರತಿದಿನವೂ ನೆನೆಯುವುದು ಸ್ವಾಗತಾರ್ಹ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಉದ್ಯೋಗ ವಯೋಮಿತಿ ಸಡಿಲಿಕೆ ಸ್ವಾಗತಾರ್ಹ

ಮಾನ್ಯರೆ,

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ವಯೋಮಿತಿ ಸಡಲಿಕೆ 35ಕ್ಕೆ ಏರಿಕೆ ಮಾಡಿ ತೀರ್ಮಾನ ಕೈಗೊಳ್ಳಲಾಗಿದೆ. ವಿವಿಧ ವರ್ಗದವರಿಗೆ 38 ಎಂದು ನಿಗದಿಪಡಿಸಿದ್ದಾರೆ. ಇದು ಸರ್ಕಾರಿ ಕೆಲಸದ ನಿರೀಕ್ಷೆಯಲ್ಲಿರುವವರಿಗೆ ಸಂತಸ ತಂದಿದೆ.

ಹಲವಾರು ಡಿಗ್ರಿಗಳನ್ನು ತೆಗೆದುಕೊಂಡರು ಕೆಲವೊಮ್ಮೆ ಅರ್ಹತಾ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡು ನಿರಾಸೆಗೊಳ್ಳುತ್ತಿದ್ದರು. ವಯೋಮಿತಿ ಹೆಚ್ಚಾದ ಕಾರಣ ಸರ್ಕಾರಿ ಕೆಲಸಕ್ಕೆ ತಿಲಾಂಜಲಿಯಾಗು ತ್ತಿತ್ತು. ಯಾವುದೇ ಕೌಶಲ್ಯವಿದ್ದರೂ ಸಾಲಕ್ಕೆ ಹೆದರಿ ಸ್ವಯಂ ಉದ್ಯೋಗ ಪಡೆಯಲು ಹಿಂಜರಿಯುತ್ತಿದ್ದರು. ತಮ್ಮ ಪ್ರಯತ್ನದಿಂದ ಸರ್ಕಾರಿ ಕೆಲಸ ಗಿಟ್ಟಿಸಿಕೊಳ್ಳಲು ಅವಕಾಶ ಸಿಕ್ಕಂತಾಗಿದೆ. ಹೆಣ್ಣು ಮಕ್ಕಳಿಗೆ ಈ ಯೋಜನೆ ತುಂಬಾ ಅನುಕೂಲಕರವಾಗಿದೆ. ತಮ್ಮ ತಾಯಿತನದ ಜವಾಬ್ದಾರಿಯನ್ನು ನಿಭಾಯಿಸಲು ಕುಟುಂಬಕ್ಕೆ ಸಹಕಾರ ನೀಡಲು ಸಹಾಯಕವಾಗಿದೆ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ವಾಹನಗಳ ಓಡಾಟಕ್ಕೆ ಅನುವು ಮಾಡಿ

ಮಾನ್ಯರೇ,

ಪಾಂಡವಪುರದಿಂದ 4 ಕಿಲೋ ಮೀಟರ್ ದೂರದ ಬನಘಟ್ಟ ಗ್ರಾಮದ ಬಳಿ ಆಂಜನೇಯ ದೇವಸ್ಥಾನದ ಹತ್ತಿರ ಹೊಸದಾಗಿ ನೇರ ರಸ್ತೆಗೆ ಸೇತುವೆ ನಿರ್ಮಾಣ ಮಾಡಿ ಉದ್ಘಾಟನೆ ಸಹ ಮುಗಿಯಿತು. ಆದರೆ ಈ ರಸ್ತೆಯಲ್ಲಿ ಇನ್ನೂ ವಾಹನಗಳ ಓಡಾಟಕ್ಕೆ ಅನುವು ಮಾಡಿಲ್ಲ.

ಕಾರಣ ಏನೋ ಗೊತ್ತಿಲ್ಲ. ಕಾಮಗಾರಿ ಸಂಪೂರ್ಣ ಆಗಿಲ್ವೋ ಎಂಬ ಅನುಮಾನ? ಕಾಮಗಾರಿ ಮುಗಿಯದೆ ಉದ್ಘಾಟನೆ ಮಾಡುವ ಅವಶ್ಯಕತೆ ಏನಿತ್ತು? ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ಆದಷ್ಟು ಬೇಗನೆ ವಾಹನಗಳು ಓಡಾಡಲು ಅನುವು ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಕುಣಿಗಲ್ ಜಯಣ್ಣ, ಪಾಂಡವಪುರ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ಸ್ವಚ್ಛ ಮೈಸೂರು ಮರೀಚಿಕೆ ಆಗದಿರಲಿ!

ಮತ್ತೆ ಸ್ವಚ್ಛ ಸರ್ವೇಕ್ಷಣ್ ಪ್ರಾರಂಭವಾಗುತ್ತಿದೆ. 2025–26ನೇ ಸಾಲಿಗೆ ಭಾರತದ ಸ್ವಚ್ಛ ನಗರಿ ಸ್ಥಾನಕ್ಕೆ ಮೈಸೂರು ಮತ್ತೆ ಸ್ಪರ್ಧಿಸುತ್ತಿದೆ. ಮೊದಲನೇ ಸ್ಥಾನದಿಂದ ಕುಸಿದ ಮೈಸೂರು ಮತ್ತೆ ಆ ಸ್ಥಾನ ಗಳಿಸಲು ಸನ್ನದ್ಧವಾಗುತ್ತಿದೆ.



ನೀವು ಈಗಾಗಲೇ ದಿನಪತ್ರಿಕೆಗಳಲ್ಲಿ ಆ ಕುರಿತ ವರದಿ ಓದಿರುತ್ತೀರಿ. ನಗರಪಾಲಿಕೆ, ಮುನಿಸಿಪಾಲಿಟಿಗಳು ನಡೆಸಿದ, ನಡೆಸಲಿರುವ ನಡೆಸಬಹುದಾದ ಮೀಟಿಂಗ್‌ಗಳ ವರದಿಗಳು ಬಾಯಿಪಾಠವೇ ಆಗಿರಬಹುದು. ಪತ್ರಿಕಾಗೋಷ್ಠಿಗಳೂ ನಡೆಯಬಹುದು.

ಈಗಾಗಲೇ 2015, 2016ರಲ್ಲಿ ಮೊದಲ ಸ್ಥಾನ ಪಡೆದಿದ್ದ ಮೈಸೂರು, 2017ರಲ್ಲಿ 5ನೇ ಸ್ಥಾನ ಪಡೆದಿತ್ತು. 2018ರಲ್ಲಿ 8, 2019ರಲ್ಲಿ 3, 2020ರಲ್ಲಿ 5, 2021ರಲ್ಲಿ 11, 2022ರಲ್ಲಿ 8, 2023ರಲ್ಲಿ 27ನೇ ಸ್ಥಾನ ಪಡೆದುಕೊಂಡಿತ್ತು. 2024–25ನೇ ಸಾಲಿನಲ್ಲಿ ಸೂಪರ್ ಸ್ವಚ್ಛ ಲೀಗ್ ಪ್ರಶಸ್ತಿ ಪಡೆದಾಗ ನಾವೆಲ್ಲಾ ಸಂಭ್ರಮಿಸಿದ್ದೆವು.

12,500 ಅಂಕಗಳಿಗೆ ಸ್ಪರ್ಧೆ ನಡೆಯಲಿದೆ. 10 ವಿಭಾಗಗಳಲ್ಲಿ ಮೌಲ್ಯಮಾಪನ ನಡೆಯಲಿದೆ. ವಿಝುಬಲ್ ಕ್ಲೆನ್ಲಿನೆಸ್, ತ್ಯಾಜ್ಯ ವಿಂಗಡಣೆ, ಸಂಗ್ರಹ, ಸಾಗಾಟ, ವಿಲೇವಾರಿ, ಘನತ್ಯಾಜ್ಯ ನಿರ್ವಹಣೆ, ಸ್ಯಾನಿಟೇಷನ್, ಮಲೀನ ನೀರಿನ ನಿರ್ವಹಣೆ, ಸ್ವಚ್ಛತೆ ಕುರಿತು ಜನಜಾಗೃತಿ, ಸ್ವಚ್ಛತೆ ಪಾಲಿಸದಿರುವವರಿಗೆ ದಂಡ ವಿಧಿಸುವುದು, ನೈರ್ಮಲ್ಯ ಕಾರ್ಮಿಕರ ಕಲ್ಯಾಣ ಯೋಜನೆಗಳು, ನಾಗರಿಕರ ಫೀಡ್ ಬ್ಯಾಕ್‌ಗೆ ಹೀಗೆ ಹಲವು ಹಂತಗಳಿಗೆ ಅಂಕಗಳನ್ನು ನೀಡಲಾಗುತ್ತದೆ.

ಈಗಾಗಲೇ ಸ್ವಚ್ಛತಾ ಪಖ್ವಾಡ ಅಂದರೆ ಸ್ವಚ್ಛತಾ ಪಾಕ್ಷಿಕ ಆರಂಭವಾಗಿದ್ದು, ಕೇಂದ್ರ ಸರ್ಕಾರವೇ ಎಲ್ಲ ಕಚೇರಿಗಳಿಗೆ ಮಾರ್ಗಸೂಚಿಯನ್ನು ಕಳುಹಿಸಿದೆ. ಇದೇ ತಿಂಗಳ 16ರಿಂದ ಆರಂಭವಾಗಿರುವ ಪಾಕ್ಷಿಕದಲ್ಲಿ, ಸರ್ಕಾರವೇ ಯಾವ ಯಾವ ದಿನಗಳಂದು ಏನೇನು ಮಾಡಬೇಕೆಂದು ನಿರ್ದೇಶನ ನೀಡಿದೆ.

ಒಮ್ಮೆ ನೆನಪಿಸಿಕೊಳ್ಳಿ ಯಾವುದಾದರೂ ಹಬ್ಬ ಬರುತ್ತಿದೆ ಎಂದರೆ, ಅದರಲ್ಲೂ ಯುಗಾದಿ, ದಸರೆ, ದೀಪಾವಳಿಗೆ ನಾವು ಹೀಗೆಯೇ ಯೊಜನೆ ಹಾಕಿಕೊಂಡು (ಮನಸ್ಸಿನಲ್ಲಿಯೇ), ಒಂದು ಕಡೆಯಿಂದ ಮನೆಯನ್ನು ಸ್ವಚ್ಛಗೊಳಿಸಿಕೊಂಡು ಬರುತ್ತೇವೆ ಅಲ್ಲವೇ?

ಇಡೀ ದೇಶವನ್ನೇ ತನ್ನ ಮನೆ ಎಂದುಕೊಂಡು, ಅದರ ಸಂಪೂರ್ಣ, ಪರಿಪೂರ್ಣ ಸ್ವಚ್ಛತೆಗೆ ಸ್ವಚ್ಛಭಾರತ್ ಎಂಬ ಕನಸಿನ ಯೋಜನೆಯನ್ನು ಜಾರಿಗೆ ತಂದ ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕನಸು ಕನಸಾಗಿಯೇ ಉಳಿದಿದೆ ಏಕೆ? ಮೈಸೂರಿಗೆ ಈಗಾಗಲೇ ಹಲವಾರು ಬಾರಿ ಸ್ವಚ್ಛ ನಗರ ಎಂಬ ಬಿರುದು ಬಂದ ಮೇಲೂ ಈ ಪ್ರಶ್ನೆಯ ಅಗತ್ಯವಿಲ್ಲ ಎಂದು ಯೋಚಿಸುತ್ತಿದ್ದೀರಾ?

ಪ್ರಶಸ್ತಿಯನ್ನು ಒಂದು ಕ್ಷಣ ಮರೆಯೋಣ. ನಮ್ಮ ಆತ್ಮಸಾಕ್ಷಿಯನ್ನು ಕೇಳಿಕೊಳ್ಳೋಣ, ನಾವು ನೋಡಿರುವ ಮೈಸೂರನ್ನು ನಾವು ನಮ್ಮ ಕಣ್ಣಮುಂದೆ ತಂದುಕೊಳ್ಳೋಣ. ನಮ್ಮ ನಮ್ಮ (ಮನೆ ಬೇಡ! ಯಾಕೆಂದರೆ ಅದು ಯಾವಾಗಲೂ ಸ್ವಚ್ಛವೇ) ಬೀದಿಗಳನ್ನು ನೆನಪಿಸಿಕೊಳ್ಳೋಣ, ಅಕ್ಕಪಕ್ಕ ಇರುವ ಖಾಲಿ ಸೈಟುಗಳನ್ನು, ರಸ್ತೆಗಳ ತುದಿಗಳನ್ನು, ಮರಗಳ ಬುಡಗಳನ್ನು, ಉದ್ದ ಕಾಂಪೌಂಡು ಗೋಡೆಗಳನ್ನು, ರಿಂಗ್ ರೋಡ್‌ಗಳ ಫುಟ್‌ಪಾತ್‌ಗಳನ್ನು, ಲೈಟು ಕಂಬಗಳು–ಟ್ರಾನ್ಸ್‌ಫಾರ್ಮರ್‌ಗಳ ಕೆಳಗೆ, ರಸ್ತೆ ಪಕ್ಕದ ಚರಂಡಿಗಳು, ಪಾಳು ಬಿದ್ದಿರುವ ಮನೆ–ಕಟ್ಟಡಗಳು, ರೈಲ್ವೇ ಹಳಿಗಳ ಮೇಲೆ ಮತ್ತು ಅಕ್ಕ–ಪಕ್ಕ, ಕೆರೆಗಳು, ನದಿಗಳು, ಸಮುದ್ರಗಳು, ಮುಖ್ಯ ರಸ್ತೆಗಳ ಇಕ್ಕೆಲಗಳನ್ನೂ ಬಿಟ್ಟಿವರಲ್ಲ? ನಾನು ಯಾವುದಾದರೂ ಸ್ಥಳವನ್ನು ಮರೆತಿದ್ದರೆ ಕ್ಷಮೆಯಿರಲಿ.

ಈ ಎಲ್ಲ ಸ್ಥಳಗಳನ್ನು ಏಕೆ ನೆನಪಿಸಿಕೊಳ್ಳಬೇಕೆಂದು ಗೊತ್ತಾಯಿತೇ!? ನಾವೆಲ್ಲ, ಅಂದರೆ ನಾಗರಿಕರು ಕಸ ಹಾಕಲು ಇಷ್ಟಪಡುವ ತಾಣಗಳಿವು. ಅಲ್ಲವೇ? ನಾನು ಸುಳ್ಳು ಹೇಳುತ್ತಿಲ್ಲ ತಾನೆ?

ಕಸದ ಸಮಸ್ಯೆ ಅದೆಷ್ಟು ಅಸಹ್ಯಕರವಾಗಿ ಬೆಳೆದುಬಿಟ್ಟಿದೆ ಎಂದರೆ, ಅದಕ್ಕೆ ಪರಿಹಾರವೇ ಇಲ್ಲವೇನೋ ಎಂಬಂತೆ. ಬಹುಶಃ ಬೇರೆ ಗ್ರಹಗಳಿಗೆ ಸಾಗಿಸಬೇಕಾಗಿದೆಯಾ ನಾವು ಕಸದ ಹಿಮಾಲಯವನ್ನು?

ಹಿಂದೊಮ್ಮೆ ನಾಗರಿಕ ಪ್ರಜ್ಞೆಯ ಬಗ್ಗೆ ಬರೆದಾಗಲೂ ಕಸದ ವಿಷಯ ಬಂದಿತ್ತು. ಆದರೆ ಸ್ವಚ್ಛ ಸರ್ವೇಕ್ಷಣ್ ಪ್ರಾರಂಭವಾಗಿರುವುದರಿಂದ, Exclusive ಆಗಿ ಇದೇ ಮಾತನಾಡೋಣ.

ವಿದ್ಯಾವಂತರಿಂದಲೇ ತುಂಬಿ ತುಳುಕುತ್ತಿರುವ, ಶಿಕ್ಷಣ ಕಾಶಿಯಾಗಿರುವ ಮೈಸೂರು ಕಸವೆಂಬ ವಿಷವರ್ತುಲದಲ್ಲಿ ಸಿಕ್ಕು ನರಳುತ್ತಿದೆ ಎಂದರೆ, ತಪ್ಪು ಯಾರದು ನಾಗರಿಕ ಪ್ರಜ್ಞೆ ಇಲ್ಲದ ನಾಗರಿಕರದೇ? ನಿರ್ವಹಿಸುವಲ್ಲಿ ಸೋತಿರುವ ಅಧಿಕಾರಿ ವರ್ಗದ್ದೇ, ಯಾರು ಹೊಣೆ?

ಇಬ್ಬರೂ ಸರಿಸಮಾನ ಹೊಣೆಗಾರರು ಎಂದರೆ ತಪ್ಪಾಗುವುದಿಲ್ಲ. ನಮ್ಮನ್ನು ಮೊದಲು ಅವಲೋಕನ ಮಾಡಿಕೊಳ್ಳೋಣ.

ಬೆಳಗ್ಗೆ ಎದ್ದಾಗಿನಿಂದ, ಪಕ್ಕದ ಮನೆ ಕಡೆಗೆ ಕಸಗುಡಿಸಿ ತಳ್ಳುವುದರಿಂದ ನಮ್ಮ ದಿನಚರಿ ಪ್ರಾರಂಭವಾದರೆ, ನಂತರ ಅದು ಗಾಡಿಯಲ್ಲಿ ಕುಳಿತು ಸಿಕ್ಕಸಿಕ್ಕ ಕಡೆ ಕಸ ಎಸೆಯುವುದರೊಂದಿಗೆ ಮುಂದುವರೆಯುತ್ತದೆ. ವಾಕಿಂಗ್‌ಗೆ ಹೊರಡುವಾಗ ಎಸೆದು ಹೋಗಲು ಕೈಲಿ ಹಿಡಿದೇ ಹೋಗುತ್ತೇವೆ. ನಂತರ ಆಫೀಸು, ಶಾಲಾ–ಕಾಲೇಜುಗಳಲ್ಲಿಯೂ ಕಸದಬುಟ್ಟಿ ಇರುವುದನ್ನು ಮರೆತೇ ಬಿಡುತ್ತೇವೆ.

ಮನೆಗಳಲ್ಲಿ ಹಸಿ ಕಸ, ಒಣ ಕಸಗಳನ್ನು ಬೇರೆ ಮಾಡುವುದಿಲ್ಲ. ನಮ್ಮ ಮನೆಯ ಬಳಿ ಕಸ ಸಂಗ್ರಹ ಮಾಡಲು ಬರುವ ಪೌರ ಕಾರ್ಮಿಕ ಮಹಿಳೆ ಬಹಳ ಜವಾಬ್ದಾರಿ ಉಳ್ಳವರು. ಕಸ ಸಂಗ್ರಹಣೆಗೆ ಬಂದಾಗ ನಮ್ಮ ನೆರೆಯವರೊಬ್ಬರ ಜೊತೆ ಅವರ ಮಾತಿನ ಚಕಮಕಿ ನಡೆದೇ ನಡೆಯುತ್ತದೆ. ಕಸ ಬೇರ್ಪಡಿಸದ ಆ ಗೃಹಿಣಿಯ ವೊಂಡುವಾದಕ್ಕೆ ಸೋತು ಈಕೆಯೇ ಕಸ

> “ ಮೈಸೂರಲ್ಲಿ ಮುಖ್ಯರಸ್ತೆಗಳು ಸ್ವಚ್ಛವಾಗಿವೆ, ನಿಜವೇ. ಸ್ವಲ್ಪ ಅಲ್ಲೇ ತಿರುಗಿ, ಮುಖ್ಯರಸ್ತೆಯ ಹಿಂದಿನ ರಸ್ತೆಗೆ ಹೋಗಿ ನೋಡಿ? ಯಾವುದೇ ಕಾರ್ನರ್ ನೋಡಿ ಅಲ್ಲಿ ಕಸ, ಮರಗಳ ಬುಡದಲ್ಲಿ ಮದ್ಯದ ಬಾಟಲಿ ಯೊಂದಿಗೆ ನಾನಾ ಕಸ. ಖಾಲಿ ಸೈಟ್‌ನಲ್ಲಿ ಕಸ. ಕಸ ಎಸೆದು ಹೋಗುವವರನ್ನು ದಂಡಿಸಲು ಯಾರೂ ಇಲ್ಲ. ಪಾಪ ಪೌರ ಕಾರ್ಮಿಕರು ಅದನ್ನೆಲ್ಲ ಎತ್ತಿಕೊಂಡು ಹೋದ ಕೆಲವೇ ಕ್ಷಣಗಳಿಗೆ ಸ್ವಲ್ಪವೂ ಅಪರಾಧ ಪ್ರಜ್ಞೆ ಇಲ್ಲದೆ ನಿರ್ವಿಕಾರವಾಗಿ ಕಾರು, ಗಾಡಿಗಳಲ್ಲಿ ಅಥವಾ ನಡೆದುಕೊಂಡೇ ಬಂದು ಕಸ ಎಸೆಯುತ್ತಾರೆ. ಎಲ್ಲಾ ಸಮಯದಲ್ಲಿಯೂ ಅಧಿಕಾರಿಗಳು ನಿಲ್ಲಲಾಗುತ್ತದೆಯೇ ಎಂದು ನೀವು ಮೂಗು ಮುರಿಯಬಹುದು.

ಬೇರ್ಪಡಿಸಿಕೊಳ್ಳ ತೊಡಗಿದ್ದಾರೆ. ಆಕೆ ಸ್ವಲ್ಪವೂ ನಾಚಿಕೆಯಿಲ್ಲದೆ ಕಸ ತಂದಿಡು ತ್ತಾರೆ. ಇನ್ನೂ ಸ್ವಲ್ಪ ಜನ ಈ ರಗಳೆಯೇ ಬೇಡವೆಂದು ನಸುಗತ್ತಲಿನಲ್ಲಿ ಕಾಂಪೌಂಡ್ ಹುಡುಕಿ ಹೊರಡುತ್ತಾರೆ!

ಕುಕ್ಕರಹಳ್ಳಿ ಕೆರೆಯಲ್ಲಿ ಬೆಳಗ್ಗೆ ವಾಯುವಿಹಾರಕ್ಕೆ ಬರುವವರು ತಮ್ಮ ಆರೋಗ್ಯದ ಬಗ್ಗೆ ಅತೀವ ಕಾಳಜಿಯುಳ್ಳ ವಿದ್ಯಾವಂತರು. ಅದೇ ಕುಕ್ಕರಹಳ್ಳಿ ಕೆರೆಯ ಸುತ್ತಾ ವರ್ಷಕ್ಕೆ ಹತ್ತಾರು ಬಾರಿಯಾದರು ಸ್ವಯಂ ಸೇವಕರು ಸ್ವಚ್ಛತಾ ಅಭಿಯಾನ ಮಾಡಿ ಟನ್‌ಗಟ್ಟಳೆ ಕಸ ಸಂಗ್ರಹಿಸುತ್ತಾರೆ. ಕಳೆದ ವಾರ ಕೂಡ ನಡೆದದ್ದನ್ನು 'ಮೈಸೂರು ಮಿತ್ರ' ವರದಿ ಮಾಡಿತ್ತು. ಬಿಸ್ಕೆಟ್, ಚಿಪ್ಸ್ ಪ್ಯಾಕೆಟ್‌ಗಳು, ನೀರಿನ ಬಾಟಲಿಗಳದೇ ಪಾರಮ್ಯ ಅಲ್ಲಿ. ಸಾರ್ವಜನಿಕ ಸ್ಥಳಗಳಲ್ಲಿ ಹೀಗೆ ಮಾಲಿನ್ಯ ಉಂಟು ಮಾಡುವುದೆಂದರೆ ಇವರಿಗೆ ಅದೇನು ವಿಕೃತ ಸಂತೋಷವೋ.

ಇನ್ನು ಮಾರ್ಕೆಟ್ ಸುತ್ತಮುತ್ತ, ಧನ್ವಂತರಿ ರಸ್ತೆ, ಲ್ಯಾನ್ಸ್‌ಡೌನ್ ಕಟ್ಟಡ, ಕೆ ಆರ್ ಸರ್ಕಲ್ ಸುತ್ತ ಇರುವ ಸಣ್ಣ ರಸ್ತೆಗಳಲ್ಲಿ ಓಡಾಡಿದ್ದರೆ ನಿಮಗೆ ತಿಳಿದಿರುತ್ತದೆ, ಅವುಗಳು ಸಾರ್ವಜನಿಕ ಮೂತ್ರಾಲಯಗಳಂತಾಗಿ ಅದೆಷ್ಟು ಕೊಳೆತು ನಾರುತ್ತಿವೆ ಎಂಬುದು. ಸರ್ಕಾರೀ ಆಸ್ಪತ್ರೆ, ಕಾಲೇಜು, ಕೋರ್ಟು, ಕಚೇರಿಗಳ ಶೌಚಾಲಯಗಳ ಅಸ್ವಚ್ಛತೆ ಬಗ್ಗೆ ಪತ್ರಿಕೆಗಳಲ್ಲಿ ವರದಿ ಬರುತ್ತಲೇ ಇರುತ್ತವೆ.

ಅದು ಮಾತ್ರವಲ್ಲ, ಅಲ್ಲೆಲ್ಲಾ ಕಸದ ವಿಲೇವಾರಿಯೂ ಸೂಕ್ತವಾಗಿ ಆಗುವುದಿಲ್ಲ. ಕಸದ ತೊಟ್ಟಿಗಳು ತುಂಬಿ ತುಳುಕಿ ಸುತ್ತ ಹತ್ತಾರು ಮೀಟರ್‌ನಲ್ಲಿ ಕಸವಿರುತ್ತದೆ. ಈ ಎಲ್ಲ ಸ್ಥಳಗಳಲ್ಲೂ ವಿದ್ಯಾವಂತರೇ ಕೆಲಸ ಮಾಡುವುದು, ಭೇಟಿ ನೀಡುವವರೂ ನಾಗರಿಕರೇ. ಯಾಕೆ ಯಾರೂ ಜವಾಬ್ದಾರಿಯಿಂದ ವರ್ತಿಸುವುದಿಲ್ಲ

ಸರ್ಕಾರಿ ಕಚೇರಿಗಳಲ್ಲಿ ಶಾಲಾ–ಕಾಲೇಜುಗಳಲ್ಲಿ ಹಲವೆಡೆ, ಕೈಮೇಲೆ ಎತ್ತಿದರೆ ಜೇಡರಬಲೆ ಕೈಗೆ ಅಂಟುತ್ತದೆ. ಮಾಮೂಲೀ ಎತ್ತರಕ್ಕಿಂತ ಸ್ವಲ್ಪ ಹೆಚ್ಚಿನ ಎತ್ತರದ ವ್ಯಕ್ತಿ ಬಂದರೆ ಆತನ/ಆಕೆಯ ಕೂದಲಿಗೆ ಜೇಡರ ಬಲೆ ಅಂಟುತ್ತದೆ. ಅಲ್ಲಿನ ಕಾರಿಡಾರ್‌ಗಳಲ್ಲಿ ಮುರಿದ ಟೇಬಲ್ ಕುರ್ಚಿಗಳು ಧೂಳು ಹಿಡಿದು ಕಣ್ಣಿಗೆ ರಾಚುವಂತೆ ಬಿದ್ದಿರುತ್ತವೆ. ಇನ್ನು ಪಾರಿವಾಳಗಳ ಹಾವಳಿಯಂತೂ ಹೇಳತೀರದಷ್ಟು, ಶಾಲಾ–ಕಾಲೇಜುಗಳಲ್ಲಿ ಬೆಂಚುಗಳೂ ಪಾರಿವಾಳಗಳ ಮಲ ವಿಸರ್ಜನೆಯಿಂದ ಕೊಳಕಾಗಿ, ಮಕ್ಕಳು ಕೂರಲು ಆಗದಂತಹ ಪರಿಸ್ಥಿತಿ.

ಏನು ಮಾಡುವುದು?

ಇದಕ್ಕೆಲ್ಲಾ ನಮ್ಮ ಚುನಾಯಿತ ಪ್ರತಿನಿಧಿಗಳು ಮತ್ತು ಆ ವಿಭಾಗದ ಅಧಿಕಾರಿಗಳೂ ಕಾರಣರೇ. ಈ ರೀತಿಯ ಅಭಿಯಾನಗಳು, ದಸರೆ ಮತ್ತಿತರ ಉತ್ಸವಗಳು ಬಂದಾಗ ಮಾತ್ರ ನಗರಗಳ ಸ್ವಚ್ಛತೆಯೆಡೆಗೆ ಇನ್ನಿಲ್ಲದಂತೆ ಗಮನ ವಹಿಸುತ್ತಾರೆ. ಉಳಿದ ಸಮಯದಲ್ಲಿ? ಈಗಲೂ ಅಷ್ಟೇ, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಬೋರ್ಡ್ ರೂಮ್‌ನಲ್ಲಿ ಮೀಟಿಂಗ್ ಮಾಡಿ ಸುತ್ತೋಲೆ ಹೊರಡಿಸುತ್ತಾರೆ. ಕಾರ್ಯರೂಪಕ್ಕೆ ತರಬೇಕಾದ ಪೌರಕಾರ್ಮಿಕರಿಗೂ ಸೂಚನೆಗಳು ಹೋಗುತ್ತವೆ. ಎಲ್ಲವೂ ಸರಿಯೇ. ಆದರೆ ಎಷ್ಟು ಜನ ಅಧಿಕಾರಿಗಳು ಬೀದಿಗಿಳಿದು ಆಗಾಗ ಸರ್ವೇಕ್ಷಣೆ ನಡೆಸಿ ಸ್ವಚ್ಛತೆಯ ಪರಿಪಾಲನೆ ಹೇಗಾಗುತ್ತಿದೆ ಎಂದು ವೀಕ್ಷಿಸಿದ್ದಾರೆ?

ನಾನು ಆಗಲೇ ಹೇಳಿದೆ, ನಮ್ಮ ನೆರೆಯವರು ಪೌರ ಕಾರ್ಮಿಕರ ಜೊತೆ ಜಗಳವಾಡುವ ಬಗ್ಗೆ, ಬಹುಶಃ ಇದು ಎಲ್ಲೆಡೆ ನಡೆಯುವಂಥದ್ದೇ. ಏಕೆ ಕಸ ಸಂಗ್ರಹಿಸುವ ಪೌರ ಕಾರ್ಮಿಕರ ಕೆಲಸದ ಸಮಯದಲ್ಲಿ ಯಾವ ಜನಪ್ರತಿನಿಧಿಯಾಗಲೀ, ಕರ್ತವ್ಯನಿರತ ಅಧಿಕಾರಿಯಾಗಲಿ ಅವರ ಜೊತೆ ಬಂದು ಜನರಿಗೆ ತಿಳುವಳಿಕೆ ನೀಡುವುದೋ, ಎಚ್ಚರಿಕೆ ಕೊಡುವುದೋ ಮಾಡುವುದಿಲ್ಲ? ಮೊಂಡ ಭಂಡ ಅನಾಗರಿಕರ ಜೊತೆ ಪೌರಕಾರ್ಮಿಕರು ಎಷ್ಟೆಂದು ಹೆಣಗುತ್ತಾರೆ? ಕುಕ್ಕರಹಳ್ಳಿಕೆರೆ, ಲಿಂಗಾಂಬುಧಿಕೆರೆ, ಮಾರ್ಕೆಟ್ ನಂತಹ ಜನನಿಬಿಡ ಸ್ಥಳಗಳಿಗೆ ನಿಯಮಿತವಾಗಿ ಭೇಟಿ ನೀಡಿ ಏಕೆ ಜಾಗೃತಿ ಮೂಡಿಸಲು ಕೆಲಸ ಮಾಡುವುದಿಲ್ಲ? ಮತ ಯಾಚನೆಗಾಗಿ ಓಡಾಡಿದ ಬೀದಿಗಳಿಗೆ ಮತ್ತೆ ಕಾಲಿಡಬಾರದೆ?

ಮೈಸೂರಿನಲ್ಲಿ ಮುಖ್ಯರಸ್ತೆಗಳು ಸ್ವಚ್ಛವಾಗಿವೆ, ನಿಜವೇ. ಸ್ವಲ್ಪ ಅಲ್ಲೇ ತಿರುಗಿ, ಮುಖ್ಯರಸ್ತೆಯ ಹಿಂದಿನ ರಸ್ತೆಗೆ ಹೋಗಿ ನೋಡಿ? ಯಾವುದೇ ಕಾರ್ನರ್ ನೋಡಿ ಅಲ್ಲಿ ಕಸ, ಮರಗಳ ಬುಡದಲ್ಲಿ ಮದ್ಯದ ಬಾಟಲಿಯೊಂದಿಗೆ ನಾನಾ ಕಸ. ಖಾಲಿ ಸೈಟ್‌ನಲ್ಲಿ ಕಸ. ಕಸ ಎಸೆದು ಹೋಗುವವರನ್ನು ದಂಡಿಸಲು ಯಾರೂ ಇಲ್ಲ. ಪಾಪ ಪೌರಕಾರ್ಮಿಕರು ಅದನ್ನೆಲ್ಲ ಎತ್ತಿಕೊಂಡು ಹೋದ ಕೆಲವೇ ಕ್ಷಣಗಳಿಗೆ ಸ್ವಲ್ಪವೂ ಅಪರಾಧಪ್ರಜ್ಞೆ ಇಲ್ಲದೆ ನಿರ್ವಿಕಾರವಾಗಿ ಕಾರು, ಗಾಡಿಗಳಲ್ಲಿ ಅಥವಾ ನಡೆದುಕೊಂಡೇ ಬಂದು ಕಸ ಎಸೆಯುತ್ತಾರೆ. ಎಲ್ಲಾ ಸಮಯದಲ್ಲಿಯೂ ಅಧಿಕಾರಿಗಳು ನಿಲ್ಲಲಾಗುತ್ತದೆಯೇ ಎಂದು ನೀವು ಮೂಗು ಮುರಿಯಬಹುದು.

ನಾನು ಹಲವು ಪ್ರಜ್ಞಾವಂತರ ಬಾಯಲ್ಲಿ ಕೇಳಿರುವ ಸಲಹೆಯನ್ನು ಇಲ್ಲಿ ಹೇಳುತ್ತಿದ್ದೇನೆ. ನಮ್ಮಲ್ಲಿ ಹಲವು ನಿರುದ್ಯೋಗಿ ಯುವಜನರಿದ್ದಾರೆ. ಪಾರ್ಟ್ ಟೈಮ್ ಕೆಲಸ ಮಾಡಲಿಚ್ಛಿಸುವ ವಿದ್ಯಾರ್ಥಿಗಳಿದ್ದಾರೆ. ಶಿಫ್ಟ್ ಪ್ರಕಾರ ಒಂದಷ್ಟು ಜನರನ್ನು ಗಲ್ಲಿ ಗಲ್ಲಿಗಳಲ್ಲಿ ನೇಮಿಸಿ ಅವರಿಗೆ ಗೌರವ ಧನ ನೀಡಿ. ಒಂದು ಚೂರಾದರೂ ಜಾಗೃತಿ ಉಂಟಾಗಬಹುದು. ಸ್ವಚ್ಛ ಸೇನಾನಿಗಳೆಂದು ಅವರನ್ನು ಕರೆಯೋಣ. ಕಸ ಎಸೆಯುವವರಿಗೆ ದಂಡ ಹಾಕುವ ಅಧಿಕಾರ ಅವರಿಗಿರಲಿ. ಅಪ್ರಾಯೋಗಿಕ ಎನಿಸಬಹುದು, ಎಲ್ಲೋ ಒಂದುಕಡೆ ಏನೋ ಪರಿಹಾರ ಕಂಡುಕೊಳ್ಳಲು Trial And Error ಮಾಡಲೇ ಬೇಕಲ್ಲ? ಅಥವಾ ಏನು ಮಾಡಬಹುದೆಂದು ಅಭಿಪ್ರಾಯ ಸಂಗ್ರಹಿಸಲಿ?

ಮೊನ್ನೆ ಮುಕ್ತಾಯವಾದ ಬಹುರೂಪಿ ನಾಟಕೋತ್ಸವದಲ್ಲಿ ತಿಂಡಿಗಳ ಮಳಿಗೆಗಳೂ ಇದ್ದವಷ್ಟೇ. ಅಲ್ಲಿ A4 ಗಾತ್ರದ ಹಾಳೆಗಳಲ್ಲಿ ಹಸಿ ಕಸ, ಒಣ ಕಸ ಬೇರ್ಪಡಿಸಿ ಎಂದು ಪ್ರಿಂಟ್ ಔಟ್ ತೆಗೆದು ಕಂಡೂ ಕಾಣದ ಹಾಗೆ ಎಲ್ಲ ಅಂಗಡಿಗಳ ಮುಂದೆ ಅಂಟಿಸಿದ್ದರೇನೋ ಸರಿ. ಆದರೆ ಅಲ್ಲಿ ಅದಕ್ಕೆ ವ್ಯವಸ್ಥೆ ಎಲ್ಲಿತ್ತು? ಬೇರೆ ಬೇರೆ ಕಸದ ಬುಟ್ಟಿಗಳೆಲ್ಲಿದ್ದವು? ಬಳಸಿ ಬಿಸಾಡುವ ತಟ್ಟೆ ಲೋಟ ಚಮಚೆಗಳಲ್ಲಿ ತಿಂದು, ಕುಡಿದು ತಟ್ಟೆ ಖಾಲಿ ಮಾಡಿದವರೂ, ಮಾಡದವರೂ ಹಾಕಿದ್ದು ಒಂದೇ ಬುಟ್ಟಿಗೆ.

ಸರ್ಕಾರವೇ ನಡೆಸಿದ ಯಶಸ್ವೀ ಕಾರ್ಯಕ್ರಮ. ಎಲ್ಲಿತ್ತು ಸ್ವಚ್ಛತೆಯ ಬಗೆಗೆ ಅರಿವು–ಜವಾಬ್ದಾರಿ ಉತ್ಸವ ಮುಗಿದ ಮಾರನೆಯ ದಿನ ಅಲ್ಲಿನ ಸಿಗ್ನಲ್‌ನಲ್ಲಿ ವಾಹನ ನಿಂತಾಗ ಮೂಗುಮುಚ್ಚಿ ನಿಲ್ಲಬೇಕಾದ ಪರಿಸ್ಥಿತಿ! ಇದೊಂದು ತಾಜಾ ಉದಾಹರಣೆ ಅಷ್ಟೇ. ಎಷ್ಟು ಸರ್ಕಾರೀ ಮತ್ತು ಖಾಸಗಿ ಕಾರ್ಯಕ್ರಮಗಳು ನಡೆಯುತ್ತವೆ, ನಾವೆಲ್ಲರೂ ಹಾಜರಾಗುತ್ತೇವೆ. ಈ ನಿಯಮಗಳ ಪಾಲನೆ ಎಲ್ಲಿ ಆಗುತ್ತಿದೆ? ದಸರೆಯ ಜಂಬುಸವಾರಿ ಮುಗಿದ ಮೇಲಿನ ಚಿತ್ರಣ ನೆನಪಾಯ್ತೇ ಕಸದ ವಿಶ್ವರೂಪ, ನಾಗರಿಕರ ಕಸಾವತಾರ ಹೇಳಲು ಇಷ್ಟು ಜಾಗ ಸಾಲದು. ಇದು ಕಣ್ಣಿಗೆ ಕಂಡದ್ದು. ಕಸದ ವಿಭಾಗೀಕರಣಕ್ಕೆ ಹೋದರೆ ತಲೆ ತಿರುಗುತ್ತದೆ.

ಮತ್ತೊಂದು ವಿಷಯ; ಇತ್ತೀಚಿಗೆ ಕಂಡ ಕಂಡಲ್ಲಿ ಕಸ ಹಾಕುವವರಿಗೆ ತಕ್ಕ ಪಾಠ ಕಲಿಸುವುದಾಗಿ ಮೈಸೂರು ನಗರಪಾಲಿಕೆ ಅಧಿಕಾರಿಗಳು, ಅಲ್ಲಲ್ಲಿ ಸೋಲಾರ್ ಆಧರಿತ ಕ್ಯಾಮರಾಗಳನ್ನು ಅಳವಡಿಸಿದ್ದರು. ಅಲ್ಲಿ ಕಸ ಹಾಕಿದವರ ಪತ್ತೆ ಹಚ್ಚಿ, ದಂಡ ವಿಧಿಸುವ ಘೋಷಣೆ ಮಾಡಿದ್ದರು. ಇದು ಒಂದು ರಾಜಕೀಯ ಘೋಷಣೆಯಂತಾಯ್ತು. ಕಾರಣ, ಕಸ ಹಾಕುವವರು ಕ್ಯಾಮರಾಗೆ ಪೋಸ್ ನೀಡುವಂತೆ ಕಸ ತಂದು ಸುರಿಯುತ್ತಿದ್ದಾರೆ. ಆದರೇನು ಯಾರೊಬ್ಬರಿಗೂ ದಂಡ ವಿಧಿಸಿದ ಬಗ್ಗೆ ಮಾಹಿತಿ ಮಾತ್ರ ಇಲ್ಲ. ಇದೆಲ್ಲಾ ಬರೀ ಅಧಿಕಾರಿಗಳ ಟ್ರಿಕ್ಸ್ ಅಷ್ಟೇ ಅನ್ನಿಸುತ್ತೆ!

ಮತ್ತೆ ಇನ್ನೊಂದು ಮಾತು; ಸ್ವಚ್ಛ ಭಾರತ ಎಂದರೆ ಅದು ಮೈಸೂರು, ಬೆಂಗಳೂರು, ದೆಹಲಿ, ಇಂದೋರ್ ಮಾತ್ರವಲ್ಲ. ನಮ್ಮ ಹಳ್ಳಿಗಳೂ ಸ್ವಚ್ಛ ಭಾರತದ ಭಾಗವಾಗಬೇಕು. ಹಳ್ಳಿಗಳಲ್ಲಿ ಯಾವ ರೀತಿಯಲ್ಲಿ ಅನೈರ್ಮಲ್ಯ ಇದೆ, ಜಾಗೃತಿ ಇಲ್ಲ ಎಂಬುದನ್ನೂ ಗಮನಿಸಬೇಕು. ಇಲ್ಲಿ ಅಧಿಕಾರಸ್ಥರು ಮಾತ್ರ ಹೊಣೆಗಾರರು ಎಂದರೆ ಅದು ಆತ್ಮವಂಚನೆ. ನಾವು ಅಷ್ಟೇ ಜವಾಬ್ದಾರರು. ಈಗಿನ ಹಿರಿಯ ಕಿರಿಯ ತಲೆಮಾರಿಗೆ ಜಾಗೃತಿ ಮೂಡಿಸಬೇಕು. ಮಕ್ಕಳಿಗೆ ಪಠ್ಯದಲ್ಲಿ ಕಡ್ಡಾಯವಾಗಿ ಸ್ವಚ್ಛತೆ, ನಾಗರಿಕ ಪ್ರಜ್ಞೆ ಹೇಳಿಕೊಡಲೇಬೇಕು. ಆಗ ಮಾತ್ರ ಸ್ವಚ್ಛ ಭಾರತದ ಕನಸು ನನಸಾಗಲು ಸಾಧ್ಯ. ಇಲ್ಲವಾದಲ್ಲಿ, ಸ್ವಚ್ಛ ಮೈಸೂರಿನ ಕತೆ ಸಂತೆ ಹೊತ್ತಿಗೆ ಮೂರು ಮೊಳ ನೇಯ್ದ ಮಾತಾಗುತ್ತದೆ.

ಗ್ಯಾರಂಟಿ ಯೋಜನೆಗಳನ್ನು ಟೀಕಿಸುವವರ ಸರ್ಕಾರಿ ಸೌಲಭ್ಯಗಳ ಕಡಿತಕ್ಕೆ ಆಗ್ರಹ

ಮೈಸೂರು, ಜ.28–ಸಾಮಾಜಿಕ ಜಾಲತಾಣಗಳಲ್ಲಿ ಕಾಂಗ್ರೆಸ್ ಸರ್ಕಾರದ ಬಹು ಜನಪ್ರಿಯ ಪಂಚ ಗ್ಯಾರಂಟಿ ಯೋಜನೆಗಳನ್ನು ಟೀಕಿಸುವ, ಕುಹಕ ಮತ್ತು ಗೇಲಿ ಮಾಡುವವರಿಗೆ ಸಿಗುತ್ತಿರುವ ಸೌಲಭ್ಯಗಳನ್ನು ಸರ್ಕಾರ ರದ್ದು ಮಾಡಬೇಕೆಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.



ಎನ್.ಭಾಸ್ಕರ್

ಗ್ಯಾರಂಟಿ ಯೋಜನೆ ಬೇಡ ಅನ್ನುವವರ ಸಮೀಕ್ಷೆ ಮಾಡುವಂತೆ ಸರ್ಕಾರವನ್ನು ಆಗ್ರಹಿಸಿರುವ ಅವರು ಸರ್ಕಾರದ ಸೌಲಭ್ಯ ಪಡೆದು ಟೀಕಿಸುವುದು ಬಡವರ ವಿರುದ್ಧದ ಅಸಹನೆಯ ಪರಾಕಾಷ್ಠೆಯಾಗಿದೆ. ಸಮೀಕ್ಷೆ ನಡೆಸಿದರೆ ಯಾವ ಸೌಲಭ್ಯ ಪಡೆಯುತ್ತಿದ್ದಾರೆ ಎಂಬುದು ಬಹಿರಂಗವಾಗಲಿದೆ ಎಂದು ಹೇಳಿದ್ದಾರೆ.

ಗ್ಯಾರಂಟಿ ಯೋಜನೆ ಬೇಡ ಅನ್ನುವವರು ಸರ್ಕಾರ ನೀಡುತ್ತಿರುವ ಉಚಿತ ಅಕ್ಕಿ, ವಿದ್ಯುತ್, ಮಹಿಳೆಯರು ಬಸ್ ಪ್ರಯಾಣ ಮಾಡುವಾಗ ಆಧಾರ್ ಕಾರ್ಡ್ ತೋರಿಸುವ ಬದಲು ಹಣ ಕೊಟ್ಟು ಪ್ರಯಾಣ ಮಾಡಬೇಕು. ಮಹಿಳೆಯರಿಗೆ ಪ್ರತಿ ತಿಂಗಳು ನೀಡುತ್ತಿರುವ 2 ಸಾವಿರ ಹಣ ಸೇರಿದಂತೆ ಯಾವ ಸೌಲಭ್ಯವು ಬೇಡವೆಂದು ಇಲಾಖೆಗೆ ಪತ್ರ ಬರೆದರೆ, ಬಡತನ ರೇಖೆ ಗಿಂತ ಕೆಳಗಿರುವ ಎಲ್ಲಾ ಜಾತಿ ಜನಾಂಗಕ್ಕೂ ಹೆಚ್ಚು ಸೌಲಭ್ಯ ಸಿಗುತ್ತದೆ. ಇದನ್ನು ಮಾಡದೇ ಸರ್ಕಾರದ ಎಲ್ಲಾ ಸೌಲಭ್ಯ ಪಡೆದವರೇ ಸಾಮಾಜಿಕ ಜಾಲತಾಣಗಳ ಮೂಲಕ ಸರ್ಕಾರವನ್ನು ಟೀಕಿಸುವುದು ಸರಿಯಲ್ಲ. ಗ್ಯಾರಂಟಿ ಯೋಜನೆಗಳ ಬಗ್ಗೆ ಆರಂಭದಿಂದಲೂ ಒಂದು ವರ್ಗದ ಜನರು ವಿರೋಧಿಸುತ್ತಿದ್ದಾರೆ. ಮಹಿಳೆಯರಿಗೆ ಸೌಲಭ್ಯ ನೀಡಿರುವುದನ್ನು ಸಹಿಸದೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಆದರೆ, ಗ್ಯಾರಂಟಿ ಯೋಜನೆಗಳು ಕರ್ನಾಟಕದ ಬಡಜನರ ಬದುಕಿಗೆ ಆಸರೆಯಾಗಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮೃಗಾಲಯದ 'ಯುವರಾಜ' ಸಾವು



ಮೈಸೂರು, ಜ.28(ಎಂಟಿವೈ)–ಮೈಸೂರು ಮೃಗಾಲಯದಲ್ಲಿ ಯುವರಾಜ ಹೆಸರಿನ 25 ವರ್ಷದ ಗಂಡು ಜಿರಾಫೆ ಬುಧವಾರ ಬೆಳಗ್ಗೆ ಮೃತಪಟ್ಟಿದೆ.

ವಯೋಸಹಜ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಯುವರಾಜ ಇಂದು ಕುಸಿದು ಬಿದ್ದು ಮೃತಪಟ್ಟಿದೆ. ಕಳೆದ 25 ವರ್ಷದಿಂದ ಮೃಗಾಲಯದಲ್ಲಿ ಪ್ರವಾಸಿಗರಿಗೆ ಮುದ ನೀಡುತ್ತಿದ್ದ ಯುವರಾಜ, 2001ರ ಡಿಸೆಂಬರ್ 7ರಂದು ಹೆನ್ರಿ ಹಾಗೂ ಹನಿ ಜೋಡಿಗೆ ಜನಿಸಿದ 9ನೇ ಮರಿ. 1987ರಲ್ಲಿ ಜರ್ಮನಿಯಿಂದ ಹೆನ್ರಿ ಹಾಗೂ ಹನಿ ಜೋಡಿ ತಂದು ಆರೈಕೆ ಮಾಡಲಾಗಿತ್ತು. ಈ ಜೋಡಿಗೆ ಕೃಷ್ಣರಾಜ, ಚಾಮರಾಜ, ನರಸಿಂಹರಾಜ ಹಾಗೂ ಯುವ ರಾಜ ಜನಿಸಿದವು. 9 ಮರಿಗಳಲ್ಲಿ ಹೆಚ್ಚು ಕಾಲ ಬದುಕಿದ ಶ್ರೇಯಸ್ಸು ಯುವರಾಜನಿಗೆ ಸಲ್ಲುತ್ತದೆ. ಈ ಹಿಂದೆ ಮೃಗಾಲಯದಲ್ಲಿ ಜನಿಸಿದ ಮರಿಗೆ ತಾಯಿ ಜಿರಾಫೆ ಹಾಲುಣಿಸಲು ನಿರಾಕರಿಸುತ್ತಿದ್ದ ಹಿನ್ನೆಲೆಯಲ್ಲಿ ಪಾಲಕರೇ ಇಂತಹ ಮರಿಗಳನ್ನು ಪಾಲನೆ ಮಾಡಿದ್ದರು. ಮೃಗಾಲಯದ ಪ್ರವೇಶ ದ್ವಾರದ ಬಳಿಯೇ ಇರುತ್ತಿದ್ದ ಯುವರಾಜ ಸದಾ ಪ್ರವಾಸಿಗರಿಗೆ ಮುದ ನೀಡುತ್ತಿತ್ತು. ಜಿರಾಫೆ ಸಾವಿಗೆ ಮೃಗಾಲಯ ಸಿಬ್ಬಂದಿ ಸಂತಾಪ ಸೂಚಿಸಿದ್ದಾರೆ. ನಿಯಮಾನುಸಾರ ಅಂತ್ಯಕ್ರಿಯೆ ನೆರವೇರಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸುಮಸೋಪಾನ ಸೇವಾ ಬಳಗದಿಂದ ಗಣರಾಜ್ಯೋತ್ಸವ



ಮೈಸೂರಿನ ಕುವೆಂಪುನಗರದಲ್ಲಿರುವ ತಪೋನಂದನ ಉದ್ಯಾನವನದಲ್ಲಿ ಸುಮಸೋಪಾನ ಸೇವಾ ಬಳಗದಿಂದ ಗಣರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು,ಜ.28(ಎಂಕೆ)– ಮೈಸೂರಿನ ಕುವೆಂಪುನಗರದಲ್ಲಿರುವ ತಪೋನಂದನ ಉದ್ಯಾನವನದಲ್ಲಿ ಸುಮಸೋಪಾನ ಸೇವಾ ಬಳಗದ ವತಿಯಿಂದ ಗಣರಾಜ್ಯೋತ್ಸವ ಆಚರಿಸಲಾಯಿತು.

ಧ್ವಜಾರೋಹಣ ನೆರವೇರಿಸಿದ ಶಾಸಕ ಟಿ.ಎಸ್.ಶ್ರೀವತ್ಸ, ಭಾರತೀಯ ಸೇನೆಯಲ್ಲಿ 30 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಗುರುಸ್ವಾಮಿ ಹಾಗೂ ತಪೋನಂದನ ಉದ್ಯಾನವನದಲ್ಲಿ ಸ್ವಚ್ಛತಾ ನಿರ್ವಹಣೆ ಮಾಡುತ್ತಿರುವ ಯಶೋಧಮ್ಮ ಮತ್ತಿತರರನ್ನು ಸನ್ಮಾನಿಸಿದರು.

ಬಳಿಕ ಮಾತನಾಡಿದ ಅವರು, ಗಣರಾಜ್ಯೋತ್ಸವ ಆಚರಣೆ ಒಗ್ಗಟ್ಟಿನ ಪ್ರತೀಕವಾಗಿದೆ. ವಿವಿಧತೆಯಲ್ಲಿ ಏಕತೆ ಸಾರುವ ಪ್ರತಿಬಿಂಬವಾಗಿ ದೇಶಾದ್ಯಂತ ಗಣರಾಜ್ಯೋತ್ಸವ ಆಚರಿಸಲಾಗುತ್ತಿದೆ. ಈ ಮೂಲಕ ಮಹಾತ್ಮ ಗಾಂಧೀಜಿ, ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರ ಕೊಡುಗೆಯನ್ನು ಸ್ಮರಿಸಬೇಕಿದೆ ಎಂದರು. ಮಾಜಿ ಮೇಯರ್ ಶಿವಕುಮಾರ್, ಪತ್ರಕರ್ತೆ ರಶ್ಮಿಕೋಟಿ, ಪ್ರೊ.ಕೃಷ್ಣ ಹೊಂಬಾಳ್ ಮತ್ತಿತರರಿದ್ದರು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸರ್ಕಾರಿ ಬಾಲಬೋಧಿನಿ ಶಾಲೆಯನ್ನು ದತ್ತು ಪಡೆದಿರುವ ಮಲ್ಲಿಗೆ ಸೇವಾ ಸಂಘದಿಂದ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಗೋಪಾಲ್‌ರಾಜೇ ಅರಸ್(ರಘು ಅರಸ್), ಉಪಾಧ್ಯಕ್ಷ ಪುರುಷೋತ್ತಮ್, ಸಂಘಟನ ಕಾರ್ಯದರ್ಶಿ ದಯಾಕರ್, ಕಾರ್ಯದರ್ಶಿ ಹರೀಶ್ ಅಂಕಿತ್, ಸದಸ್ಯರಾದ ಚಂದ್ರಶೇಖರ್‌ಗೌಡ, ಸಹಾಯಕ ಪ್ರಾಧ್ಯಾಪಕರಾದ ಮನೋನ್ಮಣಿ, ಮುಖ್ಯೋಪಾಧ್ಯಾಯಿನಿ ಲತಾಕುಮಾರಿ, ಶಿಕ್ಷಕಿಯರಾದ ಮೌಸಿನ್ ತಾಜ್, ಲೀಲಾವತಿ, ಮಮತ, ಅಡುಗೆ ಸಿಬ್ಬಂದಿ ಸುಂದರಮ್ಮ ಹಾಗೂ ಪೋಷಕರು ಉಪಸ್ಥಿತರಿದ್ದರು.



ಮೈಸೂರಿನ ನೃಪತುಂಗ ಕನ್ನಡ ಶಾಲೆಯಲ್ಲಿ 77ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಡಾ. ವನಜಾ ಧ್ವಜಾರೋಹಣ ನೆರವೇರಿಸಿದರು. ಸಂಸ್ಥೆಯ ಕಾರ್ಯದರ್ಶಿ ಸವಿತಾ ಪ.ಮಲ್ಲೇಶ್, ಸಂಸ್ಥೆಯ ಧರ್ಮದರ್ಶಿ ಪ್ರೊ.ಹೆಚ್.ಟಿ.ಶೈಲಜಾ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕಿ ಶೀಲಾ, ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಸೌಮ್ಯಶ್ರೀ, ಶಿಕ್ಷಕ–ಶಿಕ್ಷಕೇತರ ವರ್ಗದವರು, ಪೋಷಕರು, ಮಕ್ಕಳು ಉಪಸ್ಥಿತರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂನ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಆವರಣದಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಖಜಾಂಚಿ ನಾಗರಾಜ್, ನಿರ್ದೇಶಕರಾದ ಬಾಲಕೃಷ್ಣ, ಚೇತನ್, ಫಣಿರಾಜ್, ವಿಕ್ರಂ ಅಯ್ಯಂಗಾರ್, ನಾಗಶ್ರೀ, ಅರುಣ್, ರಾಜಮ್ಮ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ವಕ್ಫ್ ಮಂಡಳಿ ಸಲಹಾ ಸಮಿತಿ ಕಚೇರಿಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಮೈಸೂರು ಜಿಲ್ಲಾ ವಕ್ಫ್ ಮಂಡಳಿ ಸಲಹಾ ಸಮಿತಿಯ ಅಧ್ಯಕ್ಷ ಅಜೀಜುಲ್ಲಾ ಅಜ್ಜು ಧ್ವಜಾರೋಹಣ ನೆರವೇರಿಸಿದರು. ಜಿಲ್ಲಾ ವಕ್ಫ್ ಮಂಡಳಿ ಅಧಿಕಾರಿ ಮೊಹಮ್ಮದ್ ಮುಷ್ತಾಕ್, ವಕ್ಫ್ ಇನ್ಸ್‌ಪೆಕ್ಟರ್ ಮೊಹಮ್ಮದ್ ಯೂನಸ್, ಮೈಸೂರು ಜಿಲ್ಲಾ ವಕ್ಫ್ ಮಂಡಳಿ ಸಲಹಾ ಸಮಿತಿ ಸದಸ್ಯರಾದ ಮೌಲಾನಾ ಮೊಹಮ್ಮದ್ ಇಬ್ರಾಹಿಂ, ಎ.ಆರ್.ಎಂ. ಅಮ್ಜದ್ ಪಾಷಾ, ಸಮಾಜ ಸೇವಕ ಅಫ್ಸರ್, ಶಬಾಜ್, ಸಿದ್ದಿಕಿ ಮತ್ತು ಇತರರು ಉಪಸ್ಥಿತರಿದ್ದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ, ಡಾ.ರಮೇಶ್, ಸ್ನಾತಕೋತ್ತರ ಕೇಂದ್ರ ನಿರ್ದೇಶಕ ಡಾ.ಸಿ.ಕೆ.ರೇಣುಕಾರ್ಯ, ಎನ್‌ಸಿಸಿ ಫ್ಲೈಯಿಂಗ್ ಆಫೀಸರ್ ಡಾ.ಪುಷ್ಪರಾಣಿ, ಎನ್‌ಸಿಸಿ ಭೂದಳದ ಲೆಫ್ಟಿನೆಂಟ್ ಗಾಯತ್ರಿ ಹಾಜರಿದ್ದರು.



ಶ್ರೀ ಛಾಯಾದೇವಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ 77ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಆಕಾಶವಾಣಿ ಕೃಷಿ ರಂಗದ ಕಾರ್ಯಕ್ರಮದಲ್ಲಿ ಕೃಷಿ ಮಹಿಳೆ ಪ್ರಶಸ್ತಿ ಪುರಸ್ಕೃತರಾದ ನಂಜನಗೂಡು ತಾಲೂಕಿನ ಮಸಗೆ ಗ್ರಾಮದ ಶ್ರೀಮತಿ ವೀಣಾ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಅಂತೋಣಿ ಪೌಲ್‌ರಾಜ್, ಉಪನ್ಯಾಸಕರು, ಪ್ರಶಿಕ್ಷಣಾರ್ಥಿಗಳು ಇದ್ದರು.

ಮೈಸೂರಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ 127ನೇ ಜನ್ಮ ದಿನ ಆಚರಣೆ: ವೀರ ಸೇನಾನಿಗೆ ಗೌರವ ಸಮರ್ಪಣೆ



ಮೈಸೂರಿನ ಮೆಟ್ರೋಪೋಲ್ ವೃತ್ತದಲ್ಲಿ ಬುಧವಾರ 'ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ' ಅವರ 127ನೇ ಜನ್ಮ ದಿನ ಆಚರಿಸಲಾಯಿತು.

ಮೈಸೂರು, ಜ.28(ಎಂಕೆ)– ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ(ಮೆಟ್ರೋಪೋಲ್ ವೃತ್ತ)ವೃತ್ತದಲ್ಲಿ ಕೊಡವ ಸಮಾಜ ಮೈಸೂರು ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗದ ವತಿಯಿಂದ 'ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ' ಅವರ 127ನೇ ಜನ್ಮ ದಿನವನ್ನು ಬುಧವಾರ ಆಚರಿಸಲಾಯಿತು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಪ್ರತಿಮೆಯನ್ನು ಹೂಗಳಿಂದ ಅಲಂಕರಿಸಿ ಪುಷ್ಪಾರ್ಚನೆ ಮಾಡಿ, ಜೈಕಾರದ ಘೋಷಣೆಗಳನ್ನು ಕೂಗುವ ಮೂಲಕ ಗೌರವ ಸಲ್ಲಿಸಲಾಯಿತು.

ಬಳಿಕ ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ 127ನೇ ಜಯಂತಿ ಆಚರಣೆ ಸಮಾಜಕ್ಕೆ ಅತ್ಯಂತ ಶೋಭೆ ತರುವಂತಹದ್ದು. ದೇಶಕ್ಕೆ ಹಾಗೂ ಕೊಡಗಿಗೆ ಅವರು ನೀಡಿರುವ ಕೊಡುಗೆ ಅಪಾರವಾಗಿದೆ. ಕೊಡವರಲ್ಲಿ ದೇಶಭಕ್ತಿ ಎಂಬುದು ಪಾರಂಪರಿಕವಾಗಿ ಬೆಳೆದು ಬಂದಿದ್ದು, ಕೊಡವ ಸಮಾಜ ಸಣ್ಣ ಸಮುದಾಯವಾದರೂ ಸೈನ್ಯಕ್ಕೆ ನೀಡಿರುವ ಸೇವೆ ದೊಡ್ಡದಾಗಿದೆ. ಇಂತಹ ಕೊಡವ ಪರಂಪರೆಯಲ್ಲಿ ಹುಟ್ಟಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಸ್ಮರಣೆ ಈ ನಾಡಿಗೆ ದೊರಕಿರುವ ಸೌಭಾಗ್ಯ ಎಂದು ಸ್ಮರಿಸಿದರು.

ಎರಡನೇ ಮಹಾಯುದ್ಧ, ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಅವರ ಸೇವೆ ಇಡೀ ಜಗತ್ತಿಗೆ ಮಾದರಿ. ಭಾರತೀಯ ಸೈನ್ಯದ ಅತ್ಯುನ್ನತ ಪದವಿ ಫೀಲ್ಡ್ ಮಾರ್ಷಲ್ ಹುದ್ದೆ. ಇದು ಕೊಡವ ಸಮಾಜವಲ್ಲದೇ, ಕನ್ನಡ ನಾಡು ಹೆಮ್ಮೆ ಪಡುವಂತಹದ್ದು. ಅವರಿಗೆ ಭಾರತರತ್ನ ದೊರೆಯದೆ ಇರಬಹುದು. ಆದರೆ ಫೀಲ್ಡ್ ಮಾರ್ಷಲ್ ಹುದ್ದೆ ದೊರಕಿದೆ. ಇವತ್ತಿಗೂ ಭಾರತೀಯ ಸೈನ್ಯದಲ್ಲಿ 30ಕ್ಕೂ ಹೆಚ್ಚು ಲೆಫ್ಟಿನೆಂಟ್ ಕರ್ನಲ್ ಹಾಗೂ ಭಾರತದ ಹಾಕಿ ಕ್ರೀಡೆಗೆ ಐವರು ನಾಯಕರು. 60ಕ್ಕೂ ಹೆಚ್ಚು ಆಟಗಾರರನ್ನು ಕೊಡವ ಸಮುದಾಯ ನೀಡಿದೆ ಎಂದು ಶ್ಲಾಘಿಸಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಇಡೀ ಜಗತ್ತು ಭಾರತದ ಕಡೆಗೆ ತಿರುಗಿ ನೋಡುವಂತೆ ಮಾಡಿದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರನ್ನು ಪ್ರತಿನಿತ್ಯ ಸ್ಮರಿಸಬೇಕಿದೆ. ಮೆಟ್ರೋಪೋಲ್ ವೃತ್ತದಲ್ಲಿ ಕಾರ್ಯಪ್ಪ ಅವರ ಪ್ರತಿಮೆ ಸ್ಥಾಪಿಸುವ ಸಂದರ್ಭದಲ್ಲಿ ಅನೇಕ ಅಡೆ–ತಡೆಗಳು ಎದುರಾಗಿದ್ದವು. ಅದೆಲ್ಲವನ್ನು ಬದಿಗೊತ್ತಿ ಪ್ರತಿಮೆ ನಿಂತಿದೆ. ಇದು ಅತ್ಯಂತ ಹೆಮ್ಮೆಯ ಸಂಗತಿ. ಮುಂದಿನ ದಿನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಒಂದೆಡೆ ಸೇರಿ ಕಾರ್ಯಪ್ಪ ಅವರ ಜಯಂತಿ ಕಾರ್ಯಕ್ರಮವನ್ನು ದೊಡ್ಡ ಮಟ್ಟದಲ್ಲಿ ಮಾಡುವಂತಾಗಲಿ ಎಂದರು.

ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಮಾಳೇಟಿರ ಸುಬ್ಬಯ್ಯ, ಪ್ರಮಿಳಾ ಭರತ್, ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೊಂಜಾಂಡ ಎ.ಗಣಪತಿ, ಮೈಸೂರು ಕೊಡವ ಸಮಾಜದ ಖಜಾಂಚಿ ಕೊಟ್ಟಂಗಡ ತಿಮ್ಮಯ್ಯ, ಜಂಟಿ ಕಾರ್ಯದರ್ಶಿ ಶ್ರೀಮತಿ ಪಡಯಂಡ ಸುಮ್ಮಿ, ಮೈಸೂರು ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಮುಕ್ಕಾಟಿರ ಸಿ.ಅಶೋಕ್, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅಭಿಮಾನಿ ಬಳಗದ ಅಧ್ಯಕ್ಷ ನಾಯಕಂಡ ತಿಮ್ಮಯ್ಯ, ಖಜಾಂಚಿ ಬಾಚಿರ ಲವ, ಶ್ರೀ ಭಗವತಿ ಸೌಹಾರ್ದ ಸಹಕಾರ ಸಂಸ್ಥೆ ಅಧ್ಯಕ್ಷ ಪಾಲಂದಿರ ಸೋಮಣ್ಣ, ಮಾಜಿ ಸೈನಿಕರು, ಕೊಡವ ಸಮಾಜ ಯೂತ್ ವಿಂಗ್ ಪದಾಧಿಕಾರಿಗಳು ಸೇರಿದಂತೆ ಮತ್ತಿತರರಿದ್ದರು.

ಲಿಂಗಾಂಬುದಿ ಕೆರೆಗೆ ಯುಜಿಡಿ ನೀರು ಸೇರದಂತೆ ಶಾಶ್ವತ ಪರಿಹಾರ

ಅನುದಾನ ಅಂದಾಜು ಪಟ್ಟಿ ತಯಾರಿಸಿ; ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ಸೂಚನೆ



ಮೈಸೂರು ಕನಕದಾಸನಗರ 2ನೇ ಹಂತದ ಕೌಟಿಲ್ಯ ಶಾಲೆ ಬಳಿ ಹಾದು ಹೋಗಿರುವ ರಾಜಕಾಲುವೆ ಸ್ಥಳಕ್ಕೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೈಸೂರು, ಜ.28(ಎಂಕೆ)– ಲಿಂಗಾಂಬುದಿ ಕೆರೆಗೆ ಹರಿಯುವ ಯುಜಿಡಿ ನೀರಿನ ತಡೆಗೆ ಶಾಶ್ವತ ಪರಿಹಾರ ಹಾಗೂ ರಾಜಕಾಲುವೆ ದುರಸ್ಥಿ ಕಾಮಗಾರಿಗೆ ತಗಲುವ ಅನುದಾನದ ಅಂದಾಜು ಪಟ್ಟಿ ತಯಾರಿಸುವಂತೆ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ರಿಂಗ್‌ರಸ್ತೆಯಲ್ಲಿರುವ ದಟ್ಟಗಳ್ಳಿ ಸಮೀಪದ ಕನಕದಾಸನಗರ 2ನೇ ಹಂತದಲ್ಲಿರುವ ಕೌಟಿಲ್ಯ ಶಾಲೆ ಬಳಿ ಹಾದು ಹೋಗಿರುವ ರಾಜಕಾಲುವೆ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಯುಜಿಡಿ ಮತ್ತು ರಾಜಕಾಲುವೆ ದುರಸ್ಥಿ ಕಾಮಗಾರಿಗೆ ತಗಲುವ ಅನುದಾನದ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಿದರೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಗರಪಾಲಿಕೆ, ಎಂಡಿಎ, ಅರಣ್ಯ ಇಲಾಖೆ ಮೊದಲಾದ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ ಪರಿಹಾರ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಲಿಂಗಾಂಬುದಿ ಕೆರೆಗೆ ಸೇರುತ್ತಿರುವ ಯುಜಿಡಿ ನೀರನ್ನು ಶಾಶ್ವತವಾಗಿ ತಡೆಯಬೇಕಿದೆ. ಯುಜಿಡಿ ಕೊಳಚೆ ನೀರು ರಿವರ್ಸ್ ಆಗಿ ಮ್ಯಾನ್‌ಹೋಲ್‌ಗಳಿಂದ ಉಕ್ಕಿ ಹರಿದು ನಿವಾಸಿಗಳಿಗೂ ತೊಂದರೆಯಾಗುತ್ತಿದೆ. ರಾಜಕಾಲುವೆಗೆ ಯುಜಿಡಿ ನೀರು ಹರಿಯದಂತೆ ಕ್ರಮವಹಿಸಿ, ಮಳೆ ನೀರು ಮಾತ್ರವೇ ರಾಜಕಾಲುವೆಯಲ್ಲಿ ಹರಿಯುವಂತಾದರೆ ಲಿಂಗಾಂಬುದಿ ಕೆರೆಯಲ್ಲಿ ಸ್ವಚ್ಛತೆ ಕಾಪಾಡಬಹುದಾಗಿದೆ ಎಂದು ಶಾಸಕರು ತಿಳಿಸಿದರು.

ಯುಜಿಡಿ ಪೈಪ್‌ಲೈನ್ ದುರಸ್ಥಿಗೊಳಿಸಿ: ಕನಕದಾಸನಗರ, ದಟ್ಟಗಳ್ಳಿ ಭಾಗದ ಯುಜಿಡಿ ಪೈಪ್‌ಲೈನ್ ಆಗಿಂದಾಗ್ಗೆ ಬ್ಲಾಕ್ ಆಗುತ್ತಿದೆ. ರಾಜಕಾಲುವೆ ಬಳಿ ಹಾದು ಹೋಗಿರುವ ಯುಜಿಡಿ ಪೈಪ್‌ಲೈನ್ ಒಡೆದು ಹೋಗಿರುವ ಕಾರಣ ತ್ಯಾಜ್ಯ ನೀರು ಲಿಂಗಾಂಬುದಿಕೆರೆಗೆ ಸೇರುತ್ತಿದ್ದು, ವಾಯುವಿಹಾರಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಹಾಗಾಗಿ ತ್ವರಿತವಾಗಿ ರಾಜಕಾಲುವೆ ಬಳಿ ರಿಟೈನಿಂಗ್ ವಾಲ್ ಅನ್ನು ಅಳವಡಿಸಿ, ಯುಜಿಡಿ ಪೈಪ್‌ಲೈನ್ ದುರಸ್ಥಿ ಕಾಮಗಾರಿಯಾಗಬೇಕು ಎಂದು ಸ್ಥಳೀಯ ನಿವಾಸಿಗಳಾದ ಎಂ.ಎನ್.ನಟರಾಜು, ನಾಗೇಂದ್ರ ಮನವಿ ಮಾಡಿದರು.


ತ್ವರಿತ ಕ್ರಮ: ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಲಿಂಗಾಂಬುದಿಕೆರೆಗೆ ಕಲುಷಿತ ನೀರು ಸೇರದಂತೆ ಕಾಮಗಾರಿ ಆರಂಭಿಸಲಾಗುವುದು. ಎಲ್ಲೆಲ್ಲಿ ಹೊಸದಾಗಿ ಪೈಪ್‌ಲೈನ್ ಅಳವಡಿಸಬೇಕು. ರಿಟೈನಿಂಗ್ ವಾಲ್ ಹಾಕಬೇಕು ಎಂಬುದರ ಬಗ್ಗೆ ಮಾಹಿತಿ ಪಡೆದು ತಕ್ಷಣವೇ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಎಸಿಎಫ್ ರವೀಂದ್ರ, ನಗರಪಾಲಿಕೆ ಅಧೀಕ್ಷಕ ಇಂಜಿನಿಯರ್ ಮಂಜುನಾಥ್, ವಲಯ–3 ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಇಂಜಿನಿಯರ್ ಆಸೀಫ್ ಇಕ್ಬಾಲ್ ಖಲೀಲ್, ನಗರಪಾಲಿಕೆ ಒಳಚರಂಡಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶಿಲ್ಪಾ, ಎಇಇಗಳಾದ ಧನುಷ್, ಶ್ರೀನಿವಾಸ್, ಅಶ್ವಿನ್ ಮತ್ತಿತರರು ಹಾಜರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಸಿಬ್ಬಂದಿ ಫೆ.2, 3ರಂದು ಪ್ರತಿಭಟನೆ

ಮೈಸೂರು,ಜ.28(ಎಂಟಿವೈ)– ಖಾಲಿಯಿರುವ ಹುದ್ದೆ ಭರ್ತಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಫೆ.2 ಮತ್ತು 3ರಂದು ಆಲ್ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ನೌಕರರು ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ. ಆಲ್ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ನೌಕರರ ಸಂಘ ಕರೆ ನೀಡಿರುವ ಪ್ರತಿಭಟನೆ ದೇಶದಾದ್ಯಂತ ನಡೆಯುತ್ತಿದ್ದು, ಎರಡು ದಿನ ಓವರ್‌ಸೀಸ್ ಬ್ಯಾಂಕ್ ಕರ್ತವ್ಯದಿಂದ ದೂರ ಉಳಿಯಲಿದ್ದಾರೆ. ಮೈಸೂರು ನಗರ, ಜಿಲ್ಲೆಯ ವಿವಿಧೆಡೆ, ಚಾಮರಾಜನಗರ, ಮಂಡ್ಯ ಸೇರಿದಂತೆ ಮೈಸೂರು ಭಾಗದಲ್ಲಿ ಒಟ್ಟು 54 ಓವರ್‌ಸೀಸ್ ಬ್ಯಾಂಕ್ ಇದ್ದು, ಈ ಎಲ್ಲಾ ಬ್ಯಾಂಕ್‌ಗಳು ಭಾನುವಾರ(ಫೆ.1) ಸೇರಿದಂತೆ ಒಟ್ಟು 3 ದಿನ ಓವರ್‌ಸೀಸ್ ಬ್ಯಾಂಕ್ ಬಂದ್ ಆಗಲಿವೆ. ಈ ಬ್ಯಾಂಕ್‌ನಲ್ಲಿ ದೇಶದಾದ್ಯಂತ ಎಲ್ಲಾ ಬ್ರಾಂಚ್‌ಗಳಲ್ಲೂ ಸಿಬ್ಬಂದಿಯ ಕೊರತೆ ಇದೆ. ಅಲ್ಲದೆ, ಕ್ಯೂಆರ್ ಕೋಡ್ ವ್ಯವಸ್ಥೆ ರದ್ದು ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆಗೆ ಕರೆ ನೀಡಲಾಗಿದೆ ಎಂದು ನೌಕರರ ಸಂಘದ ಪ್ರಕಟಣೆ ತಿಳಿಸಿದೆ.

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಿಂದ ರೈತರಿಗೆ ಸಾಲದ ಚೆಕ್ ವಿತರಣೆ



ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ ರೈತರಿಗೆ ಸಾಲದ ಚೆಕ್ ವಿತರಿಸಿದರು.

ಮೈಸೂರು: ತಾಲೂಕಿನ ಜಯಪುರ ಹೋಬಳಿಯ ಹಾರೋಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಸ್ಥಳೀಯ ರೈತರಿಗೆ ಸಾಲ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ, ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ನಂತರ 53 ರೈತರಿಗೆ 1 ಲಕ್ಷ ರೂ.ಗಳ ಸಾಲದ ಚೆಕ್ ವಿತರಣೆ ಮಾಡಿದರು.

ಎಂಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಕೆಂಚಪ್ಪ, ಹಾರೋಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಆರ್.ಸುರೇಶ್‌ಕುಮಾರ್, ಉಪಾಧ್ಯಕ್ಷೆ ರತ್ನಮ್ಮ, ಹಾರೋಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರೇವಣ್ಣ, ಪಿಡಿಓ ಗಣೇಶ್, ಬ್ಯಾಂಕ್ ಮೇಲ್ವಿಚಾರಕ ಕೃಷ್ಣ, ಗಿರೀಶ್, ಗ್ರಾಮ ಪಂಚಾಯಿತಿ ಸದಸ್ಯರಾದ ನಟರಾಜು, ಚೆಲುವರಾಜು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಪ್ರಭಾಮಣಿ, ನಂಜಪ್ಪ, ಪಾಪೇಗೌಡ, ವಿ.ಬಸವಣ್ಣ, ಆರ್.ಶಿವಲಿಂಗೇಗೌಡ, ರಂಗೇಗೌಡ, ಹೆಚ್.ಕೆ.ಮಲ್ಲಿಕಾರ್ಜುನಪ್ಪ, ಮಲ್ಲೇಶ್, ಚಂದ್ರಹಾಸ್‌ಗೌಡ, ಸೋಮನಾಯಕ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಣಿಕಂಠ ಹಾಜರಿದ್ದರು.

ಗುಣಾತ್ಮಕ ಸೇವೆ ಮೂಲಕ ಸಹಕಾರ ಸಂಸ್ಥೆಗಳ ಲಾಭದತ್ತ ಕೊಂಡೊಯ್ಯಬಹುದು

- ಹಿರಿಯ ಸಹಕಾರಿ ಧುರೀಣ ಹೆಚ್.ವಿ.ರಾಜೀವ್ ಅಭಿಮತ
- ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರಿಗೆ ತರಬೇತಿ ಕಾರ್ಯಕ್ರಮ

ಮೈಸೂರು,ಜ.28(ಎಂಕೆ)–ಗುಣಾತ್ಮಕ ಸೇವೆ ನೀಡುವ ಮೂಲಕ ಸಹಕಾರ ಸಂಸ್ಥೆಗಳನ್ನು ನಷ್ಟದಿಂದ ಲಾಭದತ್ತ ಕೊಂಡೊಯ್ಯಬಹುದು ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮಾಜಿ ಅಧ್ಯಕ್ಷ ಹಾಗೂ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯ ಹೆಚ್.ವಿ.ರಾಜೀವ್ ಅಭಿಪ್ರಾಯಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ವತಿಯಿಂದ 2024–25ನೇ ಸಾಲಿನಲ್ಲಿ ನಷ್ಟದಲ್ಲಿರುವ ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಬುಧವಾರ ಆಯೋಜಿಸಿದ್ದ ವಿಷಯಾಧಾರಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಷೇರುದಾರರ ಹೆಚ್ಚಳ, ಠೇವಣಿ ಸಂಗ್ರಹದೊಂದಿಗೆ ದಾಖಲೆಗಳ ಪರಿಶೀಲಿಸಿ ಸಾಲ–ಸೌಲಭ್ಯ ನೀಡುವ ಮೂಲಕ ಸಹಕಾರಿ ಸಂಸ್ಥೆಯನ್ನು ನಷ್ಟದಿಂದ ಪಾರು ಮಾಡಬಹುದಾಗಿದೆ ಎಂದರು.

ಸಹಕಾರ ಸಂಘಗಳ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ನಡುವೆ ಉತ್ತಮ ಬಾಂಧವ್ಯ ಇರಬೇಕು. ಯಾವುದೇ ಸಮಸ್ಯೆ ಎದುರಾದಾಗ ಸಹಕಾರ ಇಲಾಖೆಯ ಗಮನಕ್ಕೆ ತಂದು ಪರಿಹರಿಸಿಕೊಂಡು ಸಂಘವನ್ನು ಸುಗಮವಾಗಿ ಮುನ್ನಡೆಸುವ ಕಡೆಗೆ ಪ್ರಥಮ ಆದ್ಯತೆ ನೀಡಿದರೆ ಯಾವುದೇ ಸಮಸ್ಯೆಯಾಗದು ಎಂದು ತಿಳಿಸಿದರು.



ಸೌಹಾರ್ದ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರಿಗೆ ಬುಧವಾರ ಆಯೋಜಿಸಿದ್ದ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಉದ್ಘಾಟಿಸಿದರು.

ಸೌಹಾರ್ದ ಸಹಕಾರಿ ಸಂಸ್ಥೆಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಸಾಲ ಕೊಡುವಾಗ ಸಂಸ್ಥೆಯ ಅಧ್ಯಕ್ಷರು, ನಿರ್ದೇಶಕರು ಅತ್ಯಂತ ಜಾಗರೂಕರಾಗಿರಬೇಕು. ಪ್ರತಿಯೊಬ್ಬ ನಿರ್ದೇಶಕರೂ ಸಂಸ್ಥೆಯ ಎಲ್ಲಾ ಆಸ್ತಿಗಳ ಬಗ್ಗೆ ಪೂರ್ಣ ಮಾಹಿತಿ ಹೊಂದಿರಬೇಕು. ಸಂಸ್ಥೆಯ ಬೆಳವಣಿಗೆ, ನಿರ್ವಹಣೆಯ ಬಗ್ಗೆ ಸಂಪೂರ್ಣ ಜ್ಞಾನ ಇರಬೇಕು ಮತ್ತು ಸಂಸ್ಥೆಯ ಅಭಿವೃದ್ಧಿ ಕಾರ್ಯದಲ್ಲಿ ಭಾಗಿಯಾಗಬೇಕು. ಸಂಸ್ಥೆಯ ವಿಶ್ವಾಸಕ್ಕೆ ಒಮ್ಮೆ ಧಕ್ಕೆಯಾದರೆ ಇಡೀ ವ್ಯವಸ್ಥೆ ಹಾಳಾಗುತ್ತದೆ ಎಂಬ ತಿಳುವಳಿಕೆ ನಮ್ಮಲ್ಲಿರಬೇಕು ಎಂದು ಎಚ್ಚರಿಸಿದರು.

ಮೈಕ್ರೋ ಸಹಕಾರ ಸಂಸ್ಥೆಗಳು: ಹಳೆ ಮೈಸೂರು ಭಾಗದಲ್ಲಿ ಬಹುತೇಕ ಮೈಕ್ರೋ ಸಹಕಾರ ಸಂಸ್ಥೆಗಳಿದ್ದು, ಆರಂಭದಲ್ಲಿ ಉತ್ಸಾಹದಿಂದ ಕಡಿಮೆ ಬಂಡವಾಳದಲ್ಲಿಯೇ ಸಾಲ–ಸೌಲಭ್ಯ ನೀಡಲು ಮುಂದಾಗುವುದು ಮತ್ತು ಸಾಲ ವಸೂಲಿ ಮಾಡದಿರುವುದರಿಂದ ನಷ್ಟಕ್ಕೆ ಸಿಲುಕುವಂತಾಗುತ್ತದೆ. ಆದ್ದರಿಂದ ಸಾಲ ನೀಡುವಾಗಲೇ ಎಚ್ಚರಿಕೆ ದಾಖಲೆಗಳ ಪರಿಶೀಲನೆಯಾಗಬೇಕು. ಗುಣಾತ್ಮಕ ಸೇವೆ ನೀಡಿದಲ್ಲಿ ನಷ್ಟ ಸರಿದೂಗಿಸಲು ಸಾಧ್ಯ. ಈ ನಿಟ್ಟಿನಲ್ಲಿ ಹೆಚ್ಚೆಚ್ಚು ತರಬೇತಿ ಕಾರ್ಯಕ್ರಮಗಳು ಸಹಕಾರಿಗಳು ಮತ್ತು ಸಿಬ್ಬಂದಿಗಳಿಗೆ ಆಗಬೇಕಿದೆ ಎಂದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ನಿರ್ದೇಶಕ ಎಸ್.ಕೆ.ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಕಾರ ಸಂಘಗಳ ಲೆಕ್ಕಪರಿಶೋಧಕಾ ಜಂಟಿ ನಿರ್ದೇಶಕಿ ಎಸ್.ಎಂ.ಶಶಿರೇಖಾ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮಾಜಿ ನಿರ್ದೇಶಕ ಭಾಸ್ಕರ್ ಹೆಗಡೆ ಕಾಗೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಪ್ರಾಂತೀಯ ಅಧಿಕಾರಿ ಗುರುಪ್ರಸಾದ್ ಬಂಗೇರ, ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಆರ್.ಎಸ್.ಸುರೇಶ, ಎನ್.ಬಲರಾಮ್ ಮತ್ತಿತರರಿದ್ದರು.

ಮೈಸೂರು ಮಿತ್ರ ಗುರುವಾರ 29 ಜನವರಿ 2026

ರಾಜ್ಯ ರಾಜಕಾರಣ ಸ್ಥಿತಿ ಅಯೋಮಯ

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಕಿಡಿ



ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಬಿಜೆಪಿ ಮುಖಂಡರು ಸನ್ಮಾನಿಸಿದರು.

ಮಂಡ್ಯ, ಜ.28– ರಾಜ್ಯ ರಾಜಕಾರಣ ಅಯೋಮಯ ಸ್ಥಿತಿಯಲ್ಲಿದ್ದು, ಪ್ರತಿದಿನ ಒಳ್ಳೆಯ ಕಾರಣಕ್ಕೆ ಈ ಸರ್ಕಾರ ಸುದ್ದಿಯಾಗುತ್ತಿಲ್ಲ. ಬದಲಿಗೆ ಕೆಟ್ಟ ರಾಜಕಾರಣಕ್ಕೆ ಪ್ರಚಾರವಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಕಿಡಿಕಾರಿದರು.

ನಗರದ ಸ್ವರ್ಣಸಂದ್ರ ಬಡಾವಣೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಿನ ಬೆಳಗಾದರೆ ಭ್ರಷ್ಟಾಚಾರ ಕಾಣುತ್ತಿದ್ದೇವೆ. ಈ ಸರ್ಕಾರದ ಎಲ್ಲಾ ಮಂತ್ರಿಗಳಿಗೂ ಒಂದಲ್ಲ ಒಂದು ಹಗರಣಗಳು ಸುತ್ತಿಕೊಂಡಿರುವುದು ನೋಡಿದ್ದೇವೆ. ಇದು ಈ ಸರ್ಕಾರದ ವಿಶೇಷತೆಯಾಗಿದೆ. ಇದನ್ನು ವಿಷಯಾಂತರ ಮಾಡಲು ಜನರಿಗೆ ಅನುಕೂಲವಾಗುತ್ತಿದ್ದರೂ ರಾಜಕಾರಣ ಮಾಡುತ್ತಾರೆ ಎಂದು ಹೇಳಿದರು.

ಹಳ್ಳಿಗಳ ಸಮಗ್ರ ಅಭಿವೃದ್ಧಿಗಾಗಿ ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೊಳಿಸಲಾಗಿದ್ದು, ಕೌಶಲ್ಯದ ಮೂಲಕ ಸ್ವಾವಲಂಬನೆ ಸಾಧಿಸಬೇಕು ಎನ್ನುವ ಉದ್ದೇಶವಿದೆ. 15 ದಿನದೊಳಗೆ ಕೂಲಿಕಾರರಿಗೆ ಹಣ ಪಾವತಿಯಾಗಬೇಕು. ತಪ್ಪಿದರೆ ಬಡ್ಡಿ ಕೊಡುವ ವ್ಯವಸ್ಥೆ ಇದೆ. ಹಿಂದೆ ಎಲ್ಲಿತ್ತು ಎಂದರು.

ಕಳೆದ 2 ವರ್ಷದಿಂದ ಕೆಲಸ ಮಾಡಿದವರಿಗೆ ರಾಜ್ಯ ಸರ್ಕಾರ ಹಣ ಪಾವತಿಸಿಲ್ಲ. ಅದನ್ನು ನೀಡಲು ಶೇ.10 ರಷ್ಟು ಕಮಿಷನ್ ಪಡೆಯುತ್ತಿದ್ದಾರೆ. ಅಲ್ಲದೇ ಶೇ.10ರಿಂದ 12 ರಷ್ಟು ಕಮಿಷನ್ ನೀಡಿದರೇ ಮಾತ್ರ ಎನ್‌ಓಸಿ ಕೊಡುತ್ತಾರೆ. ಆದರೆ ಕೇಂದ್ರ ಸರ್ಕಾರ ನೇರವಾಗಿ ಶ್ರಮ ಜೀವಿಯ ಖಾತೆಗೆ ಹಣ ಪಾವತಿಸುತ್ತದೆ. ತಡವಾದರೆ ಬಡ್ಡಿ ಸೇರಿಸಿ ಹಣ ಪಾವತಿಸಲಿದ್ದು, ಇದನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ವಿರೋಧಿಸುತ್ತಿದೆ ಎಂದರು.

ಕಾಂಗ್ರೆಸ್ಸಿಗರು ಗಾಂಧೀಜಿ ಹೆಸರೇಳುತ್ತಾರೆ. ಗಾಂಧೀಜಿ ಹೆಸರಲಿದ್ದಾರೋ, ತತ್ವದಲ್ಲಿದ್ದಾರೋ ನನ್ನ ದೃಷ್ಟಿಯಲ್ಲಿ ಗಾಂಧಿ ಹೆಸರಿಗೆ ಮೌಲ್ಯ ಬಂದಿದ್ದು ತತ್ವದ ಕಾರಣಕ್ಕೆ. ಆ ತತ್ವ ಕೊಂದವರ್ಯಾರು, ಗಾಂಧೀಜಿ ಅವರಿಗೆ ಗುಂಡು ಹೊಡೆದಿದ್ದು ಗೂಡ್ಸೆ. ಆದರೆ ಗಾಂಧೀಜಿಯವರ ತತ್ವಕ್ಕೆ ಗುಂಡು ಹೊಡೆದಿದ್ದು ಕಾಂಗ್ರೆಸ್. ಗಾಂಧೀಜಿ ತತ್ವ ಮದ್ಯಪಾನ ನಿಷೇಧವಾಗಬೇಕು. ಆದರೆ ಇವರು ಕಿರಾಣಿ ಅಂಗಡಿಗಳಲ್ಲೆಲ್ಲಾ ಸಿಗುವಂತೆ ಮಾಡಿದ್ದಾರೆ ಎಂದು ಗುಡುಗಿದರು.

ಹೊಸ ವರ್ಷದ ದಿನ ಕುಡಿದು ಬಿದ್ದವರನ್ನು ವಾಹನ ಮಾಡಿ ಬಿಡುತ್ತೇವೆ ಎಂದವರ್ಯಾರು ಎಂದ ಅವರು ಗಾಂಧೀಜಿ ಅವರು ಸ್ವದೇಶಿಗೆ ಒತ್ತು ಕೊಟ್ಟರೇ, ಇವರ ನಾಯಕತ್ವ ವಿದೇಶಿ. ಗಾಂಧೀಜಿ ಪ್ರಾಮಾಣಿಕತೆಯ ಪ್ರತಿ ರೂಪವಾದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದ ಪ್ರತಿ ರೂಪವಾಗಿ ಬದಲಾಗಿದೆ. ಗಾಂಧೀಜಿಯವರ ತತ್ವಕ್ಕೆ ಗುಂಡು ಹೊಡೆದಿದ್ದು ಈಗಿನ ಕಾಂಗ್ರೆಸ್‌ನವರು ಎಂದರು. ಈ ವೇಳೆ ಬಿಜೆಪಿ ಮುಖಂಡರಾದ ಹೆಚ್.ಆರ್. ಅರವಿಂದ್, ಡಾ.ಸದಾನಂದ, ಚಂದಗಾಲು ಶಿವಣ್ಣ, ಡಾ.ಇಂದ್ರೇಶ್, ವಿವೇಕ್, ಇಂಡವಾಳು ಸಚ್ಚಿದಾನಂದ, ಕೇಶವ್, ಸಿ.ಟಿ.ಮಂಜುನಾಥ್, ಓಬಿಸಿ ಆನಂದ್, ನಾಗನಂದ, ವೈರಮುಡಿ ಮತ್ತಿತರರಿದ್ದರು.

ರೈತರು ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಿ

ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್



ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು.

ಚಿನಕುರಳಿ, ಜ.28– ಹಾಲು ಉತ್ಪಾದಕರ ಸಹಕಾರ ಸಂಘಗಳು ಗ್ರಾಮೀಣ ರೈತರ ಆರ್ಥಿಕ ಭದ್ರತೆಗೆ ಬೆನ್ನೆಲುಬಾಗಿ ಕೆಲಸ ಮಾಡುತ್ತಿವೆ. ಹೀಗಾಗಿ ರೈತರು ಡೇರಿಗಳಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡುವ ಮೂಲಕ ಸಂಘಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ತಿಳಿಸಿದರು.

ಕನಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಿಂದ ನಡೆದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಹೈನುಗಾರಿಕೆಯಿಂದ ಸಾಕಷ್ಟು ಕುಟುಂಬಗಳು ಆರ್ಥಿಕವಾಗಿ ಸಬಲರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಿದ್ದ ಸಾಕಷ್ಟು ಯುವಕರು ಕೆಲಸ ಬಿಟ್ಟು ಬಂದು ಹೈನುಗಾರಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಹೈನುಗಾರಿಕೆ ಮುಂದಿನ ದಿನಗಳಲ್ಲಿ ಹೈನು ಉದ್ಯಮವಾಗಿ ಬೆಳೆಯುವುದರಲ್ಲಿ ಯಾವುದೇ ಸಂಶಯ ಬೇಡ ಎಂದರು.

ಹಾಲು ಉತ್ಪಾದಕರ ಸಹಕಾರ ಸಂಘಗಳು ದೇವಸ್ಥಾನದಂತೆ. ಇಲ್ಲಿ ಯಾವುದೇ ಕಾರಣಕ್ಕೂ ರಾಜಕೀಯ ಪ್ರವೇಶ ಮಾಡಬಾರದು. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಸಂಘಗಳನ್ನು ಅಭಿವೃದ್ಧಿಪಡಿಸಬೇಕು. ಡೇರಿ ಆಡಳಿತ ಮಂಡಳಿ ಹಾಗೂ ಅಧಿಕಾರಿ ವರ್ಗದವರು ಸಹ ಸಮನ್ವಯತೆಯಿಂದ ಕೆಲಸ ಮಾಡಬೇಕು. ರೈತರು ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಬೇಕು ಎಂದು ತಿಳಿಸಿದರು.

ಎಲ್ಲರ ಸಹಕಾರದಿಂದ ಮನ್‌ಮುಲ್ ನಿರ್ದೇಶಕನಾಗಿದ್ದೇನೆ. ನೀವು ನನಗೆ ಸನ್ಮಾನ ಮಾಡುವ ಮೂಲಕ ನನ್ನ ಜವಾಬ್ದಾರಿ ಹೆಚ್ಚಳ ಮಾಡಿದ್ದೀರಿ. ಕನಗನಹಳ್ಳಿ ಡೇರಿಗೆ ತನ್ನದೇ ಆದ ಇತಿಹಾಸವಿದ್ದು ಸುವರ್ಣ ಮಹೋತ್ಸವದ ಹೊಸ್ತಿಲಿಗೆ ಬಂದಿದೆ. ಮುಂದಿನ ದಿನಗಳಲ್ಲಿ ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಅಧ್ಯಕ್ಷ ಡಿ.ಚಂದ್ರಶೇಖರ್, ಉಪಾಧ್ಯಕ್ಷ ನಾಗರಾಜು, ನಿರ್ದೇಶಕರಾದ ಎಸ್.ಸ್ವಾಮಿ, ರಾಜೇಶ್, ಟಿ.ಸತೀಶ್, ಮಂಜುನಾಥ್, ಯೋಗೇಂದ್ರ, ನಿಂಗರಾಜು, ಪ್ರಕಾಶ್, ಯೋಗೀಶ, ನಾಗಮ್ಮ, ಮಂಜುಳ, ಕಾರ್ಯದರ್ಶಿ ಎಸ್.ಲೋಕೇಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ರಾಮಕೃಷ್ಣ, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ, ಎ.ಎಸ್.ರಮೇಶ್, ಗ್ರಾಪಂ ಸದಸ್ಯ ನಾಗರಾಜು ಸೇರಿದಂತೆ ಹಲವರಿದ್ದರು.

ಸುಣ್ಣನದೊಡ್ಡಿ ಗೇಟ್ ಬಳಿ ಚಿರತೆ ಪ್ರತ್ಯಕ್ಷ



ಭಾರತೀನಗರ, ಜ.28– ಇಲ್ಲಿಗೆ ಸಮೀಪದ ಸುಣ್ಣನದೊಡ್ಡಿ ಗೇಟ್ ಬಳಿ ಚಿರತೆ ಪ್ರತ್ಯಕ್ಷವಾಗಿದೆ.

ಮಂಗಳವಾರ ರಾತ್ರಿ 10 ಗಂಟೆ ವೇಳೆಗೆ ಸುಣ್ಣನದೊಡ್ಡಿ ಗೇಟ್ ಹಾಗೂ ಮಡೇನಹಳ್ಳಿ ಗೇಟ್ ಮಧ್ಯ ಭಾಗದಲ್ಲಿ ಚಿರತೆ ರಸ್ತೆ ದಾಟುತ್ತಿದ್ದುದ್ದನ್ನು ಕಾರಿನಲ್ಲಿ ಹೋಗುತ್ತಿದ್ದವರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಸಾಮಾಜಿಕ ಜಾಲತಾಣದಲ್ಲಿ ದೃಶ್ಯ ವೈರಲ್ ಆಗಿದೆ. ಚಿರತೆ ಕಾಣಿಸಿಕೊಂಡಿರುವುದರಿಂದ ಮಡೇನಹಳ್ಳಿ, ಸುಣ್ಣನದೊಡ್ಡಿ, ತೊರೆಬೊಮ್ಮನಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಬೋನಿಟ್ಟು ಚಿರತೆ ಸೆರೆ ಹಿಡಿಯುವಂತೆ ಮನವಿ ಮಾಡಿದ್ದಾರೆ.

1.35 ಲಕ್ಷಕ್ಕೆ ಬಂಡೂರು ತಳಿ ಟಗರು ಮಾರಾಟ



ಇತ್ತೀಚೆಗೆ ಮಳವಳ್ಳಿ ತಾಲೂಕಿನ ಕಿರುಗಾವಲು ಗ್ರಾಮದ ಯುವ ರೈತ ಉಲ್ಲಾಸ್ ಗೌಡ ಅವರು ಸಾಕಿದ್ದ ಬಂಡೂರು ತಳಿಯ 11 ತಿಂಗಳ ಟಗರನ್ನು ಬೆಂಗಳೂರಿನ ಇಂಜಿನಿಯರ್ ಹರೀಶ್ 1.35 ಲಕ್ಷ ರೂ.ಗಳಿಗೆ ಖರೀದಿಸಿದರು.

ಡಿಸಿ ಸೂಚನೆ ಮೇರೆಗೆ ಪೊಲೀಸ್ ಭದ್ರತೆಯಲ್ಲಿ ಅಧಿಕಾರಿಗಳಿಂದ ತಮಿಳು ಕಾಲೋನಿಯಲ್ಲಿ ಸರ್ವೇ

ಮಂಡ್ಯ, ಜ.28– ಮಿಮ್ಸ್ ಜಾಗಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಡಾ. ಕುಮಾರ್ ಸೂಚನೆ ಮೇರೆಗೆ ಪೊಲೀಸ್ ಬಿಗಿ ಭದ್ರತೆಯಲ್ಲಿ ತಮಿಳು ಕಾಲೋನಿಗೆ ತೆರಳಿದ ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ನಗರಸಭೆ ಅಧಿಕಾರಿಗಳು ಮನೆ ಮನೆ ಸರ್ವೇ ನಡೆಸಿದರು.

ಈಗಾಗಲೇ ತಮಿಳು ಕಾಲೋನಿ ಹಾಗೂ ಮಿಮ್ಸ್‌ಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವುದರಿಂದ ಫೆ.3ರಂದು ವಿಚಾರಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚನೆ ಮೇರೆಗೆ ಮಂಗಳವಾರ ಹಾಗೂ ಬುಧವಾರ ಎರಡೂ ದಿನಗಳ ಕಾಲ ಅಧಿಕಾರಿಗಳು ಮನೆ ಮನೆಗೆ ತೆರಳಿ ಸರ್ವೇ ನಡೆಸಿ ವಾಸಿಸುತ್ತಿರುವ ಕುಟುಂಬದವರ ದಾಖಲೆ ಹಾಗೂ ಮಾಹಿತಿ ಸಂಗ್ರಹಿಸಿದರು.

ಪ್ರಕರಣ ದಾಖಲಿಸುವ ಎಚ್ಚರಿಕೆ: 14 ಎಕರೆ ಜಮೀನು ತೆರವು ಸಂಬಂಧ ಈಗಾಗಲೇ ತಮಿಳು ನಿವಾಸಿಗಳು ಹಾಗೂ ಜಿಲ್ಲಾಡಳಿತದ ನಡುವೆ ಹಗ್ಗಜಗ್ಗಾಟ ನಡೆಯುತ್ತಿದ್ದು, ಮಂಗಳವಾರ ಸರ್ವೇ ನಡೆಸುವಾಗ ನಿವಾಸಿಗಳು ವಿರೋಧ ವ್ಯಕ್ತಪಡಿಸಿದರು. ಆಗ ಜಿಲ್ಲಾಧಿಕಾರಿ ಸೂಚನೆಯಂತೆ ಸರ್ವೇಗೆ ಅಡ್ಡಿಪಡಿಸಿದರೆ ಪ್ರಕರಣ ದಾಖಲಿಸುವುದಾಗಿ ಅಧಿಕಾರಿಗಳು ಎಚ್ಚರಿಕೆ ನೀಡಿದ ಹಿನ್ನೆಲೆಯಲ್ಲಿ ನಿವಾಸಿಗಳು ಸರ್ವೇಗೆ ಅನುವು ಮಾಡಿಕೊಟ್ಟರು.

ಅಧಿಕಾರಿಗಳ ವಿರುದ್ಧ ಆಕ್ರೋಶ: ಸರ್ವೇಗೆ ತೆರಳಿದ ಅಧಿಕಾರಿಗಳು ಹಾಗೂ ನಿವಾಸಿಗಳ ನಡುವೆ ಮಾತಿನ ಚಕಮಕಿ ನಡೆದಿದ್ದು, ಪೊಲೀಸರು ಪರಿಸ್ಥಿತಿ ನಿಭಾಯಿಸಿದರು. ಆದರೆ ನಿವಾಸಿಗಳು ಸರ್ವೇಗೆ ಬಂದಿರುವ ಅಧಿಕಾರಿಗಳು ವಾಸವಿಲ್ಲದ ಮನೆ, ಗುಡಿಸಲು, ಜಾನುವಾರು ಕಟ್ಟುವ ಗುಡಿಸಲುಗಳಿಗೂ ನಂಬರ್ ಹಾಕುವ ಮೂಲಕ ಲೆಕ್ಕ ಹಾಕುತ್ತಿದ್ದಾರೆ ಎಂದು ದೂರಿದರು.

ಕಳೆದ ಮೂರ್‍ನಾಲ್ಕು ದಿನಗಳ ಹಿಂದೆ ಜಿಲ್ಲಾಧಿಕಾರಿ ಡಾ.ಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈಗಾಗಲೇ 524 ಫಲಾನುಭವಿಗಳು ಇದ್ದಾರೆ ಎಂದು ವರದಿ ನೀಡಲಾಗಿದೆ. ಅದರಂತೆ ಫಲಾನುಭವಿಗಳ ಮನೆ, ಕುಟುಂಬದ ವಿವರ ಸಂಗ್ರಹಿಸುವಂತೆ ಸೂಚಿಸಿದ್ದರು. ಆದರೆ ಅಧಿಕಾರಿಗಳು ವಾಸವಿಲ್ಲದ ಮನೆಯನ್ನು ಸರ್ವೇಗೆ ಒಳಪಡಿಸುತ್ತಿದ್ದಾರೆ. ಅಲ್ಲದೇ ನಮ್ಮಲ್ಲಿ ಯಾರನ್ನು ಗಣನೆಗೆ ತೆಗೆದುಕೊಳ್ಳದೆ ಇಷ್ಟ ಬಂದಂತೆ ಸರ್ವೇ ನಡೆಸುತ್ತಿದ್ದಾರೆ ಎಂದು ನಿವಾಸಿ ವೆಂಕಟೇಶ್ ದೂರಿದರು.

2018ರಲ್ಲೇ ನ್ಯಾಯಾಲಯಕ್ಕೆ ಪಟ್ಟಿ ಸಲ್ಲಿಸಲಾಗಿದೆ. 1991ರಿಂದಲೂ ನಾವು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಇದೀಗ ಫೆ.3ರಂದು ನ್ಯಾಯಾಲಯದಲ್ಲಿ ವಿಚಾರಣೆ ಇರುವುದರಿಂದ ತರಾತುರಿಯಲ್ಲಿ ಅರ್ಹ ಫಲಾನುಭವಿಗಳ ಬಿಟ್ಟು ಇಲ್ಲದೆ ಇರುವವರ ಮನೆ, ಗುಡಿಸಲು, ಜಾನುವಾರು ಶೆಡ್‌ಗಳಿಗೂ ನಂಬರ್ ಹಾಕಿ ಸರ್ವೇ ನಡೆಸಿ ಹೆಚ್ಚುವರಿ ವಾಸವಿದ್ದಾರೆ ಎಂದು ತೋರಿಸಲು ಮುಂದಾಗಿದ್ದಾರೆ ಎಂದು ಆರೋಪಿಸಿದರು. ಜಿಲ್ಲಾಧಿಕಾರಿಯವರ ಸೂಚನೆಯಂತೆ ತಮಿಳು ಕಾಲೋನಿಗೆ ಭೇಟಿ ನೀಡಿ ಮನೆ ಮನೆಗೆ ತೆರಳಿ ಸರ್ವೇ ನಡೆಸಿ ವಾಸಿಸುತ್ತಿರುವ ಕುಟುಂಬದವರ ಮಾಹಿತಿ, ದಾಖಲೆ ಸಂಗ್ರಹಿಸಿದ್ದೇವೆ. ಇದುವರೆಗೂ 498 ಮನೆಗಳ ಸರ್ವೇ ನಡೆಸಿ ದಾಖಲೆ ಸಂಗ್ರಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಸೋಳ್ಳೇಪುರದಲ್ಲಿ ಬಾಳೆ, ಅಡಿಕೆ ಫಸಲು ನಾಶ



ಬಾಳೆ, ಅಡಿಕೆ ಫಸಲು ನಾಶಗೊಳಿಸಿರುವುದು.

ಕಿಕ್ಕೇರಿ, ಜ.28– ಕಿಡಿಗೇಡಿಗಳು ಬಾಳೆ ಹಾಗೂ ಅಡಿಕೆ ಫಸಲನ್ನು ನಾಶಗೊಳಿಸಿರುವ ಘಟನೆ ಮಂಗಳವಾರ ತಡರಾತ್ರಿ ಸೋಳ್ಳೇಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ರವಿ ಅವರಿಗೆ ಸೇರಿದ ಬಾಳೆ ಹಾಗೂ ಅಡಿಕೆ ಫಸಲು ನಾಶವಾಗಿರುವುದು. ರವಿ ಅವರು ತಮ್ಮ ಜಮೀನಿನಲ್ಲಿ ಬಾಳೆ ಹಾಗೂ ಅಡಿಕೆ ಬೆಳೆದಿದ್ದರು. ಮಂಗಳವಾರ ರಾತ್ರಿ ಜಮೀನಿಗೆ ನುಗ್ಗಿರುವ ಕಿಡಿಗೇಡಿಗಳು 500ಕ್ಕೂ ಹೆಚ್ಚು ಬಾಳೆ ಗಿಡಗಳು ಹಾಗೂ ಅಡಿಕೆ ಗಿಡಗಳನ್ನು ಕಡಿದು ನಾಶಗೊಳಿಸಿದ್ದಾರೆ. ಅಲ್ಲದೇ ಜಮೀನಿಗೆ ನೀರು ಹಾಯಿಸಲು ಬಳಸುವ ಗೇಟ್ ವಾಲ್ವ್‌ಗಳನ್ನು ಹಾಳು ಮಾಡಿದ್ದಾರೆ ಎನ್ನಲಾಗಿದೆ. ಈ ಸಂಬಂಧ ಕಿಡಿಗೇಡಿಗಳನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ರವಿ ಕಿಕ್ಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಗೃಹಿಣಿ ಅನುಮಾನಾಸ್ಪದ ಸಾವು

ಮಂಡ್ಯ, ಜ.28– ಗೃಹಿಣಿಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ನಗರದ ಆನೆಕೆರೆ ಬೀದಿಯಲ್ಲಿ ಮಂಗಳವಾರ ಸಂಜೆ ನಡೆದಿದೆ.

ಆನೆಕೆರೆ ಬೀದಿ ನಿವಾಸಿ ಬೋರೇಗೌಡರ ಪತ್ನಿ ಹೇಮಾ (42) ಸಾವನ್ನಪ್ಪಿದವರಾಗಿದ್ದು, ಈಕೆಯನ್ನು ಹತ್ಯೆ ಮಾಡಿ ನಂತರ ನೇಣು ಹಾಕಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾ ಪೊಲೀಸ್ ಅಧೀಕ್ಷಕಿ ಡಾ.ವಿ.ಜೆ.ಶೋಭರಾಣಿ ಅವರು ಪರಿಶೀಲನೆ ನಡೆಸಿದರು. ಬಳಿಕ ಶವವನ್ನು ಜಿಲ್ಲಾಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದ್ದು, ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ಸಂತ್ಯಾಂಶ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಸೆಂಟ್ರಲ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಒಂದನೇ ಪುಟದಿಂದ

ಅನಧಿಕೃತ ಕಟ್ಟಡ ನೆಲಸಮ

ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸರ್ವೇ ನಂ. 30/1 ರಲ್ಲಿ 6 ಗುಂಟೆ, 30/2 ರಲ್ಲಿ 31 ಗುಂಟೆ ಮತ್ತು 30/6 ರಲ್ಲಿ 37 ಗುಂಟೆ ಸೇರಿ ಒಟ್ಟು 1.34 ಎಕರೆ ಪ್ರದೇಶಕ್ಕೆ 2019ರ ಜುಲೈ 4 ರಂದು ವಸತಿ ಬಡಾವಣೆ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಲಾಗಿದೆ.

ಈ ಅನುಮೋದಿತ ನಕ್ಷೆಯಲ್ಲಿ ನಾಗರಿಕ ಸೌಕರ್ಯ ನಿವೇಶನಕ್ಕಾಗಿ 378.18 ಚದರಮೀಟರ್ ಜಾಗವನ್ನು ಕಾಯ್ದಿರಿಸಲಾಗಿದೆ. ಆ ನಿವೇಶನವು ಪ್ರಾಧಿಕಾರದ ಆಸ್ತಿಯಾಗಿದ್ದು ಸುಮಾರು 80 ರಿಂದ 90 ಲಕ್ಷ ರೂ ಬೆಲೆಬಾಳುತ್ತದೆ. ಪ್ರಾಧಿಕಾರಕ್ಕೆ ಸೇರಿದ ಈ ಸಿಎ ನಿವೇಶನದಲ್ಲಿ ಶ್ರೀ ರಾಘವೇಂದ್ರ ಪಿ.ಸಿ. ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್‌ನವರು ಅನಧಿಕೃತವಾಗಿ ಶಾಲಾ ಕಟ್ಟಡವನ್ನು ನಿರ್ಮಾಣ ಮಾಡುತ್ತಿದ್ದು, ತೆರವುಗೊಳಿಸಬೇಕೆಂದು ಜನವರಿ 28 ರಂದು ಅಧಿಕೃತ ಜ್ಞಾಪನದಲ್ಲಿ ಸೂಚಿಸಿದ್ದರು. ಅದರಂತೆ ಮುಂಜಾನೆ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ನಿರ್ಮಾಣ ಹಂತದ ಕಟ್ಟಡವನ್ನು ಜೆಸಿಬಿ ಬಳಸಿ ತೆರವುಗೊಳಿಸಿ ಸ್ಥಳದಲ್ಲಿ ಎಂಡಿಎ ಸಿಎ ನಿವೇಶನವೆಂದು ಫಲಕ ಅಳವಡಿಸಿದರು. ಈ ವೇಳೆ ಆಲನಹಳ್ಳಿ ಹಾಗೂ ಉದಯಗಿರಿ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡಿದ್ದರು.

ಎಂಡಿಎ ಕಾರ್ಯಪಡೆ ನಿಷ್ಕ್ರೀಯ!

ಮೈಸೂರು, ಜ.28(ಆರ್‌ಕೆ)– ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಆಸ್ತಿಗಳನ್ನು ರಕ್ಷಿಸುವ ಸಲುವಾಗಿ ರಚಿಸಿರುವ ಟಾಸ್ಕ್ ಫೋರ್ಸ್ (ಕಾರ್ಯಪಡೆ) ನಿಷ್ಕ್ರೀಯವಾಗಿದೆ ಎಂಬ ದೂರು ವ್ಯಾಪಕವಾಗಿ ಕೇಳಿಬಂದಿದೆ. ಇದೊಂದು ಕಾಟಾಚಾರದ ಕಾರ್ಯಪಡೆ ಎಂದೂ ಹೇಳಲಾಗುತ್ತಿದೆ.

ಪ್ರಾಧಿಕಾರದ ಕಮಿಷ್ನರ್ ಕೆ.ಆರ್. ರಕ್ಷಿತ್, 2025ರ ಅಕ್ಟೋಬರ್ 13ರಂದು, ಕಚೇರಿ ಆದೇಶದಲ್ಲಿ ಪ್ರಾಧಿಕಾರದ ಆಸ್ತಿಗಳ ರಕ್ಷಣೆ ಮಾಡಲು ಅಧಿಕಾರಿಗಳನ್ನೊಳಗೊಂಡ ಟಾಸ್ಕ್ ಫೋರ್ಸ್ ರಚಿಸಿರುವುದಾಗಿ ತಿಳಿಸಿದ್ದರು. ಎಂಡಿಎ ಆಸ್ತಿಗಳಿಗೆ ಅತಿಕ್ರಮ ಪ್ರವೇಶ ಮಾಡಿ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸುತ್ತಿರುವ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ದೂರುಗಳು ಕೇಳಿಬರುತ್ತಿರುವ ಕಾರಣ ಆಸ್ತಿಗಳನ್ನು ರಕ್ಷಿಸುವ ಸಲುವಾಗಿಯೇ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನೊಳಗೊಂಡ ಕಾರ್ಯಪಡೆಯನ್ನು ರಚಿಸಿ ಆದೇಶ ಹೊರಡಿಸಿದ್ದರು. ಎಕ್ಸಿಕ್ಯೂಟಿವ್ ಇಂಜಿನಿಯರ್ ಎಂ.ಎಸ್. ಮಹೇಶ್ ಮೇಲುಸ್ತುವಾರಿಯಲ್ಲಿ ವಿಶೇಷ ತಹಶೀಲ್ದಾರ್‌ಗಳಾದ ಕೆ.ವಿ. ರಾಜಶೇಖರ್, ರವಿಪ್ರಸಾದ್, ಎನ್.ಎಸ್. ನರಗುಂದ, ಕಾರ್ಯಪಾಲಕ ಅಭಿಯಂತರ ಎ. ನಾಗೇಶ್, ವ್ಯವಸ್ಥಾಪಕರಾದ ಬಿ.ಎಂ. ಶೃತಿ ಸಿಬ್ಬಂದಿಗಳಾದ ಟಿ. ಮಂಜುನಾಥ್, ಪಿ. ರಘು, ಪಿ.ಎಂ. ಸಚಿನ್, ಎಸ್. ಗಂಗಾಧರ್, ಮಹದೇವಸ್ವಾಮಿ, ಕೆಂಪಣ್ಣ, ಕೆ.ಸಿ. ಉಮೇಶ್ ಅವರನ್ನೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿತ್ತು.

ಪ್ರಾಧಿಕಾರದ ಆಸ್ತಿಯನ್ನು ಒತ್ತುವರಿ ಮಾಡಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಅಥವಾ ಸ್ವಾಧೀನಾನುಭವದಲ್ಲಿರುವ ಸ್ಥಳಗಳನ್ನು ಭೌತಿಕವಾಗಿ ಗುರುತಿಸಿ, ಒತ್ತುವರಿಯಾಗಿರುವುದು ದೃಢಪಟ್ಟ ನಂತರ ತೆರವು ಕಾರ್ಯಾಚರಣೆ ಕೈಗೊಂಡು, ಎಂಡಿಎ ಸುಪರ್ದಿಗೆ ಪಡೆದು ಸೂಚನಾ ಫಲಕ ಹಾಗೂ ತಂತಿ ಬೇಲಿ ಅಳವಡಿಸಬೇಕೆಂದು ಟಾಸ್ಕ್ ಫೋರ್ಸ್ ಅಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿತ್ತು.

ಆದರೆ ಕಾರ್ಯಪಡೆ ರಚನೆಯಾಗಿ 3 ತಿಂಗಳಾಗಿದ್ದರೂ ಒಂದೂ ಕಾರ್ಯಾಚರಣೆ ನಡೆಸಿಲ್ಲ. ಆಸ್ತಿ ರಕ್ಷಿಸುವ ಕೆಲಸವನ್ನೇ ಆರಂಭಿಸಿಲ್ಲ. ಅಲ್ಲಲ್ಲಿ ಪ್ರಾಧಿಕಾರದ ಆಸ್ತಿಗಳನ್ನು ಎಗ್ಗಿಲ್ಲದೇ ಒತ್ತುವರಿ ಮಾಡುತ್ತಿರುವುದು ಕಂಡು ಬಂದಿದೆ. ಅಲ್ಲದೆ ಮುಡಾ ಅವಧಿಯಲ್ಲಿ ಮೈಸೂರಿನ ವಿವಿಧೆಡೆ ಇದ್ದಂತಹ ಕಾಯ್ದಿಟ್ಟ ಭೂಮಿ 'ಭೂ ಬ್ಯಾಂಕ್' ಕಂಡ ಕಂಡವರ ಪಾಲಾಗಿದೆ. ಅಲ್ಲದೆ ಅಭಿವೃದ್ಧಿಪಡಿಸಿದ ಖಾಸಗಿ ಬಡಾವಣೆಗಳಲ್ಲಿನ ತನ್ನ ಪಾಲಿನ ಸಿಎ ನಿವೇಶನಗಳ ರಕ್ಷಿಸಿಕೊಳ್ಳುವ ಕೆಲಸವನ್ನೇ ಎಂಡಿಎ ಮಾಡುತ್ತಿಲ್ಲ. ಅದೆಷ್ಟೋ ಖಾಸಗಿ ಬಡಾವಣೆಗಳ ಸಿಎ ನಿವೇಶನ ಕಂಡ ಕಂಡವರ ಪಾಲಾಗಿವೆ. ಪ್ರಾಧಿಕಾರದ ಆಸ್ತಿಗಳ ರಕ್ಷಣೆ ಮಾಡಲೆಂದೇ ನಿಯೋಜನೆಗೊಂಡಿದ್ದ ಕಾರ್ಯಪಡೆ ಈಗ ದಿಕ್ಕು ದೆಸೆ ಇಲ್ಲದಂತಾಗಿದೆ.

ಸಂಬಂಧ ಶೀಘ್ರದಲ್ಲೇ ಸೂಕ್ತ ನಿರ್ಧಾರ

ಉದಯರವಿ ನಿವಾಸವನ್ನು ಸ್ಮಾರಕವಾಗಿ ಅಭಿವೃದ್ಧಿಪಡಿಸಲು ಮುಖ್ಯಮಂತ್ರಿ ಗಳೊಂದಿಗೆ ಚರ್ಚಿಸಿ, ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. 2018–19ನೇ ಸಾಲಿನ ಆಯವ್ಯಯದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಮೈಸೂರಿನ ಉದಯರವಿ ನಿವಾಸವನ್ನು ರಾಷ್ಟ್ರಕವಿ ಸ್ಮಾರಕವಾಗಿ ಸಂರಕ್ಷಿಸಿ ಅಭಿವೃದ್ಧಿಪಡಿಸಿ, ಮುಂದಿನ ಪೀಳಿಗೆಗೆ ಕುವೆಂಪು ಅವರ ವಿಚಾರಧಾರೆಗಳನ್ನು ಪರಿಚಯಿಸುವ ಉದ್ದೇಶವನ್ನು ಘೋಷಣೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ಶ್ರೀಮತಿ ತಾರಿಣಿ ಚಿದಾನಂದ(ರಾಷ್ಟ್ರಕವಿ ಕುವೆಂಪು ಅವರ ಮಗಳು) ಅವರು ಕುವೆಂಪು ಅವರ ಉದಯರವಿ ನಿವಾಸವನ್ನು ಸ್ಮಾರಕವನ್ನಾಗಿ ಸಂರಕ್ಷಿಸಲು ಅನುವಾಗುವಂತೆ ಸರ್ಕಾರಕ್ಕೆ ಹಸ್ತಾಂತರಿಸಲು ಕೆಲವು ಬೇಡಿಕೆಗಳನ್ನು ಸಲ್ಲಿಸಿದ್ದಾರೆ. ಹಾಗಾಗಿ ಶ್ರೀಮತಿ ತಾರಿಣಿ ಚಿದಾನಂದ ಹಾಗೂ ಕುವೆಂಪು ಅವರ ಅಳಿಯರಾದ ಪ್ರೊ.ಕೆ.ಚಿದಾನಂದಗೌಡ ಅವರೊಂದಿಗೆ ಮಾತನಾಡಿದ್ದು, ಸೂಕ್ತ ನಿರ್ಧಾರವನ್ನು ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ.



ಕಾರ್ಖಾನೆ ಕಾಂಪೌಂಡ್‌ನಲ್ಲಿ ಅಧಿಕಾರಿಗಳ ವಾಹನಗಳು.

ಡ್ರಗ್ಸ್ ತಯಾರಿಕೆ!

ಮೇಲೆ ಮಾದಕ ವಸ್ತು ತಯಾರಿಸುತ್ತಿರುವ ಮಾಹಿತಿ ಆದರಿಸಿ, ದೆಹಲಿಯ ರಾಷ್ಟ್ರೀಯ ಮಾದಕ ದ್ರವ್ಯ ನಿಯಂತ್ರಣ ಬ್ಯೂರೋ (ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ/ಎನ್‌ಸಿಬಿ) ತಂಡ ಬುಧವಾರ ದಾಳಿ ನಡೆಸಿತು. ಅಲ್ಲದೆ, ರಾತ್ರಿಯವರೆಗೂ ಶೋಧನೆ ಹಾಗೂ ಸಂಬಂಧಿಸಿದವರ ವಿಚಾರಣೆ ಸಹ ನಡೆಸಿತು.

ಇಲ್ಲಿನ 'ಟುಕ್–ಟುಕ್ ಹೌಸ್ ಹೋಲ್ಡ್ ಕೆಮಿಕಲ್ಸ್ ಪ್ರೊಡಕ್ಷನ್ ಸಲ್ಯೂಷನ್ ಮ್ಯಾನುಫ್ಯಾಕ್ಚರಿಂಗ್' (ಮನೆಯ ಸ್ವಚ್ಛತೆಗೆ ಬಳಸುವ ರಾಸಾಯನಿಕಗಳ ತಯಾರಿಕಾ ಘಟಕ) ಹೆಸರಿನ ಕಾರ್ಖಾನೆ ಮೇಲೆ ದಾಳಿ ನಡೆಸಿದ ಎನ್‌ಸಿಬಿ ತಂಡ, ಈ ವೇಳೆ ಅಲ್ಲಿದ್ದ ಖಾಲಿ ಬಾಟಲಿಗಳು, ಕಾಸ್ಟಿಕ್ ಸೋಡಾ ಮತ್ತು ಉಪ್ಪು ಇತ್ಯಾದಿ ಸಾಮಗ್ರಿಗಳ ಪರಿಶೀಲನೆ ನಡೆಸಿತು.

ಗುಜರಾತಿನ ಅಹ್ಮದಾಬಾದ್‌ನಲ್ಲಿ ಡ್ರಗ್ಸ್ ಸಂಬಂಧ ಬಂಧಿತನಾದ ಆರೋಪಿಯು ಗಣಪತ್ ಲಾಲ್ ಮಾಲೀಕತ್ವದ ಈ ಕೆಮಿಕಲ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ಮಾತ್ರವಲ್ಲದೆ, ಆತನು ಗಣಪತ್ ಲಾಲ್‌ಗೆ ಹತ್ತಿರದ ಸಂಬಂಧಿ. ಹಾಗಾಗಿ ಸಂಶಯದ ಮೇರೆಗೆ ಎನ್‌ಸಿಬಿ ತಂಡ ಬುಧವಾರ ಹೆಬ್ಬಾಳು ಕೈಗಾರಿಕಾ ಪ್ರದೇಶದ ಗಣಪತ್ ಲಾಲ್ ಮಾಲೀಕತ್ವದ ಕಾರ್ಖಾನೆ ಮೇಲೆ ದಾಳಿ ನಡೆಸಿ, ತಪಾಸಣೆ ನಡೆಸಿತು. ಇದೇ ವೇಳೆ ಗಣಪತ್ ಲಾಲ್ ಮನೆಯಲ್ಲಿಯೂ ಎನ್‌ಸಿಬಿ ತಂಡ ತಪಾಸಣೆ ನಡೆಸಿದೆ ಎಂದು ಹೇಳಲಾಗಿದೆ.

ಸದರಿ ಕಾರ್ಖಾನೆಯಲ್ಲಿ ಕಂಡುಬಂದ ವಸ್ತುಗಳು ಯಾವುವು, ಯಾವ ಕೆಮಿಕಲ್ಸ್, ಎಷ್ಟು ಪ್ರಮಾಣದಲ್ಲಿವೆ, ಅವುಗಳಲ್ಲಿ ಮಾದಕ ವಸ್ತುಗಳ ಅಂಶವಿರಬಹುದೇ ಎಂಬ ಬಗ್ಗೆ ಎನ್‌ಸಿಬಿ ಅಧಿಕಾರಿಗಳು ತಪಾಸಣೆ ನಡೆಸಿದರು. ಅಲ್ಲದೆ, ಕಾರ್ಖಾನೆಯಲ್ಲಿ ತಪಾಸಣೆ ವೇಳೆ ಯಾವ್ಯಾವ ವಸ್ತುಗಳು ದೊರೆತಿವೆ ಎಂಬ ಬಗ್ಗೆ ದೆಹಲಿಯ ಹಿರಿಯ ಅಧಿಕಾರಿಗಳಿಗೆ ಆಗಾಗ್ಗೆ ಮಾಹಿತಿ ರವಾನೆ ಮಾಡುತ್ತಿದ್ದರು.

ಹೆಬ್ಬಾಳು ಕೈಗಾರಿಕಾ ಪ್ರದೇಶದ ಸದರಿ ಕಾರ್ಖಾನೆ ಮೇಲೆ ದಾಳಿ ಮಾಡುವ ಬಗ್ಗೆ ಎನ್‌ಸಿಬಿ ತಂಡವು ಸ್ಥಳಿಯ ಪೊಲೀಸರಿಗೆ ಯಾವುದೇ ಮಾಹಿತಿ ನೀಡಿರಲಿಲ್ಲ ಎನ್ನಲಾಗಿದೆ. ಆದರೆ ನಗರ ಪೊಲೀಸ್ ಆಯುಕ್ತರು ನಮಗೆ ಮಾಹಿತಿ ನೀಡಿದ್ದರು ಎಂದು ಹೇಳಿಕೊಂಡಿದ್ದಾರೆ. ಎನ್‌ಸಿಬಿ ತಂಡವು ಬೆಳಿಗ್ಗೆಯಿಂದ ಕಾರ್ಯಾಚರಣೆ ನಡೆಸಿದ್ದರೂ ಮಧ್ಯಾಹ್ನದ ನಂತರವಷ್ಟೇ ಮೈಸೂರು ಪೊಲೀಸರಿಗೆ ಈ ಮಾಹಿತಿ ಲಭ್ಯವಾಯಿತು. ತರುವಾಯ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಹಾಗೂ ಡಿಸಿಪಿ ಸುಂದರ್ ರಾಜ್ ಸ್ಥಳಕ್ಕೆ ಭೇಟಿ ನೀಡಿದರು. ಬಳಿಕ ಪ್ರಕರಣ ಸಂಬಂಧ ಎನ್‌ಸಿಬಿ ಅಧಿಕಾರಿಗಳಿಂದ ಮಾಹಿತಿ ಪಡೆದರು ಎನ್ನಲಾಗಿದೆ. ಎನ್‌ಸಿಬಿ ಅಧಿಕಾರಿಗಳ ತಂಡ ವಿಚಾರಣೆ ಮುಂದುವರೆಸಿದ್ದಾರೆ ಎನ್ನಲಾಗಿದೆಯಾದರೂ ಈ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲ. ಅಲ್ಲದೆ, ಇವರು ದೆಹಲಿ ಎನ್‌ಸಿಬಿ ಘಟಕದ ಅಧಿಕಾರಿಗಳು ಎಂದು ಹೇಳಲಾಗಿದೆ. ಆದರೆ ಇವರು ಬೆಂಗಳೂರು ಎನ್‌ಸಿಬಿ ಅಧಿಕಾರಿಗಳ ತಂಡ ಎಂದು ನಗರ ಪೊಲೀಸ್ ಆಯುಕ್ತರು ಹೇಳಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಏನು ಪತ್ತೆಯಾಗಿಲ್ಲ

"ಕೆಲವು ಕೈಗಾರಿಕೆಗಳು ಕೆಆರ್‌ಎಸ್, ಶ್ರೀರಂಗಪಟ್ಟಣದ ಗಡಿ ಭಾಗದಲ್ಲಿದ್ದು, ಅಲ್ಲಿನ ಫ್ಯಾಕ್ಟರಿ ಮೇಲೆ ದಾಳಿ ಮಾಡಿರಬಹುದು ಎಂಬ ಶಂಕೆ ಇತ್ತು. ಈ ಹಿನ್ನೆಲೆಯಲ್ಲಿ ಕೆಆರ್‌ಎಸ್ ಹಾಗೂ ಶ್ರೀರಂಗಪಟ್ಟಣ ಪೊಲೀಸರು ಕೂಡ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶೀಲನೆ ನಡೆಸಿದರು ಎನ್ನಲಾಗಿದೆ. ಆದರೆ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೋಭಾ ರಾಣಿ ಅವರು ಇದನ್ನು ನಿರಾಕರಿಸಿದರು. ಕೆಆರ್‌ಎಸ್, ಶ್ರೀರಂಗಪಟ್ಟಣ ಸೇರಿದಂತೆ ಮಂಡ್ಯ ಜಿಲ್ಲೆಯಲ್ಲಿ ಯಾವುದೇ ರಾಜ್ಯದ ಪೊಲೀಸರು ಕಾರ್ಯಾಚರಣೆ ನಡೆಸಿರುವ ಬಗ್ಗೆ ಮಾಹಿತಿ ಇಲ್ಲ. ಅಲ್ಲದೆ ನಮ್ಮ ಜಿಲ್ಲೆ ವ್ಯಾಪ್ತಿಯಲ್ಲಿ ಎಲ್ಲೂ ಡ್ರಗ್ಸ್ ಪತ್ತೆಯಾಗಿಲ್ಲ ಎಂದು ಸ್ಪಷ್ಟನೆ ನೀಡಿದರು.

ಕಟ್ಟಡದ ಮಾಲೀಕರ ವಿಚಾರಣೆ ನಡೆಸಿದ ಎನ್‌ಸಿಬಿ ತಂಡ

ಮೈಸೂರು,ಜ.28(ಪಿಎಂ)– ಹೆಬ್ಬಾಳು ಕೈಗಾರಿಕಾ ಪ್ರದೇಶದ ಗಣಪತ್ ಲಾಲ್ ಮಾಲೀಕತ್ವದ ಕೆಮಿಕಲ್ಸ್ ಕಾರ್ಖಾನೆಯ ಕಟ್ಟಡದ ಮಾಲೀಕ ಬೋರೇಗೌಡ ಅವರನ್ನೂ ಎನ್‌ಸಿಬಿ ಅಧಿಕಾರಿಗಳ ತಂಡ ವಿಚಾರಣೆ ನಡೆಸಿತು.

ಬೋರೇಗೌಡ ಪರ ವಕೀಲ ಭರತ್ ಅವರು ಈ ವಿಷಯ ತಿಳಿಸಿದರು. ಬುಧವಾರ ಹೆಬ್ಬಾಳು ಕೈಗಾರಿಕಾ ಪ್ರದೇಶದ ಸದರಿ ಕೆಮಿಕಲ್ಸ್ ಕಾರ್ಖಾನೆಗೆ ಬಳಿ ಮಾಧ್ಯಮದವರಿಗೆ ಎದುರಾದ ಭರತ್ ಅವರು ಪ್ರತಿಕ್ರಿಯಿಸಿ, ಕಟ್ಟಡದ ಮಾಲೀಕರಾದ ಹಿನ್ನೆಲೆಯಲ್ಲಿ ಬೋರೇಗೌಡರನ್ನು ವಿಚಾರಣೆಗೆ ಕರೆದಿದ್ದರು. ಹಾಗಾಗಿ ಅವರು ಬಂದಿದ್ದಾರೆ ಎಂದು ತಿಳಿಸಿದರು. ಈ ಕಟ್ಟಡದ ಮಾಲೀಕ ಬೋರೇಗೌಡ ಅವರಿಗೆ ಕೆಐಎಡಿಬಿ ಮೂಲಕ ಈ ಕಟ್ಟಡದ ನಿವೇಶನ ಮಂಜೂರಾಗಿತ್ತು. ಬೋರೇಗೌಡ ಅವರು ಒಂದು ವರ್ಷದಿಂದ ಗಣಪತ್ ಲಾಲ್ ಎಂಬುವವರಿಗೆ ಕಟ್ಟಡವನ್ನು ಬಾಡಿಗೆಗೆ ನೀಡಿದ್ದಾರೆ. ಈ ಸಂಬಂಧ ಕರಾರು ಪತ್ರ ಕೂಡ ಆಗಿದೆ. ಗಣಪತ್ ಲಾಲ್ ಅವರು ಕೆಮಿಕಲ್ಸ್ ಫ್ಯಾಕ್ಟರಿ ಮಾಡುವುದಾಗಿ ಬಾಡಿಗೆಗೆ ಪಡೆದಿದ್ದಾರೆ. 50 ಲಕ್ಷ ಅಡ್ವಾನ್ಸ್ ಹಾಗೂ ಮಾಸಿಕ 45 ಸಾವಿರ ಬಾಡಿಗೆ ನಿಗದಿಯಾಗಿದೆ ಎಂದು ವಿವರಿಸಿದರು.

ಕಳೆದ ಫೆಬ್ರವರಿಯಲ್ಲಿ ಬಾಡಿಗೆಗೆ ನೀಡಲಾಗಿದೆ. ಗಣಪತ್ ಲಾಲ್ ಮೈಸೂರಿನವರೇ. ಆಲನಹಳ್ಳಿಯಲ್ಲಿ ಅವರ ಮನೆ ಇದೆಯಂತೆ. ಯಂತ್ರೋಪಕರಣ ಅಳವಡಿಸಿದ್ದಾರೆ. ಶೀಘ್ರದಲ್ಲಿ ಕೆಲಸ ಶುರು ಮಾಡುವುದಾಗಿ ಹೇಳಿದ್ದರು. ನನಗೆ ಗೊತ್ತಿರುವಂತೆ ಕಾರ್ಖಾನೆಯಲ್ಲಿ ಇನ್ನು ಉತ್ಪಾದನೆ ಶುರು ಮಾಡಿಲ್ಲ ಎಂದು ಹೇಳಿದರು.

ಮಾದಕ ವಸ್ತು, ದ್ರವ್ಯಗಳೇನೂ ಸಿಕ್ಕಿಲ್ಲ

ಮಾಲೀಕತ್ವದಲ್ಲಿ ಹೆಬ್ಬಾಳಲ್ಲಿರುವ ಕೆಮಿ ಕಲ್ಸ್ ಕಾರ್ಖಾನೆಯಲ್ಲಿ ಅಹ್ಮದಾಬಾದ್ ನಲ್ಲಿ ಬಂಧಿತನಾದ ಆರೋಪಿಯು ಕೆಲಸ ಸಹ ಮಾಡುತ್ತಿದ್ದ. ಈ ಹಿನ್ನೆಲೆಯಲ್ಲಿ ಸದರಿ ಕಾರ್ಖಾನೆಯಲ್ಲಿ ತಪಾಸಣೆ ನಡೆ ಸಿದ್ದು, ಅಲ್ಲೂ ಸಹ ಮಾದಕ ದ್ರವ್ಯಕ್ಕೆ ಸಂಬಂಧಿಸಿದ ಏನೂ ಸಿಕ್ಕಿಲ್ಲ. ಪ್ಲಾಸ್ಟಿಕ್ ಬಾಟಲಿ ಗಳು, ಫಿನಾಯಿಲ್, ಕಾಸ್ಟಿಕ್ ಸೋಡಾ, ಸಾಲ್ಟ್ ಕಂಡು ಬಂದಿವೆ. ಗಣಪತ್ ಲಾಲ್ ಬಾಡಿಗೆಗೆ ಕಟ್ಟಡ ಪಡೆದು ಕಾರ್ಖಾನೆ ಮಾಡುತ್ತಿದ್ದಾರೆ ಎಂದು ವಿವರಿಸಿದರು. ಇದು ಕಾರ್ಯಾಚರಣೆಯಲ್ಲ. ಇದು ಕೇವಲ ಫಾಲೋ ಅಪ್ ಕೇಸ್. ನಮ್ಮ ಹೆಬ್ಬಾಳು ಪೊಲೀಸರು ಸಹ ಎನ್‌ಸಿಬಿ ತಂಡದೊಂದಿಗೆ ಇದ್ದು, ಸಹಕಾರ ನೀಡಿದ್ದಾರೆ. ನಾವು ಸಹ ಬೇರೆ ರಾಜ್ಯಗಳಲ್ಲಿ ಫಾಲೋ ಅಪ್ ಕೇಸ್‌ಗಾಗಿ ಈ ರೀತಿ ಹೋಗುವುದಿದೆ. ಮೈಸೂರು ನಗರದಲ್ಲಿ ಪ್ರತಿದಿನ ನಗರದಲ್ಲಿ ಅನುಮಾನಾಸ್ಪದ ಸ್ಥಳಗಳಿಗೆ ಭೇಟಿ ನೀಡಿ ತಪಾಸಣೆ ನಡೆಸುತ್ತಿದ್ದೇವೆ. ಪ್ರಕರಣಗಳನ್ನು ದಾಖಲು ಮಾಡುತ್ತಿದ್ದೇವೆ. ಕೆಮಿಕಲ್ಸ್ ಫ್ಯಾಕ್ಟರಿಗಳಿಗೆ ಸಹ ಭೇಟಿ ನೀಡಿ ತಪಾಸಣೆ ನಡೆಸಲಾಗುತ್ತಿದೆ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಎನ್‌ಸಿಬಿ ಬೆಂಗಳೂರು ತಂಡ: ನಗರ ಪೊಲೀಸರಿಗೆ ಯಾವುದೇ ಮಾಹಿತಿ ನೀಡದೇ ದಾಳಿ ನಡೆಸಿದ್ದಾರೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಆ ರೀತಿ ಏನೂ ಇಲ್ಲ. ನಮಗೆ ಮಾಹಿತಿ ನೀಡಿಯೇ ಅವರು ಬಂದಿದ್ದಾರೆ ಎಂದು ಹೇಳಿದರಲ್ಲದೆ, ಇಂದು ಮೈಸೂರಿನಲ್ಲಿ ವಿಚಾರಣೆ ನಡೆಸಿದವರು ಎನ್‌ಸಿಬಿ ಬೆಂಗಳೂರು ತಂಡ ಎಂದು ಮಾಹಿತಿ ನೀಡಿದರು.

ಡಿಸಿಎಂ ಅಜಿತ್ ಪವಾರ್ ಸಾವು

ಗುರುತಿಸಲು ಸಾಧ್ಯವಾಯಿತು. 66 ವರ್ಷದ, ಎನ್‌ಸಿಪಿ ಹಿರಿಯ ನಾಯಕ ಶರದ್ ಪವಾರ್‌ರವರ ಸೋದರಳಿಯ ಅಜಿತ್ ಪವಾರ್ ಮಹಾರಾಷ್ಟ್ರ ರಾಜಕಾರಣದಲ್ಲಿ ತಮ್ಮದೇ ಪ್ರಭಾವವನ್ನು ಹೊಂದಿದ್ದರು. ಸುಮಾರು 8 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಅಜಿತ್ ಪವಾರ್, ಮಹಾರಾಷ್ಟ್ರದಲ್ಲಿ ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ಬಿಜೆಪಿ ತೆಕ್ಕೆಗೆ ಬಂದಿದ್ದರು. ಕಳೆದ ವರ್ಷ ನಡೆದ ಮಹಾರಾಷ್ಟ್ರ ಚುನಾವಣೆಯಲ್ಲಿ ಇವರ ಮೈತ್ರಿಕೂಟ ಅಭೂತಪೂರ್ವ ಜಯ ಸಾಧಿಸಿ, ಅಧಿಕಾರ ಹಿಡಿಯುತ್ತಿದ್ದಂತೆಯೇ ಅಜಿತ್ ಪವಾರ್, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು.

ಮೂರು ದಿನ ಶೋಕಾಚರಣೆ: ಅಜಿತ್ ಪವಾರ್ ನಿಧನದ ಹಿನ್ನೆಲೆಯಲ್ಲಿ ಮಹಾರಾಷ್ಟ್ರದಾದ್ಯಂತ ಮೂರು ದಿನಗಳ ಶೋಕಾಚರಣೆ ಘೋಷಿಸಲಾಗಿದೆ. ಈ ವೇಳೆ ಎಲ್ಲಾ ಸರ್ಕಾರಿ ಕಚೇರಿಗಳು ಬಂದ್ ಆಗಿರುತ್ತವೆ. ಅಧಿಕೃತ ಕಾರ್ಯಕ್ರಮಗಳನ್ನು ನಿಷೇಧಿಸಲಾಗಿದೆ. ಇಂದಿನಿಂದ ಮೂರು ದಿನಗಳ ಕಾಲ ರಾಷ್ಟ್ರಧ್ವಜ ಅರ್ಧಕ್ಕೆ ಹಾರಿಸಲಾಗುತ್ತಿದೆ.

ಇವರ ನಿಧನಕ್ಕೆ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಕಂಬನಿ ಮಿಡಿದಿದ್ದು, ಅಜಿತ್ ದಾದಾ ತಮ್ಮ ಸರಳತೆ ಮತ್ತು ಕಠಿಣ ಪರಿಶ್ರಮದಿಂದ ಜನರ ಮನಸ್ಸಲ್ಲಿ ನೆಲೆಯೂರಿದ್ದಾರೆ ಎಂದು ಹೇಳಿದ್ದಾರೆ.

ತಮ್ಮ ಸೋದರಳಿಯ ಅಜಿತ್ ಪವಾರ್ ಅವರ ನಿಧನದಿಂದ ದುಃಖಿತರಾಗಿರುವ ಶರದ್ ಪವಾರ್, ಈ ಸಾವಿನಲ್ಲಿ ಯಾವುದೇ ಪಿತೂರಿಯಿಲ್ಲ. ಇದು ಸಂಪೂರ್ಣ ಅಪಘಾತವಾಗಿದೆ. ಅಜಿತ್ ಪವಾರ್ ನಿಧನದಿಂದ ಮಹಾರಾಷ್ಟ್ರಕ್ಕೆ ಬಹುದೊಡ್ಡ ನಷ್ಟವಾಗಿದೆ. ನಾವು ಒಬ್ಬ ಸಮರ್ಥ ನಾಯಕನ ಕಳೆದುಕೊಂಡಿದ್ದೇವೆ ಎಂದು ಕಂಬನಿ ಮಿಡಿದಿದ್ದಾರೆ.

ತನಿಖೆ: ಇನ್ನು ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಸೇರಿ ಐವರು ಸಾವಿಗೀಡಾದ ಬಾರಾಮತಿ ವಿಮಾನ ನಿಲ್ದಾಣದಲ್ಲಿನ ದುರಂತದ ತನಿಖೆಯನ್ನು ವಿಮಾನ ಅಪಘಾತ ತನಿಖಾ ಬ್ಯೂರೋ (ಎಎಐಬಿ) ಮೂಲಕ ನಡೆಸುವುದಾಗಿ ವಿಮಾನ ನಿಯಂತ್ರಕ ಡಿಜಿಸಿಎ ಪ್ರಕಟಿಸಿದೆ.

ತನಿಖೆಗೆ ಮಮತಾ ಆಗ್ರಹ: ವಿಮಾನ ಅಪಘಾತದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಅಜಿತ್ ಪವಾರ್ ಸಾವಿನ ಕುರಿತು ಸುಪ್ರೀಂಕೋರ್ಟ್ ಮೇಲ್ವಿಚಾರಣೆ ಯಲ್ಲಿ ತನಿಖೆ ನಡೆಸಬೇಕು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಒತ್ತಾಯಿಸಿದ್ದಾರೆ. ಅಸ್ತಿತ್ವದಲ್ಲಿರುವ ಕಾರ್ಯವಿಧಾನಗಳ ಮೂಲಕ ಸತ್ಯ ಹೊರಬರುವುದಿಲ್ಲ. ನಾವು ಸುಪ್ರೀಂ ಕೋರ್ಟ್ ಮಾತ್ರ ಸಂಪೂರ್ಣ ನಂಬುತ್ತೇವೆ. ಇತರ ಎಲ್ಲಾ ಸಂಸ್ಥೆಗಳು ಸಂಪೂರ್ಣವಾಗಿ ರಾಜೀ ಮಾಡಿಕೊಳ್ಳುತ್ತವೆ. ಹಾಗಾಗಿ ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ಈ ಒತ್ತಾಯವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಸೇರಿದಂತೆ ಕೆಲವು ವಿಪಕ್ಷಗಳ ನಾಯಕರು ಬೆಂಬಲಿಸಿದ್ದಾರೆ.

ಅಜಿತ್ ಪವಾರ್ ನಿಧನಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಕಂಬನಿ ಮಿಡಿದಿದ್ದಾರೆ.

ಅಜಿತ್ ಪವಾರ್ ನಿಧನಕ್ಕೆ ಪ್ರಧಾನಿ ಮೋದಿ ಕಂಬನಿ



ಹೊಸದಿಲ್ಲಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿ ಅಜಿತ್ ಪವಾರ್ ನಿಧನಕ್ಕೆ ಕಂಬನಿ ಮಿಡಿದಿದ್ದು, ಅವರ ಸಾವು ತೀವ್ರ ದು:ಖವನ್ನುಂಟು ಮಾಡಿದೆ ಎಂದು ಹೇಳಿದ್ದಾರೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಅಜಿತ್ ಪವಾರ್ ಅವರನ್ನು ಜನನಾಯಕ ಎಂದು ಕರೆದಿದ್ದಾರೆ. ಅಜಿತ್ ಪವಾರ್ ಅವರು ಬೇರು ಮಟ್ಟದ ಸಂಪರ್ಕ ಹೊಂದಿದ್ದರು. ಮಹಾರಾಷ್ಟ್ರದ ಜನರಿಗೆ ಸೇವೆ ಸಲ್ಲಿಸುವಲ್ಲಿ ಮುಂಚೂಣಿಯಲ್ಲಿದ್ದ ಕಠಿಣ ಪರಿಶ್ರಮಿ ವ್ಯಕ್ತಿತ್ವ ಎಂದು ಅವರು ವ್ಯಾಪಕವಾಗಿ ಗೌರವಿಸಲ್ಪಟ್ಟಿದ್ದರು. ಆಡಳಿತಾತ್ಮಕ ವಿಷಯಗಳ ಬಗ್ಗೆ ಅವರ ತಿಳುವಳಿಕೆ ಮತ್ತು ಬಡವರು ಮತ್ತು ದೀನದಲಿತರ ಸಬಲೀಕರಣದ ಬಗ್ಗೆ ಅವರ ಕಾಳಜಿ ಅನುಕರಣೀಯವಾಗಿತ್ತು. ಅವರ ಅಕಾಲಿಕ ನಿಧನವು ತುಂಬಾ ಆಘಾತಕಾರಿ ಮತ್ತು ದುಃಖಕರವಾಗಿದೆ. ಅವರ ಕುಟುಂಬ ಮತ್ತು ಅಸಂಖ್ಯಾತ ಅಭಿಮಾನಿಗಳಿಗೆ ಸಂತಾಪ ಸೂಚಿಸುತ್ತೇನೆ. ಓಂ ಶಾಂತಿ" ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ಸಿದ್ದರಾಮಯ್ಯ ಕುಟುಂಬ ನಿರಾಳ

ವಿಶೇಷ ನ್ಯಾಯಾಲಯದ ಮೆಟ್ಟಿಲೇರಿದ್ದರು. ಈ ಪ್ರಕರಣದ ವಾದ–ಪ್ರತಿವಾದ ಆಲಿಸಿದ ಕೋರ್ಟ್ ಅರ್ಜಿಯನ್ನು ವಜಾ ಮಾಡಿ, ಲೋಕಾಯುಕ್ತ ಬಿ ರಿಪೋರ್ಟ್ ಪುರಸ್ಕರಿಸಿದೆ. ಇದರಿಂದ ಸಿಎಂ ಸಿದ್ದರಾಮಯ್ಯ ಹಾಗೂ ಅವರ ಕುಟುಂಬಕ್ಕೆ ಬಿಗ್ ರಿಲೀಫ್ ಸಿಕ್ಕಂತಾಗಿದೆ.

ಮೈಸೂರು ಮಿತ್ರ

ಗುರುವಾರ 29 ಜನವರಿ 2026

ಕುವೆಂಪು 'ಉದಯರವಿ' ನಿವಾಸ ರಾಷ್ಟ್ರೀಯ ಸ್ಮಾರಕವಾಗಬೇಕು; ಚಿಂತನಾ ಸಭೆಯಲ್ಲಿ ನಿರ್ಣಯ

ಮೈಸೂರು,ಜ.28(ಎಂಟಿವೈ)–ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿ ಘೋಷಣೆ ಸನ್ನಿಹಿತವಾಗಿದ್ದು, ಈ ಸಂದರ್ಭದಲ್ಲಿಯೇ ಮೈಸೂರಿನ ಕುವೆಂಪು ಅವರ ಮನೆ 'ಉದಯರವಿ'ಯನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸಬೇಕು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಒತ್ತಾಯಿಸಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕರ್ನಾಟಕ ಕಾವಲು ಪಡೆ ಹಾಗೂ 'ಉದಯ ರವಿ' ಕುವೆಂಪು ಸ್ಮಾರಕ ಹೋರಾಟ ಸಮಿತಿ ಬುಧವಾರ ಆಯೋಜಿಸಿದ್ದ ಕುವೆಂಪು ಅವರ ಮೈಸೂರಿನ ಉದಯರವಿ ನಿವಾಸವನ್ನು ರಾಷ್ಟ್ರೀಯ ಸ್ಮಾರಕವಾಗಿಸುವ ನಿಟ್ಟಿನಲ್ಲಿ ಸಾಹಿತಿಗಳು, ಚಿಂತಕರು ಹಾಗೂ ವಿವಿಧ ಸಂಘಟನೆಗಳ ಮುಖಂಡರ ಚಿಂತನಾ ಸಭೆಯಲ್ಲಿ ಮಾತನಾಡಿದ ಅವರು, ಇದುವರೆಗೂ ಕುವೆಂಪು ಅವರ ಮನೆಯನ್ನು ಸ್ಮಾರಕವಾಗಿಸಲು ಸರ್ಕಾರಕ್ಕೆ ಆಸಕ್ತಿ, ಅಭಿಮಾನ ಹಾಗೂ ಇಚ್ಛಾಸಕ್ತಿ ಇಲ್ಲ. ಇತರೆ ರಾಜ್ಯಗಳಲ್ಲಿ ಅಲ್ಲಿನ ಕವಿ, ಕಲಾವಿದರಿಗೆ ಗೌರವ ಕೊಡುತ್ತಾರೆ. ಈ ನಿಟ್ಟಿನಲ್ಲಿ 'ಉದಯರವಿ' ಮನೆಯನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದರು.

ನಮ್ಮವರಲ್ಲಿ ಅಭಿಮಾನವಿಲ್ಲ: ಕುವೆಂಪು ಅವರ ಮನೆಯನ್ನು ರಾಷ್ಟ್ರೀಯ ಸ್ಮಾರಕವಾಗಿಸಲು ಮಾಡಬೇಕಾದ ಹೋರಾಟ, ರೂಪು–ರೇಷೆ ಚರ್ಚಿಸಲು ಇಂದು ಸಭೆ ಕರೆದಿರುವುದು ಶ್ಲಾಘನೀಯ. ಒಂದೆಡೆ ಸರ್ಕಾರಕ್ಕೆ ಆಸಕ್ತಿ, ಅಭಿಮಾನ ಇಲ್ಲದೇ ಇರುವುದು ಕಂಡು ಬಂದಿದ್ದರೆ, ಜನರಲ್ಲೂ ಈ ಆಸಕ್ತಿ, ಅಭಿಮಾನ ಇಲ್ಲದಂತೆ ಭಾಸವಾಗುತ್ತಿದೆ. ಈ ಸಭೆಗೆ ಸಂಘಟನೆಗಳ ಮುಖಂಡರು, ಸಾಹಿತಿಗಳು, ಚಿಂತಕರು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕಾಗಿತ್ತು. ಆದರೆ, ಆಸಕ್ತಿ ಕೊರತೆ ಇರುವಂತೆ ಕಂಡು ಬರುತ್ತಿದೆ. ಆದರೂ, ರಾಷ್ಟ್ರೀಯ ಸ್ಮಾರಕ ಎಂದು ಘೋಷಣೆ ಮಾಡಲು ಸರ್ಕಾರವನ್ನು ಒತ್ತಾಯಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಿ, ನಿರ್ಣಯ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ 'ಉದಯ ರವಿ' ಕುವೆಂಪು ಸ್ಮಾರಕ ಹೋರಾಟ ಸಮಿತಿಯ ಚಿಂತನಾ ಸಭೆ ನಡೆಯಿತು.

ಎರಡ್ಮೂರು ತಿಂಗಳಲ್ಲಿ ನಿರ್ಧಾರವಾಗಬೇಕು: ಕರ್ನಾಟಕ ಕಾವಲು ಪಡೆ ಹಾಗೂ ಉದಯರವಿ ಕುವೆಂಪು ಸ್ಮಾರಕ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎಂ.ಮೋಹನ್ ಕುಮಾರ್‌ಗೌಡ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರ ನಿವಾಸವನ್ನು ಈಗಾಗಲೇ ರಾಷ್ಟ್ರೀಯ ಸ್ಮಾರಕವಾಗಿ ಘೋಷಣೆ ಮಾಡಬೇಕಾಗಿತ್ತು. ಆದರೆ, ಇದುವರೆಗಿನ ಸರ್ಕಾರಗಳು ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ನಿಟ್ಟಿನಲ್ಲಿ ಕನ್ನಡ ಸಂಘಟನೆಗಳು ಏನು ಮಾಡುತ್ತಿವೆ? ಎಂದು ಸಾರ್ವಜನಿಕರು ಮಾತನಾಡುತ್ತಿದ್ದಾರೆ. ಅದಕ್ಕಾಗಿ ಕನ್ನಡಪರ ಸಂಘಟನೆಗಳು, ಸಾಹಿತಿಗಳು, ಚಿಂತಕರು ಸೇರಿ, ಕುವೆಂಪು ನಿವಾಸ ರಾಷ್ಟ್ರೀಯ ಸ್ಮಾರಕ ಮಾಡಲು ಒತ್ತಾಯಿಸಿ ಸಭೆ ಆಯೋಜಿಸಲಾಗಿದೆ. ಈ ಸಭೆಯಲ್ಲಿ ನಿರ್ಣಯ ಕೈಗೊಂಡು ಸರ್ಕಾರ, ರಾಜ್ಯಪಾಲರು, ಮುಖ್ಯಮಂತ್ರಿಗಳು, ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಿ, 2–3 ತಿಂಗಳಲ್ಲಿ ರಾಷ್ಟ್ರೀಯ ಸ್ಮಾರಕವಾಗಿಸಲು ಕ್ರಮ ಕೈಗೊಳ್ಳಲೇಬೇಕು ಎಂದು ಒತ್ತಾಯಿಸಲಾಗುತ್ತದೆ ಎಂದು ತಿಳಿಸಿದರು.

ಕನ್ನಡದ ಸಾಕ್ಷಿ ಪ್ರಜ್ಞೆ: ಕರ್ನಾಟಕ ನವ ನಿರ್ಮಾಣ ಸೇನೆ ಅಧ್ಯಕ್ಷ ಭೀಮಾ ಶಂಕರ್ ಪಾಟೀಲ ಮಾತನಾಡಿ, ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕುವೆಂಪು ಅವರ ನಿವಾಸವನ್ನು ಸ್ಮಾರಕ ಮಾಡದೇ ಇರುವುದು ಖಂಡನೀಯ. ಧಾರವಾಡದಲ್ಲಿ ಬೇಂದ್ರೆ ಅವರ ಮನೆಯನ್ನು ಅಭಿವೃದ್ಧಿ ಮಾಡಲಾಗಿದೆ. ಕುವೆಂಪು ಅವರ ವಿಚಾರದಲ್ಲಿ ಅಸಡ್ಡೆ ತೋರಲಾಗಿದೆ. ರಾಜ್ಯದ ಲೋಕಸಭಾ ಸದಸ್ಯರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿಲ್ಲ. ಕುವೆಂಪು ಕನ್ನಡ ಸಾಕ್ಷಿ ಪ್ರಜ್ಞೆ, ಕನ್ನಡದ ತೇರನ್ನು ಎಳೆದವರು. ಭಾರತ ರತ್ನ ಪ್ರಶಸ್ತಿ ಕೊಡಿ ಎಂದು ಭಿಕ್ಷೆ ಬೇಡುವ ಪರಿಸ್ಥಿತಿಯಲ್ಲಿದ್ದೇವೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರತಿಯೊಂದು ಗೋಡೆಯು ಕುವೆಂಪು ಅವರ ಹೆಸರನ್ನು ಹೇಳುತ್ತದೆ. ಕುವೆಂಪು ಜಾತಿಗೆ ಸೀಮಿತ ಮಾಡಬಾರದು. ಅವರು ವಿಶ್ವಮಾನವ, ಮೈಸೂರು ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತ ಮೈಸೂರು ನಿರ್ಲಕ್ಷ್ಯ ಮಾಡಬಾರದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಯವರೇ ಆಗಿದ್ದು, 'ಉದಯರವಿ' ಮನೆಯನ್ನು ಸ್ಮಾರಕವಾಗಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಸ್ಮಾರಕ ಮಾಡಿ ಎಂದು ಹೋರಾಟ ಮಾಡಬೇಕಿರುವುದು ವಿಪರ್ಯಾಸ. ಸರ್ಕಾರ ಮಾಡದಿದ್ದರೆ ಇಚ್ಛಾಸಕ್ತಿ ಇರುವವರೆಲ್ಲಾ ಸೇರಿ ಸ್ಮಾರಕ ಮಾಡೋಣ. ಕುವೆಂಪು ಮನೆ ಕನ್ನಡಿಗರಿಗೆ ದೇವರ ಮನೆ ಇದ್ದಂತೆ. ಇಂತಹ ಜ್ಞಾನ ಮಂದಿರ ರಾಷ್ಟ್ರೀಯ ಸ್ಮಾರಕ ಆಗಬೇಕು ಎಂದರು. ಸಭೆಯಲ್ಲಿ ಕರ್ನಾಟಕ ಯುವ ಸೇನೆ ಅಧ್ಯಕ್ಷ ರಾಮ್‌ಪ್ರಸಾದ್, ಎಎಪಿ ಜಿಲ್ಲಾಧ್ಯಕ್ಷ ರಂಗಯ್ಯ, ಮುಖಂಡರಾದ ಡ್ರೈರಿ ವೆಂಕಟೇಶ್, ಬೆಳ್ಳಾಳೆ ಬೆಟ್ಟೇಗೌಡ, ಅದಮ್ಯ ಚಂದ್ರು, ವಿದ್ಯಾಸಾಗರ್, ಅರವಿಂದ ಶರ್ಮ ಇನ್ನಿತರರು ಪಾಲ್ಗೊಂಡಿದ್ದರು.

> "ಕುಪ್ಪಳ್ಳಿಯಲ್ಲಿ ಈಗಾಗಲೇ ಅವರ ನಿವಾಸ ಸ್ಮಾರಕ ಆಗಿದ್ದು, ಅದೇ ಮಾದರಿಯಲ್ಲಿ ಮೈಸೂರಿನ 'ಉದಯರವಿ' ನಿವಾಸವನ್ನು ಅಭಿವೃದ್ಧಿ ಮಾಡಬೇಕು. ಕುವೆಂಪು ಅವರಿಗೆ ಕುಪ್ಪಳ್ಳಿ ಜನ್ಮ ಭೂಮಿಯಾಗಿದ್ದರೆ, ಮೈಸೂರು ಕರ್ಮ ಭೂಮಿ. ಈ ನಿಟ್ಟಿನಲ್ಲಿ ಮೈಸೂರು ಕುವೆಂಪು ಅವರ ನಿವಾಸ ಒಂದು ಸಂದರ್ಶನ ಕೇಂದ್ರ ಆಗಬೇಕು. ಮೈಸೂರು ನಮ್ಮ ಶಕ್ತಿ ಕೇಂದ್ರ ಆಗಬೇಕು. ಇದಕ್ಕೆ ತಕ್ಕಂತೆ ಮೈಸೂರಲ್ಲಿ ವಿವೇಕ ಸ್ಮಾರಕ ನಿರ್ಮಾಣ ಆಗುತ್ತಿದೆ. ಇದೇ ರೀತಿಯಲ್ಲಿ ಕುವೆಂಪು ನಿವಾಸ ಸ್ಮಾರಕ ಆಗಬೇಕು.
> –ಸಿ.ಪಿ.ಕೃಷ್ಣಕುಮಾರ್, ಹಿರಿಯ ಸಾಹಿತಿ

ಸಂಗೊಳ್ಳಿ ರಾಯಣ್ಣನ ದೇಶಪ್ರೇಮ ಯುವಜನರಿಗೆ ಪ್ರೇರಣೆಯಾಗಲಿ

ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡ ಕಿವಿಮಾತು



ಸದ್ವಿದ್ಯಾ ಶಾಲೆ ವೃತ್ತದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಲಿದಾನ ದಿವಸ್ ಅಂಗವಾಗಿ ರಾಯಣ್ಣ ಭಾವಚಿತ್ರಕ್ಕೆ ಶಾಸಕ ಕೆ.ಹರೀಶ್‌ಗೌಡ ಪುಷ್ಪನಮನ ಸಲ್ಲಿಸಿದರು.

ಮೈಸೂರು,ಜ.28–ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ವಾರ್ಡ್ ನಂಬರ್ 23ರ ಸದ್ವಿದ್ಯಾ ಶಾಲೆಯ ವೃತ್ತದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಲಿದಾನ ದಿವಸ್ ಅಂಗವಾಗಿ ರಾಯಣ್ಣ ಭಾವಚಿತ್ರಕ್ಕೆ ಶಾಸಕ ಕೆ.ಹರೀಶ್‌ಗೌಡ ಪುಷ್ಪನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಸಂಗೊಳ್ಳಿ ರಾಯಣ್ಣನ ದೇಶಪ್ರೇಮ, ಆದರ್ಶ, ತತ್ವ ಸಂದೇಶಗಳು ಇಂದಿನ ಯುವ ಜನಾಂಗಕ್ಕೆ ಪ್ರೇರಕ ಶಕ್ತಿಯಾಗಬೇಕು. ಬ್ರಿಟಿಷ್ ಕುಟಿಲ ನೀತಿಯ ವಿರುದ್ಧ ಯುವ ಸೇನೆ ಕಟ್ಟಿ ಹೋರಾಡಿ, ಪ್ರಾಣವನ್ನೇ ಬಲಿಕೊಟ್ಟ ರಾಯಣ್ಣನ ಜನ್ಮದಿನ ಆಚರಿಸುವುದು ಅವಶ್ಯಕ. ತ್ಯಾಗ, ಬಲಿದಾನಕ್ಕೆ ಮತ್ತೊಂದು ಹೆಸರೇ ರಾಯಣ್ಣ ಇಂತಹ ಮಹನೀಯರ ಬಗ್ಗೆ ಯುವ ಜನಾಂಗ ಅರಿತು ದೇಶಪ್ರೇಮ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಗೊಳ್ಳಿ ರಾಯಣ್ಣ ಸಮುದಾಯದ ಎಲ್ಲ ವರ್ಗಗಳ ಜನರನ್ನು ಒಟ್ಟುಗೂಡಿಸಿ, ಯುವಪಡೆಯನ್ನು ಕಟ್ಟಿ ಬ್ರಿಟಿಷರ ವಿರುದ್ಧ ರಣ ಕಹಳೆಯನ್ನೂದಿದ ವೀರಯೋಧ. ಕಿತ್ತೂರು ರಾಣಿ ಚೆನ್ನಮ್ಮನ ಪರಮ ಬಂಟನಾಗಿ, ಪರಕೀಯರ ವಿರುದ್ಧ ಹೋರಾಡಿದವರು. ವಿದ್ಯಾರ್ಥಿಗಳು ದೇಶಪ್ರೇಮ ಮೈಗೂಡಿಸಿಕೊಳ್ಳಬೇಕು ದೇಶದ ಶಕ್ತಿಯಾದ ವಿದ್ಯಾರ್ಥಿಗಳು ದೇಶಸೇವೆ ಮಾಡಲು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಉದ್ಯಮಿ ವಕ್ರಾಂತ್?, ಹಿರಿಯ ಮುಖಂಡರಾದ ಮಹದೇವ್, ಕನಕದಾಸ ಪತ್ತಿನ ಸಹಕಾರ ಸಂಘದ ನಿರ್ದೇಶಕ ರವಿಚಂದ್ರ, ಸಂದೀಪ್, ನವೀನ್, ಮಂಜುನಾಥ್, ಎಸ್.ಎನ್. ರಾಜೇಶ್, ನಂಜುಂಡಸ್ವಾಮಿ, ಹರೀಶ್ ಗೌಡ, ಶ್ರೀನಿವಾಸ್, ಬಟುಕ? ರಾಮ, ಯೋಗೇಶ್ ಯಾದವ, ಮಂಜುಳಾ, ಶಾಂತ, ಮಂಗಳ, ಸುರೇಶ್, ಹೇಮಂತ, ಲೋಕೇಶ್, ಶ್ರೀಕಾಂತ್ ಹಾಜರಿದ್ದರು.

ಅಧಿಕಾರ ಸ್ವೀಕಾರ...



ಶಾಲಾ ಶಿಕ್ಷಣ ಇಲಾಖೆ ಪದವಿಪೂರ್ವ ಬೆಂಗಳೂರಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಸಂಯೋಜಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅಂಕಣಕಾರರು, ಕವಿಗಳು ಆದ ಗುಬ್ಬಿಗೂಡು ಡಾ.ಸಿ.ಜಿ.ರಮೇಶ್ ಅವರು, ಮೈಸೂರಿನ ಕುವೆಂಪು ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡರು. ಪದವಿ ಪೂರ್ವ ಶಿಕ್ಷಣ ಮೈಸೂರು ಜಿಲ್ಲಾ ಉಪ ನಿರ್ದೇಶಕಿ ಶ್ರೀಮತಿ ಎಂ.ಪಿ.ನಾಗಮ್ಮ, ನಿವೃತ್ತ ಉಪನಿರ್ದೇಶಕರಾದ ಕೆ.ಎಂ.ಪುಟ್ಟು, ಡಾ.ಟಿ.ಆರ್.ಸಿದ್ದರಾಜು, ಚಿದಾನಂದ ಕುಮಾರ್ ಎಂ.ಎಲ್., ಮಹಾರಾಣಿ ಕಾಲೇಜಿನ ಪ್ರಾಂಶುಪಾಲ ಸೋಮಣ್ಣ, ವಿಜೇಂದ್ರ ಕುಮಾರ್, ಬಾಲಸುಬ್ರಹ್ಮಣ್ಯ, ಮೈನಾ, ಕ್ಯಾತಮಾರನಹಳ್ಳಿ ಮಹೇಶ ಹಾಜರಿದ್ದರು.

ನಾಳೆ ರಾಜ್ಯಾದ್ಯಂತ 'ಮಾವುತ' ಬಿಡುಗಡೆ

ಮೈಸೂರು,ಜ.28(ಜಿಎ)–ಎಸ್‌ಡಿಆರ್ ಪ್ರೊಡಕ್ಷನ್ ಅಡಿ ತಾವು ನಿರ್ಮಿಸಿ ನಾಯಕ ನಟನಾಗಿ ನಟಿಸಿರುವ 'ಮಾವುತ' ಚಿತ್ರ ಜ.30ರಂದು ರಾಜ್ಯಾದ್ಯಂತ ಬಿಡುಗಡೆಗೊಳ್ಳಲಿದೆ ಎಂದು ನಟ, ನಿರ್ಮಾಪಕ ಲಕ್ಷ್ಮಿಪತಿ ಬಾಲಾಜಿ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರ್ಜುನ ಜಗದ್ವಿಖ್ಯಾತ ಆನೆಯಾಗಿದ್ದು, ಅದರ ನೆನಪಿನಲ್ಲಿ ಆನೆಗಳು ಹಾಗೂ ಮಾವುತರೊಂದಿಗಿನ ಸಂಬಂಧ, ಅರಣ್ಯ ವಾಸಿಗಳು ಅರಣ್ಯ ರಕ್ಷಣೆ ಬಗ್ಗೆ ಹೊಂದಿರುವ ಕಾಳಜಿ, ಅರಣ್ಯವನ್ನು ಮುಂದಿನ ಪೀಳಿಗೆಗೂ ಉಳಿಸಬೇಕು ಎಂಬ ಉದ್ದೇಶದ ಕಥೆಯುಳ್ಳ ಸಿನಿಮಾ ಇದಾಗಿದ್ದು, ಚಿತ್ರವನ್ನು ಅಂಬಾರಿ ಆನೆಯಾಗಿದ್ದ ಅರ್ಜುನನಿಗೆ ಅರ್ಪಿಸಲಾಗಿದೆ ಎಂದರು.

ನಿರ್ದೇಶಕ ರವಿಶಂಕರ್‌ನಾಗ್ ಮಾತನಾಡಿ, ಇದೊಂದು ಇಡೀ ಕುಟುಂಬ ಸಮೇತ ವೀಕ್ಷಿಸಬಹುದಾದ ಚಿತ್ರವಾಗಿದ್ದು, ಹಾಡು, ಸಸ್ಪೆನ್ಸ್ ಎಲ್ಲವೂ ಇದೆ. ಹೀಗಾಗಿ ಚಿತ್ರ ಪ್ರಿಯರು ವೀಕ್ಷಿಸಿ ಪ್ರೋತ್ಸಾಹಿಸಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಚಿತ್ರ ತಂಡದ ದಿವ್ಯಶ್ರೀ, ಮಹಾಲಕ್ಷ್ಮಿ, ಪಾರ್ಥಸಾರಥಿ, ಚೆಲುವರಾಜ್ ಉಪಸ್ಥಿತರಿದ್ದರು.

ಗಣರಾಜ್ಯೋತ್ಸವ



ಮೈಸೂರಿನ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ಡೀನ್–ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಎಚ್.ಪಿ.ಶೋಭಾ, ಆರ್‌ಎಂಒ ಡಾ.ನಯಾಜ್ ಪಾಷಾ, ಮುಖ್ಯ ಆಡಳಿತಾಧಿಕಾರಿ ಮಹೇಶ್, ಹಣಕಾಸು ಸಹಾಯಕಿ ನೂತನಶ್ರೀ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಡಾ.ದಿನೇಶ್, ಡಾ.ಸುರೇಶ್, ಡಾ.ಚೇತನ್, ಡಾ.ಬಂಗಾರು, ಭದ್ರತಾ ಮೇಲ್ವಿಚಾರಕರಾದ ಮಹಾದೇವ್, ಮಹಾದೇವಸ್ವಾಮಿ, ನರ್ಸಿಂಗ್ ಸಿಬ್ಬಂದಿ ಮತ್ತು ಇತರರು ಉಪಸ್ಥಿತರಿದ್ದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜನ್ಮದಿನಾಚರಣೆ



ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ 127ನೇ ಜನ್ಮದಿನ ಆಚರಿಸಲಾಯಿತು.

ಮೈಸೂರು, ಜ. 28–ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಸೇವೆ ಸ್ಮರಿಸುವ ಮೂಲಕ ಮೈಸೂರಿನಲ್ಲಿ ಕಾರ್ಯಪ್ಪ ಅವರ 127ನೇ ಜನ್ಮದಿನವನ್ನು ಆಚರಿಸಲಾಯಿತು.

ಚಾಮುಂಡೇಶ್ವರಿ ಯುವ ಬಳಗದ ಕಾರ್ಯಕರ್ತರ ವತಿಯಿಂದ ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿರುವ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ನಂತರ ಸಿಹಿ ವಿತರಿಸುವ ಮೂಲಕ ಜನುಮ ದಿನಾಚರಣೆ ಆಚರಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಅಖಿಲ ಕರ್ನಾಟಕ ಸಿದ್ದರಾಮಯ್ಯ ಬ್ರಿಗೇಡ್ ಅಧ್ಯಕ್ಷ ಹಿನಕಲ್ ಉದಯ್, ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕ ಅಧ್ಯಕ್ಷ ಆರಿಫ್ ಪಾಷಾ, ಡೈರಿ ವೆಂಕಟೇಶ್, ಎಸ್.ಎನ್.ರಾಜೇಶ್, ಜಿ.ರಾಘವೇಂದ್ರ, ದಿನೇಶ್, ಕೋದಂಡ, ಬಲರಾಮ, ಶ್ರೀ ಕನಕ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ರವಿಚಂದ್ರ, ವಿನಯ್‌ಕುಮಾರ್ ಹಾಗೂ ಇನ್ನಿತರರು ಹಾಜರಿದ್ದರು.

ಜ.31ರಿಂದ ಕಿರುರಂಗಮಂದಿರದಲ್ಲಿ ಸಂಚಲನ ದಶಮಾನೋತ್ಸವ

ಪ್ರತಿದಿನ ಸಭಾ ಕಾರ್ಯಕ್ರಮ, ನಾಟಕಗಳು, ಭರತನಾಟ್ಯ, ರಂಗಗೀತೆ, ಕೊಳಲು ವಾದನ

ಮೈಸೂರು,ಜ.28(ಜಿಎ)–ಸಂಚಲನ ಮೈಸೂರು ರಂಗತಂಡದ ದಶಮಾನೋತ್ಸವದ ಅಂಗವಾಗಿ ಜ.31ರಿಂದ ಫೆ.6ರವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಮೈಸೂರಿನ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ 'ಸಂಚಲನ ದಶಮಾನೋತ್ಸವ' ಏರ್ಪಡಿಸಲಾಗಿದೆ.

ಸಂಚಲನ ಮೈಸೂರು ತಂಡದ ಅಧ್ಯಕ್ಷ ದೀಪಕ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಜ.31ರಂದು ಸಂಜೆ 6 ಗಂಟೆಗೆ ಸಚ್ಚಿದಾನಂದ ಆಚಾರ್ಯ ಅವರಿಂದ ಕೊಳಲು ವಾದನವಿದೆ. ನಂತರ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಂಚಲನ ದಶಮಾನೋತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ರಂಗಾಯಣ ಮಾಜಿ ನಿರ್ದೇಶಕ ಡಾ.ಹೆಚ್.ಜನಾರ್ದನ್ (ಜನ್ನಿ), ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಆಗಮಿಸಲಿದ್ದಾರೆ. ವೇದಿಕೆ ಕಾರ್ಯಕ್ರಮದ ನಂತರ ಶಕ್ತಿಧಾಮ ಶಾಲೆಯ ಮಕ್ಕಳು ವೀರಗಾಸೆ, ಮಾರಿಕುಣಿತ, ಕೋಲಾಟ, ಕಂಸಾಳೆ ಪ್ರಸ್ತುತಪಡಿಸಲಿದ್ದಾರೆ. ತದನಂತರ 'ಕೆಂಪು ಹೂ' ನಾಟಕ ಪ್ರದರ್ಶನವಿರಲಿದೆ ಎಂದರು.

ಫೆ.1ರಂದು ಬೆಳಗ್ಗೆ 11 ಗಂಟೆಗೆ ಸಭಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಅರಳಿ ಸೇವಾ ಟ್ರಸ್ಟ್ ಸಂಸ್ಥಾಪಕ ಎ.ಎಸ್.ವೆಂಕಟೇಶ್, ಉಪ ಆಯುಕ್ತ ಮಂಜುನಾಥ್ ಸೋಸಲೆ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಪ್ರಗತಿಪರ ಚಿಂತಕ ಡಾ.ಎಸ್.ಟಿ.ಚಂದ್ರೇಗೌಡ ಭಾಗವಹಿಸಲಿದ್ದಾರೆ. ನಂತರ ಕೆ.ಕೆ.ದೇವಾನಂದ ವರಪ್ರಸಾದ್ ಮತ್ತು ತಂಡದವರು ಹೋರಾಟದ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ನಂತರ ಮೈಸೂರಿನ ನೇಪಥ್ಯ ರಂಗ ತಂಡದಿಂದ 'ಒಡಲಾಳ' ನಾಟಕ ಪ್ರದರ್ಶನವಿದೆ. ಮಧ್ಯಾಹ್ನ 3 ಗಂಟೆ ಎಸ್‌ಟಿಜಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು 'ಚಿತ್ರಪಟ' ನಾಟಕ ಪ್ರಸ್ತುತಪಡಿಸಲಿದ್ದಾರೆ. ಇದಕ್ಕೂ ಮುನ್ನ ವೇದಿಕೆ ಕಾರ್ಯಕ್ರಮದಲ್ಲಿ ಜಾನಪದ ಕಲಾವಿದರ ಒಕ್ಕೂಟದ ಅಧ್ಯಕ್ಷ ಆರ್.ಕೆ.ಸ್ವಾಮಿ, ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ತಲಕಾಡು, ಉಲ್ಲಾಸ್ ದೇವನೂರು ಭಾಗವಹಿಸಲಿದ್ದಾರೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ 'ಸಂಚಲನ ದಶಮಾನೋತ್ಸವ'ದ ಪೋಸ್ಟರ್ ಬಿಡುಗಡೆ.

ಸಂಜೆ 6 ಗಂಟೆಗೆ 'ವಿಷಜ್ವಾಲೆ' ನಾಟಕ ಪ್ರದರ್ಶನವಿದ್ದು, ಸಭಾ ಕಾರ್ಯಕ್ರಮಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ, ನಟ ಸುರೇಶ್,ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಕಾರ್ಯದರ್ಶಿ ಎಂ.ಪಿ. ಹರಿದತ್ತ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಫೆ.2ರಂದು ಸಂಜೆ 6 ಗಂಟೆಗೆ ನಮ್ಮರಾಗ ತಂಡವು ಜಾನಪದ ಗೀತೆಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ನಂತರ ವೃತ್ತಿ ರಂಗ ತಂಡದಿಂದ 'ದು–ರೋಧನ' ನಾಟಕ ಪ್ರದರ್ಶನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು, ಸಮಾಜ ಸೇವಕ ಸುರೇಶ್, ಕನ್ನಡ ಕಲಾಕೂಟದ ಅಧ್ಯಕ್ಷ ಚಂದ್ರಶೇಖರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸದಸ್ಯ ಜಿ.ಬಿ.ಎಸ್.ಸಿದ್ದೇಗೌಡ ಆಗಮಿಸಲಿದ್ದಾರೆ ಎಂದರು.

ಫೆ.3ರಂದು ಬೆಳಗ್ಗೆ 11 ಗಂಟೆಗೆ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು 'ಊರು ಸುಟ್ಟರೂ ಹನುಮಪ್ಪ ಹೊರಗ' ನಾಟಕ ಪ್ರದರ್ಶನ ನಡೆಸಿಕೊಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ, ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಮಾಜಿ ಅಧ್ಯಕ್ಷ ಸುರೇಶ್ ಬಾಬು, ಸಮಾಜ ಸೇವಕ ಅಹಿಂದ ಜವರಪ್ಪ ಭಾಗವಹಿಸಲಿದ್ದಾರೆ. ಸಂಜೆ 6 ಗಂಟೆಗೆ ಸಂಚಲನ ಮೈಸೂರು ತಂಡದಿಂದ 'ಹರಕೆಯ ಕುರಿ' ನಾಟಕವನ್ನು ಪ್ರಸ್ತುತ ಪಡಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಪ್ರಾಧ್ಯಾಪಕ ಪ್ರಸನ್ನ ಕೆರಗೋಡು, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಡಾ.ಎಂ.ಜಾಹೀದ, ರಂಗಕರ್ಮಿ ಡಾ.ಸುಜಾತ ಅಕ್ಕಿ ಭಾಗವಹಿಸಲಿದ್ದಾರೆ.

ಫೆ.4ರಂದು ಸಂಜೆ 6 ಗಂಟೆಗೆ ಮುಖ್ಯ ಅತಿಥಿಗಳಾಗಿ ರಂಗ ನಿರ್ದೇಶಕ ಹೆಚ್.ಎಸ್.ಉಮೇಶ್, ರಾಜರಾಜೇಶ್ವರಿ ವಸ್ತ್ರಾಲಂಕಾರದ ಮಾಲೀಕ ಎಂ.ರಾಮಚಂದ್ರ, ವಿಮರ್ಶಕ ಪ್ರೊ.ಧನಂಜಯ, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಸುದರ್ಶನ್ ಆಗಮಿಸಲಿದ್ದಾರೆ. ಈ ವೇಳೆ ಸಮಾಗಮ ಸಾಂಸ್ಕೃತಿಕ ವೇದಿಕೆ ವತಿಯಿಂದ ರಕ್ಷಾ ಎಂ.ಹಿರೇಮಠ ಭರತನಾಟ್ಯ ಪ್ರಸ್ತುತ ಪಡಿಸಲಿದ್ದಾರೆ. ನಂತರ ಅನೇಕ ತಂಡದಿಂದ 'ಲೈಟ್ಸ್ ಆಫ್' ನಾಟಕ ಪ್ರದರ್ಶನವಿದೆ. ಫೆ.5ರಂದು ಸಂಜೆ 6 ಗಂಟೆಗೆ 'ಇದ್ದಾಗ ನಿಮ್ದು ಕದ್ದಾಗ ನಮ್ದು' ನಾಟಕವನ್ನು ರಂಗರಥ ತಂಡ ಪ್ರಸ್ತುತ ಪಡಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪ್ರಗತಿಪರ ಚಿಂತಕ ಕಾಳೇಗೌಡ ನಾಗವಾರ, ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆಯ ಗಣೇಶ್, ರಂಗ ನಿರ್ದೇಶಕ ಪ್ರಸಾದ್ ಕುಂದೂರು ಭಾಗವಹಿಸಲಿದ್ದಾರೆ ಎಂದರು.

ಫೆ.6ರಂದು ಸಂಜೆ 6 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ರಂಗಕರ್ಮಿ ಪ್ರಸನ್ನ, ಶಾಸಕ ದರ್ಶನ್ ಧ್ರುವ ನಾರಾಯಣ್, ಎಡಿಸಿ ಡಾ.ಪಿ.ಶಿವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಆಗಮಿಸಲಿದ್ದಾರೆ. ನಂತರ ಸಂಚಲನ ಮೈಸೂರು ತಂಡದಿಂದ 'ಎರಡೆರಡ್ಲಾ ಐದು' ನಾಟಕ ಪ್ರದರ್ಶನವಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಬಿ.ಎಂ. ರಾಮಚಂದ್ರ, ಜಿ.ಬಿ.ಸಿದ್ದೇಗೌಡ, ಸಾಗರ್ ಉಪಸ್ಥಿತರಿದ್ದರು.

ಟೆಕ್ನಾಲಜಿ ಕ್ಲಿನಿಕ್ ಕುರಿತು ತರಬೇತಿ

ಮೈಸೂರು,ಜ.28– ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಜನವರಿ 29 ಹಾಗೂ 30 ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ Technology Clinic ವಿಷಯದ ಕುರಿತು ತರಬೇತಿ ಏರ್ಪಡಿಸಲಾಗಿದೆ. ಸಣ್ಣ, ಅತೀಸಣ್ಣ ಹಾಗೂ ಮಧ್ಯಮ ವರ್ಗದ (ಎಂ.ಎಸ್.ಎಂ.ಇ) ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುವ ಕೈಗಾರಿಕಾ ಘಟಕಗಳಿಗೆ ಬಹಳ ಉಪಯುಕ್ತವಾಗಿದೆ. ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುವ ಕೈಗಾರಿಕಾ ಘಟಕಗಳ ಉದ್ದಿಮೆದಾರರು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ 0821–2449810 ಸಂಪರ್ಕಿಸಬಹುದು.

ನಾಳೆ ಮಾಂಸ ಮಾರಾಟ ನಿಷೇಧ

ಮೈಸೂರು: ಜ.30ರಂದು ಸರ್ವೋದಯ ದಿನ ಪ್ರಯುಕ್ತ ಮೈಸೂರು ನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ನಗರದಲ್ಲಿ ಮುಚ್ಚಲಾಗುತ್ತದೆ. ಈ ದಿನದಂದು (ಕುರಿ/ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಿರುತ್ತದೆ. ಆದುದರಿಂದ ಮೈಸೂರು ಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶಿಸಲಾಗಿದೆ.

ದೇಶ - ವಿದೇಶ

ಸೋನ್‌ಮಾರ್ಗ್‌ನಲ್ಲಿ ಪ್ರವಾಸಿಗರಿದ್ದ ರೆಸಾರ್ಟ್ ಮೇಲೆ ಭಾರಿ ಹಿಮಪಾತ



ಸೋನ್‌ಮಾರ್ಗ್: ಸೋನ್‌ಮಾರ್ಗ್ ಸೇರಿದಂತೆ ಕಣಿವೆಯ ಇತರ ಭಾಗಗಳಲ್ಲಿ ಕಳೆದ 24 ಗಂಟೆಯಲ್ಲಿ ಭಾರಿ ಪ್ರಮಾಣದ ಹಿಮ ಬೀಳುತ್ತಿದೆ. ಮೇಲಿನಿಂದ ಒಮ್ಮೆಲೆ ಜಾರಿ ಬಂದ ಹಿಮ ಪ್ರವಾಸಿಗರಿದ್ದ ರೆಸಾರ್ಟ್ ಅನ್ನು ಸಂಪೂರ್ಣವಾಗಿ ಮುಚ್ಚಿಹಾಕಿದೆ. ಈ ದೃಶ್ಯಗಳು ಸಿಸಿಟಿವಿ ಕ್ಯಾಮರದಲ್ಲಿ ಸೆರೆಯಾಗಿವೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಹಿಮಪಾತವಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಸದ್ಯ ಉತ್ತರಾಖಂಡದ ಕೆಲವು ಜಿಲ್ಲೆಗಳಲ್ಲಿ ಚಳಿಯ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದೆ. ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಾದ ಬದರಿನಾಥ್ ಮತ್ತು ಕೇದಾರನಾಥ ಸೇರಿದಂತೆ ಇತರೆ ಕಡೆಗಳಲ್ಲಿಯೂ ಹಿಮಪಾತವಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಮುನ್ನೆಚ್ಚರಿಕೆ ನೀಡಿದ್ದಾರೆ. ಎತ್ತರದ ಪ್ರದೇಶಗಳಲ್ಲಿ ಹಿಮಪಾತದ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಉತ್ತರಾಖಂಡ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಹಲವು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಭಾರತ–ಯುರೋಪಿಯನ್ ಒಕ್ಕೂಟದ ಒಪ್ಪಂದಕ್ಕೆ ಖಲಿಸ್ತಾನಿಗಳ ವಿರೋಧ



ನ್ಯೂಯಾರ್ಕ್: ಭಾರತ–ಯುರೋಪಿಯನ್ ಯೂನಿಯನ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿರುವ ಖಲಿಸ್ತಾನ್ ಗುಂಪುಗಳು ಬೀಟಿಂಗ್ ರಿಟ್ರೀಟ್' ಮುಂತಾದ ಗಣರಾಜ್ಯೋತ್ಸವಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಗುರಿಯಾಗಿಸುವುದಾಗಿ ಬೆದರಿಕೆ ಒಡ್ಡಿದೆ. ಇದು ಭಾರತದ ಮೇಲೆ ಅಂತಾರಾಷ್ಟ್ರೀಯ ಒತ್ತಡ ಹೇರುವ ಪ್ರಯತ್ನವಾಗಿದೆ ಎಂದು ಗುಪ್ತಚರ ಮೂಲಗಳನ್ನು ಉಲ್ಲೇಖಿಸಿದ ವರದಿ ಹೇಳಿದೆ. ಭಾರತದಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮಗಳ ಸಮಾರೋಪದ ಅಂಗವಾಗಿ ಜ.29ರಂದು ಬೀಟಿಂಗ್ ರಿಟ್ರೀಟ್ ಸಮಾರಂಭ ನಡೆಯುತ್ತದೆ. ಇದು ಮುಕ್ತ ವ್ಯಾಪಾರ ಒಪ್ಪಂದ ಅಲ್ಲ. ಎಫ್‌ಟಿಟಿಎ (ಮುಕ್ತ ಬಹು ರಾಷ್ಟ್ರೀಯ ಭಯೋತ್ಪಾದನೆ ಒಪ್ಪಂದ) ಆಗಿದೆ. ಪ್ರಸ್ತಾವಿತ ಎಫ್‌ಟಿಎ ಮೋದಿ ಆಡಳಿತವನ್ನು ಯುರೋಪಿಯನ್ ಯೂನಿಯನ್ ರಾಷ್ಟ್ರಗಳ ಒಳಗೆ ಹತ್ಯೆಗಳನ್ನು ನಡೆಸಲು ಶಕ್ತಗೊಳಿಸುತ್ತದೆ ಮತ್ತು ಶಸ್ತ್ರಾಸ್ತ್ರಗಳನ್ನು ನೀಡುತ್ತದೆ. ಇಯು ಇಂದು ಮುಕ್ತ ವ್ಯಾಪಾರ ಒಪ್ಪಂದವೆಂದು ಸಂಭ್ರಮಿಸುತ್ತಿರುವುದು ಮುಕ್ತ ಬಹುರಾಷ್ಟ್ರೀಯ ಭಯೋತ್ಪಾದನೆಗೆ ಕಾರಣವಾಗಲಿದೆ' ಎಂದು ಸಿಖ್ಸ್ ಫಾರ್ ಜಸ್ಟಿಸ್ ನಾಯಕ ಗುರುಪತ್ವಂತ್ ಸಿಂಗ್ ಪನ್ನೂನ್ ಎಚ್ಚರಿಕೆ ನೀಡಿರುವುದಾಗಿ ವರದಿಯಾಗಿದೆ.

ಅಮೆಜಾನ್‌ನಿಂದ 16,000 ಕಾರ್ಪೊರೇಟ್ ಸಿಬ್ಬಂದಿ ವಜಾ!




ಸಿಯಾಟಲ್: ಜಾಗತಿಕ ಇ–ಕಾಮರ್ಸ್ ದೈತ್ಯ ಅಮೆಜಾನ್ ತನ್ನ ವೆಚ್ಚ ಕಡಿತಗೊಳಿಸಲು ಕ್ರಮಗಳನ್ನು ಮುಂದುವರಿಸಿದ್ದು, 2ನೇ ಹಂತದಲ್ಲಿ ಸುಮಾರು 16,000 ಕಾರ್ಪೊರೇಟ್ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸುವುದಾಗಿ ಘೋಷಿಸಿದೆ. ಒಂದು ವೇಳೆ ಇದು ನಡೆದರೆ ಕಳೆದ 3 ತಿಂಗಳ ಅವಧಿಯಲ್ಲಿ ಕಂಪನಿ ಕೈಗೊಂಡ 2ನೇ ಅತಿದೊಡ್ಡ ಉದ್ಯೋಗ ಕಡಿತ ಇದಾಗಿದೆ. ಈ ಕುರಿತು ಕಂಪನಿಯ ಹಿರಿಯ ಉಪಾಧ್ಯಕ್ಷೆ ಬೆತ್ ಗ್ಯಾಲೆಟ್ಟಿ ಮಾಹಿತಿ ನೀಡಿದ್ದು, ಸಂಸ್ಥೆಯಲ್ಲಿನ ಹಂತಗಳನ್ನು ಕಡಿಮೆ ಮಾಡಲು, ಮಾಲೀಕತ್ವದ ಜವಾಬ್ದಾರಿಯನ್ನು ಹೆಚ್ಚಿಸಲು ಮತ್ತು ಅನಗತ್ಯ ವಿಳಂಬಗಳನ್ನು ತಪ್ಪಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ. ವಿಶೇಷವೆಂದರೆ, ಕಾರ್ಪೊರೇಟ್ ಕೆಲಸಗಳಿಗಾಗಿ ಎಐ ತಂತ್ರಜ್ಞಾನ ಬಳಸಿಕೊಳ್ಳಲು ಅಮೆಜಾನ್ ಮುಂದಾಗಿದ್ದು, ಇದು ಉದ್ಯೋಗ ಕಡಿತಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ. ಕಳೆದ ಅಕ್ಟೋಬರ್‌ನಲ್ಲಿ 14,000 ಉದ್ಯೋಗಿಗಳನ್ನು ವಜಾಗೊಳಿಸಿತ್ತು. ಆ ಪ್ರಕ್ರಿಯೆಯ ಮುಂದುವರಿದ ಭಾಗವಾಗಿ ಈಗ 16,000 ನೌಕರರನ್ನು ಕೈಬಿಡಲಾಗುತ್ತಿದೆ. 2023ರಲ್ಲಿ 27,000 ನೌಕರರನ್ನು ವಜಾಗೊಳಿಸಿತ್ತು.

ಜಪಾನ್ ಸಮುದ್ರದ ಕಡೆಗೆ ಬ್ಯಾಲಿಸ್ಟಿಕ್ ಕ್ಷಿಪಣಿ ಹಾರಿಸಿದ ಉತ್ತರ ಕೊರಿಯಾ!



ಸಿಯೋಲ್: ಉತ್ತರ ಕೊರಿಯಾ ಜಪಾನ್ ಸಮುದ್ರದ ಕಡೆಗೆ ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳಂತೆ ಕಾಣುವ ಕ್ಷಿಪಣಿಗಳನ್ನು ಹಾರಿಸಿದೆ ಎಂದು ಟೋಕಿಯೊ ತಿಳಿಸಿದೆ. ದಕ್ಷಿಣ ಕೊರಿಯಾದ ಜಂಟಿ ಮುಖ್ಯಸ್ಥರು ಸಹ, ಪೂರ್ವ ಸಮುದ್ರ ಎಂದು ಕರೆಯುವ ಸಿಯೋಲ್ ಕಡೆಗೆ ಪ್ರೊಜೆಕ್ಟೈಲ್ ಹಾರಿಸುವುದನ್ನು ಪತ್ತೆಹಚ್ಚಿದೆ. ರಕ್ಷಣಾ ಸಚಿವಾಲಯ ಉಲ್ಲೇಖಿಸಿ ಜಪಾನ್‌ನ ಕರಾವಳಿ ಕಾವಲು ಪಡೆ, ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಪತ್ತೆಹಚ್ಚಿದೆ ಮತ್ತು ಎರಡೂ ಈಗಾಗಲೇ ಕೆಳಗೆ ಬಿದ್ದಿವೆ. ಜಪಾನಿನ ಸುದ್ದಿ ಸಂಸ್ಥೆ ಜಿಜಿ ಪ್ರೆಸ್ ಎರಡು ಕ್ಷಿಪಣಿಗಳು ದೇಶದ ವಿಶೇಷ ಆರ್ಥಿಕ ವಲಯದ ಹೊರಗೆ ಬಿದ್ದಿವೆ ಎಂದು ವರದಿ ಮಾಡಿದೆ. ಪೆಂಟಗನ್‌ನ ಮೂರನೇ ಅಧಿಕಾರಿ ಎಲ್ಬ್ರಿಡ್ಜ್ ಕೋಲ್ಬಿ ದಕ್ಷಿಣ ಕೊರಿಯಾವನ್ನು ಮಾದರಿ ಮಿತ್ರ ಎಂದು ಹೊಗಳಿದ ಉನ್ನತ ಮಟ್ಟದ ಸಿಯೋಲ್ ಭೇಟಿಯ ಒಂದು ದಿನದ ನಂತರ ಈ ಘಟನೆ ನಡೆದಿದೆ. ಈ ಅಭಿಯಾನವು ನಿಖರ ದಾಳಿ ಸಾಮರ್ಥ್ಯಗಳನ್ನು ಸುಧಾರಿಸುವುದು, ಅಮೆರಿಕ ಹಾಗೂ ದಕ್ಷಿಣ ಕೊರಿಯಾವನ್ನು ಸವಾಲು ಮಾಡುವುದು ಮತ್ತು ರಫ್ತಿಗಾಗಿ ಶಸ್ತ್ರಾಸ್ತ್ರಗಳನ್ನು ರಫ್ತು ಮಾಡುವ ಮೊದಲು ಅವುಗಳನ್ನು ಪರೀಕ್ಷಿಸುವ ಗುರಿ ಹೊಂದಿದೆ ಎಂದು ವಿಶ್ಲೇಷಕರು ಹೇಳುತ್ತಾರೆ.

ನಾದಿನಿಗೆ ಇರಿದು ಬಳಿಕ 16ನೇ ಮಹಡಿಯಿಂದ ಹಾರಿದ ಟೆಕ್ಕಿ



ಗ್ರೇಟರ್ ನೋಯ್ಡಾ: ಟೆಕ್ಕಿಯೊಬ್ಬ ನಾದಿನಿಗೆ ಚಾಕುವಿನಿಂದ ಇರಿದು, ಬಳಿಕ 16ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗ್ರೇಟರ್ ನೋಯ್ಡಾದಲ್ಲಿ ನಡೆದಿದೆ. ಬಿಸ್ರಾಖ್ ಪ್ರದೇಶದ ಪ್ಯಾರಾಮೌಂಟ್ ಎಮೋಷನ್ಸ್ ಸೊಸೈಟಿಯಲ್ಲಿ ಈ ಘಟನೆ ನಡೆದಿದೆ. ಮೃತರನ್ನು ಬಿಹಾರದ ಪಾಟ್ನಾ ಮೂಲದ ಶತ್ರುಘ್ನ ಸಿನ್ಹಾ (38) ಎಂದು ಗುರುತಿಸಲಾಗಿದೆ. ಪೊಲೀಸರ ಪ್ರಕಾರ, ಸಿನ್ಹಾ ತನ್ನ ಪತ್ನಿಯೊಂದಿಗೆ ವಾಗ್ವಾದ ನಡೆಸಿದ್ದ. ನಂತರ ಆಕೆ ಮೇಲೆ ಹಲ್ಲೆಗೆ ಯತ್ನಿಸಿದ್ದ. ಆತನ ನಾದಿನಿ ಮಧ್ಯಪ್ರವೇಶಿಸಿದಾಗ ಚಾಕುವಿನಿಂದ ಆಕೆಯ ಮೇಲೆ ಹಲ್ಲೆ ನಡೆಸಿ, ಕೈಗೆ ಗಾಯ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ. ದಾಳಿ ನಡೆದ ಕೂಡಲೇ ಪತ್ನಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂಧನ ಮತ್ತು ಸಾರ್ವಜನಿಕ ಅವಮಾನಕ್ಕೆ ಹೆದರಿ, ಸಿನ್ಹಾ ಫ್ಲಾಟ್‌ಗೆ ಬೀಗ ಹಾಕಿ ಬಾಲ್ಕನಿಯಲ್ಲಿ ಹೆಜ್ಜೆ ಹಾಕಿದ್ದಾರೆ ಮತ್ತು ಪೊಲೀಸರು ಸ್ಥಳಕ್ಕೆ ತಲುಪುವ ಮೊದಲೇ 16ನೇ ಮಹಡಿಯಿಂದ ಹಾರಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಗಂಭೀರ ಸ್ಥಿತಿಯಲ್ಲಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡುತ್ತಿದ್ದಾಗ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ನಾದಿನಿ ಅಪಾಯದಿಂದ ಪಾರಾಗಿದ್ದಾರೆ ಎನ್ನಲಾಗಿದೆ.



ಮಡಿಕೇರಿಯಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಜನ್ಮ ದಿನಾಚರಣೆ

ಮಡಿಕೇರಿ,ಜ.28–ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಜನ್ಮ ದಿನಾಚರಣೆ ನಿಮಿತ್ತ ಬುಧವಾರ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪ್ರತಿಮೆಗೆ ಗಣ್ಯರು ಪುಷ್ಪಾರ್ಚನೆ ನೆರವೇರಿಸಿ, ಗೌರವ ಸಲ್ಲಿಸಿದರು.

ಮಾಜಿ ಸಚಿವ ಎಂ.ಸಿ.ನಾಣಯ್ಯ ಮಾತನಾಡಿ, ಕಾರ್ಯಪ್ಪ ಅವರ ಶಿಸ್ತು, ಸಮಯ ಪ್ರಜ್ಞೆ, ಪ್ರತಿಯೊಬ್ಬರಿಗೂ ಮಾದರಿ. ಅವರ ಜೀವನ ಚರಿತ್ರೆ ಪ್ರತಿಯೊಬ್ಬರಿಗೂ ಆದರ್ಶವಾಗಿದ್ದು, ಸೇನಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಅನನ್ಯ. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ, ಜನರಲ್ ತಿಮ್ಮಯ್ಯ, ಮಂಗೇರಿರ ಮುತ್ತಣ್ಣ, ಸ್ಕ್ವಾಡರ್ನ್ ಲೀಡರ್ ಅಜ್ಜಮಾಡ ದೇವಯ್ಯ ಪ್ರತಿಮೆ ಸೇರಿದಂತೆ ನಗರದಲ್ಲಿರುವ ಎಲ್ಲಾ ಪ್ರತಿಮೆಗಳನ್ನು ಜಿಲ್ಲಾಡಳಿತ ಸಂರಕ್ಷಿಸಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿ ನಿಕಂಡ ಮಹೇಶ್ ನಾಚಯ್ಯ, ಸಾಹಿತಿ ಮುಲ್ಲೇಂಗಡ ರೇವತಿ ಪೂವಯ್ಯ, ಮಾತನಾಡಿದರು. ಶಾಸಕರಾದ ಪೊನ್ನಣ್ಣ, ಡಾ.ಮಂತರ್ ಗೌಡ, ಸುಜಾ ಕುಶಾಲಪ್ಪ ಕಳಿಸಿದ್ದ ಆಡಿಯೋ ಸಂದೇಶದಲ್ಲಿ ಕಾರ್ಯಪ್ಪನವರ ಅಮೋಘ ಸೇವೆಯನ್ನು ಸ್ಮರಿಸಿದ್ದಾರೆ.

ಪಥಸಂಚಲನ: ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗಣ್ಯರು ಪಥಸಂಚಲನಕ್ಕೆ ಚಾಲನೆ ನೀಡಿದರೆ, ಕೊಡಗು ವಿದ್ಯಾಲಯದ ವಿದ್ಯಾರ್ಥಿಗಳು ವಾದ್ಯ ವೃಂದ ನುಡಿಸಿದರು. ವಿವಿಧ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ಶಿಕ್ಷಕರು, ಮಾಜಿ ಸೈನಿಕರು ಇತರರು ಪಾಲ್ಗೊಂಡಿದ್ದರು. ಎಫ್ಎಂಸಿ ಮತ್ತು ಜಿಟಿ ಫೌಂಡೇಷನ್ ನೇತೃತ್ವದಲ್ಲಿ ಕಾರ್ಯಕ್ರಮ ಅಚ್ಚುಕಟ್ಟಾಗಿ ಜರುಗಿತು.

ನಿವೃತ್ತ ಏರ್ ಮಾರ್ಷಲ್ ನಂದ ಕಾರ್ಯಪ್ಪ, ಪುತ್ತರಿರ ಪಪ್ಪು ತಿಮ್ಮಯ್ಯ, ಚೊಟ್ಟೆಯಂಡ ಸಂಜು ಕಾವೇರಪ್ಪ, ಕಂಬೆಯಂಡ ಡೀನಾ ಬೋಜಣ್ಣ, ಪಿ.ಕೆ. ಕುಟ್ಟಪ್ಪ ಬೊಳ್ಳಜೀರ ಅಯ್ಯಪ್ಪ, ತಹಸೀಲ್ದಾರ್ ಶ್ರೀಧರ, ಡಿವೈಎಸ್ಪಿಗಳಾದ ಸೂರಜ್, ಮೇದಪ್ಪ, ಕೊಡವ ಸಮಾಜದ ಅಧ್ಯಕ್ಷ ಎಂ.ಪಿ.ಮುತ್ತಪ್ಪ, ಓಂಕಾರೇಶ್ವರ ದೇವಾಲಯ ಸಮಿತಿ ಅಧ್ಯಕ್ಷ ಚುಮ್ಮಿ ದೇವಯ್ಯ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ರಾಣಿ ಮಾಚಯ್ಯ, ಮ್ಯಾಥ್ಯೂ, ಸರ್ವೋದಯ ಸಮಿತಿ ಅಧ್ಯಕ್ಷ ಅಂಬೆಕಲ್ ಕುಶಾಲಪ್ಪ, ಪ್ರಮುಖರಾದ ಕೊಕ್ಕಲೆಮಾಡ ಮಂಜುಚಿಣ್ಣಪ್ಪ, ನಾಪಂಡ ರವಿಕಾಳಪ್ಪ, ಬಿ.ಎಸ್.ತಮ್ಮಯ್ಯ, ಉಳ್ಳಿಯಡ ಎಂ. ಪೂವಯ್ಯ, ಸತೀಶ್, ಅನಿತಾ ಪೂವಯ್ಯ, ಸಬಿತಾ, ಪೌರಾಯುಕ್ತ ಎಚ್.ಆರ್. ರಮೇಶ್, ಮಾಜಿ ಸೈನಿಕರ ಸಂಘದ ಗೌರವ ಅಧ್ಯಕ್ಷ ಸೋಮಣ್ಣ, ಪಾಲೆಂಗಡ ಅಮಿತ್, ಮೂರ್ನಾಡು ಕೊಡವ ಸಮಾಜದ ಅಧ್ಯಕ್ಷ ಟಿ.ಸುಬ್ಬಯ್ಯ, ಬಿ. ಅಶ್ವಥ್, ವಿನು, ಚೆಯ್ಯಂಡ ಸತ್ಯ, ಸೂರಜ್, ಕುಮಾರ, ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಪ್ರಧಾನ ಆಯುಕ್ತೆ ಕೆ.ಟಿ.ಬೇಬಿ, ಆಯುಕ್ತ ಜಿಮ್ಮಿ ಸ್ವಿಕ್ವೇರಾ, ಸಂಘಟಕರಾದ ದಮಯಂತಿ, ಸುಲೋಚನ, ಗಣೇಶ್, ಅವರೆ ಮಾದಂಡ ಶರಣ್, ಮಾಜಿ ಸೈನಿಕರು, ಗೌರವ ನಮನ ಸಲ್ಲಿಸಿದರು.



ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಜನ್ಮದಿನಾಚರಣೆ ಅಂಗವಾಗಿ ಗಣ್ಯರು ಪಥಸಂಚಲನ ಮಾಡಿದರು.

ರೋಶನಾರದಲ್ಲಿ ಪ್ರಥಮ ಮಹಾ ದಂಡನಾಯಕನ ಜನ್ಮ ದಿನಾಚರಣೆ

ಮಡಿಕೇರಿ, ಜ.28– ಭಾರತೀಯ ಸೇನಾ ಪಡೆಗಳ ಪ್ರಥಮ ಮಹಾ ದಂಡನಾಯಕ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರ 127ನೇ ಜನ್ಮ ಜಯಂತಿಯನ್ನು ನಗರದ ರೋಶನಾರದಲ್ಲಿ ಪುಷ್ಪ ನಮನದ ಮೂಲಕ ಭಾವಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಪ್ಪ ಅವರ ನೆಚ್ಚಿನ ಮನೆಯಾಗಿದ್ದ ರೋಶನಾರ ಬಳಿಯಿರುವ ಕಾರ್ಯಪ್ಪ ಅವರ ಸಮಾಧಿ ಸ್ಥಳಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಕೊಡಗು ವಿದ್ಯಾಲಯದ ವಿದ್ಯಾರ್ಥಿಗಳಿಂದ ಕಾರ್ಯಪ್ಪ ಅವರಿಗೆ ಪ್ರಿಯವಾಗಿದ್ದ ಭಜನೆ, ದೇಶ ಭಕ್ತಿಗೀತೆ ಗಾಯನ ಜರುಗಿತು.

ಕಾರ್ಯಪ್ಪ ಅವರ ಪುತ್ರ ನಿವೃತ್ತ ಏರ್ ಮಾರ್ಷಲ್ ನಂದಾಕಾರ್ಯಪ್ಪ, ಮಾತನಾಡಿ, ಪ್ರತಿಯೊಬ್ಬ ಭಾರತೀಯನಿಗೂ ತನ್ನ ದೇಶ ಮೊದಲಾಗಬೇಕು. ಭಾರತೀಯತೆ ಆದ್ಯತೆಯಾಗಿರಬೇಕು. ಯಾವುದೇ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುವ ಮುನ್ನ ಎಲ್ಲಾ ಸೌಲಭ್ಯಗಳೊಂದಿಗೆ ದೇಶ ಸೇವೆಗೆ ಪ್ರಾಮುಖ್ಯತೆ ನೀಡುವ ಭಾರತೀಯ ಸೇನಾ ಪಡೆಯಲ್ಲಿ ಕಾರ್ಯನಿರ್ವಹಿಸಲು ಆದ್ಯತೆ ನೀಡಿ ಎಂದು ಕಿವಿಮಾತು ಹೇಳಿದರು. ಪುತ್ರಿ ನಳಿನಿ ಕಾರ್ಯಪ್ಪ ಸಮಾಧಿ ಸ್ಥಳದಲ್ಲಿ ಜ್ಯೋತಿ ಬೆಳಗಿದರು. ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕುರಿತು ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಕೊಡಿಗೆ ಸೈನಿಕ ಶಾಲಾ ಕೆಡೆಟ್ ಧ್ರುವ್ ಭಾರದ್ವಜ್ ಅವರಿಗೆ ಸೊಸೆ ಮೀನಾ ಕಾರ್ಯಪ್ಪ ಟ್ರೋಫಿ ಪ್ರದಾನ ಮಾಡಿದರು.



ರೋಶನಾರದಲ್ಲಿ ಕಾರ್ಯಪ್ಪ ಸಮಾಧಿ ಸ್ಥಳಕ್ಕೆ ಅವರ ಪುತ್ರ ನಿವೃತ್ತ ಏರ್ ಮಾರ್ಷಲ್ ನಂದಾಕಾರ್ಯಪ್ಪ, ಪುಷ್ಪ ನಮನ ಸಲ್ಲಿಸಿದರು.

ಕಾರ್ಯಪ್ಪರಿಗೆ ಪ್ರಿಯವಾಗಿದ್ದ ಹೇಳಿಕೆಗಳನ್ನು ಕೊಡಗು ವಿದ್ಯಾಲಯದ ವಿದ್ಯಾರ್ಥಿಗಳು ವಾಚಿಸಿದರು. ಆಡಳಿತ ಮಂಡಳಿ ನಿರ್ದೇಶಕ ಗುರುದತ್, ನಿಯತಾ ದೇವಯ್ಯ, ಪ್ರಾಂಶುಪಾಲ ಕೆ.ಎಸ್. ಸುಮಿತ್ರಾ, ಆಡಳಿತಾಧಿಕಾರಿ ಪಿ.ರವಿ, ನಿವೃತ್ತ ಕರ್ನಲ್ ಬಿ.ಜಿ.ವಿ. ಕುಮಾರ್, ಕರ್ನಲ್ ಕಾವೇರಪ್ಪ ಪ್ರೇಮ್ ನಾಥ್, ಬಾಬು ಸೋಮಯ್ಯ, ಹಾಜರಿದ್ದರು.

ಹೆಬ್ಬಾಲೆ : ಜೀಪ್ ಹರಿದು ಪಾದಚಾರಿ ಮಹಿಳೆ ಸಾವು



ಕುಶಾಲನಗರ, ಜ.28– ಪಾದಚಾರಿ ಮಹಿಳೆಯೊಬ್ಬರಿಗೆ ಬೊಲೆರೋ ಜೀಪ್ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಅಸುನೀಗಿದ ಘಟನೆ ಹೆಬ್ಬಾಲೆ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ.

ಕೊಣನೂರು ಕಡೆಯಿಂದ ಕುಶಾಲನಗರಕ್ಕೆ ಬರುತ್ತಿದ್ದ ಬೊಲೆರೋ ಜೀಪ್ (ಕೆ.ಎ.13, ಎನ್.8637) ರಸ್ತೆ ಬದಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿ ಮಹಿಳೆ ಮಂಜುಳಾ (50) ಎಂಬವರಿಗೆ ಡಿಕ್ಕಿಯಾಗಿದೆ. ಘಟನೆಯಲ್ಲಿ ಗಂಭೀರ ಗಾಯಗೊಂಡ ಮಂಜುಳಾ ಅವರನ್ನು ಕೂಡಲೇ ಸಮುದಾಯ ಆರೋಗ್ಯ ಕೇಂದ್ರ ರವಾನಿಸಿದರೂ ಚಿಕಿತ್ಸೆ ನೀಡುವ ಮುನ್ನವೇ ಮೃತಪಟ್ಟಿದ್ದಾರೆ. ಮೃತ ಮಹಿಳೆ ಹೆಬ್ಬಾಲೆ ಗ್ರಾಮದ ನಿವೃತ್ತ ಶಿಕ್ಷಕ ಪಾಲಾಕ್ಷ ಎಂಬವರ ಪತ್ನಿಯಾಗಿದ್ದಾರೆ.

ಸ್ಥಳಕ್ಕೆ ಎಸ್ಪಿ ಬಿಂದುಮಣಿ ಡಿವೈಎಸ್ಪಿ ಚಂದ್ರಶೇಖರ್, ಸಂಚಾರ ಪೊಲೀಸ್ ಠಾಣಾಧಿಕಾರಿ ಗಣೇಶ್ ಭೇಟಿ ನೀಡಿದ್ದು, ಜೀಪ್ ಚಾಲಕನನ್ನು ವಶಕ್ಕೆ ಪಡೆದು ಮುಂದಿನ ಕ್ರಮಕ್ಕೈಗೊಂಡಿದ್ದಾರೆ.

ಅನುದಾನದಲ್ಲಿ ವಿಶೇಷಚೇತನರಿಗೂ ಸೌಲಭ್ಯ



ಬೂದಿಮೊಳದಲ್ಲಿ ಸಾರ್ವಜನಿಕ ರಸ್ತೆಯನ್ನು ರಿಬ್ಬನ್ ಕತ್ತರಿಸಿ ಉದ್ಘಾಟಿಸಿದರು.

ವಿರಾಜಪೇಟೆ, ಜ.28–ಬೇಟೋಳಿ ಗ್ರಾ.ಪಂ.ನ 33ಲಕ್ಷ ರೂ. ಅನುದಾನದಲ್ಲಿ ರಸ್ತೆ ಅಭಿವೃದ್ಧಿ, ಕುಡಿಯುವ ನೀರು, ಬೀದಿ ದೀಪ ಮತ್ತು ವಿಶೇಷ ಚೇತನರಿಗೂ ಸೌಲಭ್ಯಗಳನ್ನು ನೀಡಲಾಗಿದೆ ಎಂದು ಬೇಟೋಳಿ ಗ್ರಾಪಂ ಅಧ್ಯಕ್ಷ ಅಜ್ಜಪಂಡ ಎಂ. ಬೋಪಣ್ಣ ಹೇಳಿದ್ದಾರೆ.

ಬೇಟೋಳಿ ಗ್ರಾಪಂ ವ್ಯಾಪ್ತಿಯ ಹೆಗ್ಗಳ ಬೂದಿಮೊಳ ಅಯ್ಯಪ್ಪ ದೇವಸ್ಥಾನ ಬಳಿ ಸಾರ್ವಜನಿಕ ರಸ್ತೆಗೆ 1.30 ಲಕ್ಷ ರೂ. ಅನುದಾನದಲ್ಲಿ ಕಾಂಕ್ರೀಟ್ ರಸ್ತೆ ಉದ್ಘಾಟಿಸಿ ಮಾತನಾಡಿದ ಅವರು, 15ನೇ ಹಣಕಾಸು ಯೋಜನೆಯ 33 ಲಕ್ಷದಲ್ಲಿ ಗ್ರಾಮಕ್ಕೆ 16.5 ಲಕ್ಷ ಹಾಗೂ ಹೆಗ್ಗಳ ರಸ್ತೆ ಮತ್ತು ಮಾಕುಟ್ಟ ಕಾಲೋನಿ ರಸ್ತೆ ಸೇರಿದಂತೆ 16.5 ಲಕ್ಷ ಅನುದಾನದಲ್ಲಿ ರಸ್ತೆ ಅಭಿವೃದ್ಧಿ, ಚರಂಡಿ ಮತ್ತು ಪ.ಜಾತಿ ಪಂಗಡಗಳಿಗೆ ಮಿಸಲು ಹಾಗೂ ಸೌಲಭ್ಯಗಳನ್ನು ನೀಡಲಾಗಿದೆ ಎಂದರು.

ಬೇಟೋಳಿ ಗ್ರಾಪಂ ಸದಸ್ಯರಾದ ಸುದೀಶ್, ಯಶೋಧ, ಲಕ್ಷ್ಮಿ, ಗೀತಾ, ಎಂ.ಎಂ. ರಂಜೀತ್ ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ಬಿಷ್ಟಪ್ಪ ಹನಮಂತಪ್ಪ ತಳವಾರರಿಗೆ ಪಿ.ಹೆಚ್.ಡಿ



ಮಡಿಕೇರಿ, ಜ.28–ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜ್‌ನಲ್ಲಿ ಹಿಂದಿ ಸಹ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬಿಷ್ಟಪ್ಪ ಹನಮಂತಪ್ಪ ತಳವಾರ ಅವರಿಗೆ ಪಿಹೆಚ್.ಡಿ ಪದವಿ ಲಭಿಸಿದೆ.

ಮಂಗಳೂರು ವಿವಿಯ ಪ್ರಾಧ್ಯಾಪಕಿ ಡಾ. ಸುಮಾ ಟಿ.ರೋಡನ್ನ ಮಾರ್ಗದರ್ಶನದಲ್ಲಿ ನಡೆದ 'ಸಮಕಾಲೀನ ಪ್ರಮುಖ ಹಿಂದಿ ದಲಿತ ಮಹಿಳಾ ಕಥಾ ಸಾಹಿತ್ಯ ಮೇ ವ್ಯಕ್ತ ದಲಿತ ವಿಮರ್ಶ' ಎಂಬ ವಿಷಯದ ಸಂಶೋಧನಾ ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ನೀಡಿದೆ.

ರಾಷ್ಟ್ರ ಮಟ್ಟದ ಕರಾಟೆ ಸ್ಪರ್ಧೆಗೆ ಕೊಡಗಿನ ಬಾಲಕಿ ಪ್ರತಿನಿಧಿ



ಸುಂಟಿಕೊಪ್ಪ, ಜ.28–ಪುಣೆಯಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಗೆ ರಾಜ್ಯದ ಪ್ರತಿನಿಧಿಯಾಗಿ ಇಲ್ಲಿನ ಸಂತ ಮೇರಿ ಆಂಗ್ಲ ಮಾಧ್ಯಮ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಆರ್. ಜೀವಿಕ ಪಾಲ್ಗೊಳ್ಳಲಿದ್ದಾರೆ. ಜ.30ರಿಂದ ಫೆ.2ರವರೆಗೆ ಪುಣೆಯಲ್ಲಿ ರಾಷ್ಟ್ರ ಮಟ್ಟದ ಸ್ಕೂಲ್ ಗೇಮ್ಸ್ ಆಫ್ ಫೆಡರೇಶನ್‌ನಿಂದ ಕರಾಟೆ ಸ್ಪರ್ಧೆ ನಡೆಯಲಿದೆ. ಈಕೆ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ರಾಜಕುಮಾರ್ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ದಾದಿಯಾಗಿ ಸೇವೆ ಸಲ್ಲಿಸುತ್ತಿರುವ ಲಕ್ಷ್ಮಿ ದಂಪತಿಗಳ ಪುತ್ರಿ. ಮುಖ್ಯ ತರಬೇತಿದಾರ ಮುಖೇಶ್ ಹಾಗೂ ಸಹ ತರಬೇತಿದಾರ ಅಕ್ಷಯ್, ಅಂಕಿತ್ ಅವರಲ್ಲಿ ತರಬೇತಿ ಪಡೆಯುತ್ತಿದ್ದಾಳೆ.

ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗುವಂತೆ ಕ್ರೀಡೆಯಲ್ಲಿ ಪಾಲ್ಗೊಳ್ಳಿ

ನಾಪೋಕ್ಲು, ಜ.28– ಚೇಯಕ ಪೂವಂಡ ಕುಟುಂಬದ ಏಪ್ರಿಲ್‌ನಲ್ಲಿ ಆಯೋಜಿಸಿರುವ ಕೊಡವ ಕೌಟುಂಬಿಕ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಹೆಚ್ಚಿನ ಸಂಖ್ಯೆಯ ಪಾಲ್ಗೊಳ್ಳುವುದರ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗುವಂತೆ ಪ್ರಯತ್ನಿಸಬೇಕು ಎಂದು ಚೇಯಕ ಪೂವಂಡ ಕುಟುಂಬದ ಅಧ್ಯಕ್ಷ ಸಿ.ಎಂ ಅಪ್ಪಚ್ಚು ತಿಳಿಸಿದರು.

ನಾಪೋಕ್ಲುವಿನ ಕೆಪಿಎಸ್ ಶಾಲಾ ಆಟದ ಮೈದಾನದಲ್ಲಿ ಏ.23 ರಿಂದ26 ರವರೆಗೆ ನಡೆಯಲಿರುವ ಕ್ರೀಡಾಕೂಟದ ಯಶಸ್ವಿಗಾಗಿ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಅಂದಾಜು 60ಲಕ್ಷ ವೆಚ್ಚವಾಗಲಿದ್ದು ಕುಟುಂಬವಾರು 20ಸಾವಿರ ರೂ. ಧನಸಹಾಯವನ್ನು ಸಂಗ್ರಹಿಸಲಾಗುತ್ತಿದೆ ಎಂದು ಹೇಳಿದರು

ಹಗ್ಗ ಜಗ್ಗಾಟ ಕ್ರೀಡಾಕೂಟದ ಅಧ್ಯಕ್ಷ ಸಿ.ಕೆ ಬೋಪಣ್ಣ ಮಾತನಾಡಿ ಕ್ರೀಡಾಕೂಟದ ಯಶಸ್ಸಿಗೆ ಪರಸ್ಪರ ಸಹಕಾರ ಅಗತ್ಯ. ಜನಾಂಗದ ಕ್ರೀಡಾ ಅಭಿಮಾನಿ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸುವುದರ ಮೂಲಕ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಕ್ರೀಡೆ ದಾಖಲಾಗಲು ಸಹಕರಿಸಬೇಕು ಎಂದರು.

ಸಂಚಾಲಕ ಸಿ.ಡಿ ನವೀನ್ ಮಾತನಾಡಿ, ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ನಗದು ಬಹುಮಾನದೊಂದಿಗೆ ಆಕರ್ಷಕ ಟ್ರೋಫಿಯನ್ನು ನೀಡಲಾಗುವುದು.ಇದೇ ರೀತಿ16 ವರ್ಷದೊಳಗಿನ ಬಾಲಕ ಬಾಲಕಿಯರಿಗೂ ನಗದು ಬಹುಮಾನದೊಂದಿಗೆ ಆಕರ್ಷಕ ಟ್ರೋಫಿ ವಿತರಿಸಲಾಗುವುದು ಎಂದರು.

ಸಮಿತಿ ಉಪಾಧ್ಯಕ್ಷ ಸಿ.ಎಸ್. ಕಟ್ಟಿ ಮಂಜುನಾಥ್, ಕಾರ್ಯದರ್ಶಿ ನಾಚಪ್ಪ, ಜಂಟಿ ಕಾರ್ಯದರ್ಶಿ ಸಚಿನ್ ಮುತ್ತಪ್ಪ, ಖಜಾಂಚಿ ಸತೀಶ್ ದೇವಯ್ಯ, ನಿರ್ದೇಶಕರಾದ ಸಚಿನ್ ಪೂವಯ್ಯ, ಸಿ.ಎ ಸುನಿಲ್ ಮೊದಲಾದವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಫೀಲ್ಡ್ ಮಾರ್ಷಲ್ ಕೆ ಎಂ ಕಾರ್ಯಪ್ಪನವರ ಜನ್ಮ ದಿನ ಆಚರಣೆ



ಕೂಡುಮಂಗಳೂರು ಪ್ರೌಢಶಾಲೆಯಲ್ಲಿ ಬುಧವಾರ ಕೆ.ಎಂ. ಕಾರ್ಯಪ್ಪನವರ ಜನ್ಮ ದಿನವನ್ನು ಆಚರಿಸಲಾಯಿತು. ಮುಖ್ಯ ಶಿಕ್ಷಕ ಟಿ.ಜಿ. ಪ್ರೇಮಕುಮಾರ್, ಸಹ ಶಿಕ್ಷಕರ ಸಂಘದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ದಯಾನಂದ ಪ್ರಕಾಶ್, ಗೈಡ್ಸ್ ಶಿಕ್ಷಕಿ ಕೆ.ಟಿ.ಸೌಮ್ಯ, ಶಿಕ್ಷಕರಾದ ಕೆ.ಗೋಪಾಲಕೃಷ್ಣ, ಬಿ.ಡಿ.ರಮ್ಯ, ಬಿ.ಎನ್. ಸುಜಾತ, ಅನ್ಸಿಲಾ ರೇಖಾ, ಸಿಬ್ಬಂದಿ ಎಂ. ಉಷಾ ಹಾಗೂ ವಿದ್ಯಾರ್ಥಿ ನಾಯಕರು ಇದ್ದರು.

ಮಹಾಶಿವರಾತ್ರಿ, ಯುಗಾದಿ ವೇಳೆ ಭಕ್ತರಿಗೆ ಮೂಲ ಸೌಲಭ್ಯ ಕಲ್ಪಿಸಿ

ಪೂರ್ವ ಸಿದ್ಧತಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ

ಚಾಮರಾಜನಗರ, ಜ.28– ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯುವ ಮಹಾಶಿವರಾತ್ರಿ ಹಾಗೂ ಯುಗಾದಿ ಹಬ್ಬದ ಜಾತ್ರಾ ಮಹೋತ್ಸವ ಸಂದರ್ಭ ಬೆಟ್ಟಕ್ಕೆ ಆಗಮಿಸುವ ಭಕ್ತರಿಗೆ ಹೆಚ್ಚಿನ ಮೂಲ ಸೌಲಭ್ಯ ಕಲ್ಪಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಸೂಚನೆ ನೀಡಿದರು.

ಬೆಂಗಳೂರಿನ ವಿಕಾಸಸೌಧದ ನಾಲ್ಕನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 419 ರಲ್ಲಿ ಮುಂಬರುವ ಮಹಾಶಿವರಾತ್ರಿ ಹಾಗೂ ಯುಗಾದಿ ಜಾತ್ರಾ ಸಂಬಂಧ ನಡೆದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಸಚಿವ ಕೆ. ವೆಂಕಟೇಶ್, ಈ ಎರಡು ಹಬ್ಬಗಳ ಜಾತ್ರಾ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೆಟ್ಟಕ್ಕೆ ಆಗಮಿಸುವ ಭಕ್ತರಿಗೆ ಪ್ರಾಧಿಕಾರದಿಂದ ಕಳೆದ ಬಾರಿಗಿಂತ ಹೆಚ್ಚಿನ ಮೂಲ ಸೌಕರ್ಯಗಳನ್ನು ವ್ಯವಸ್ಥಿತವಾಗಿ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಕ್ಷೇತ್ರಕ್ಕೆ ಆಗಮಿಸುವ ಭಕ್ತರಿಗೆ ಬೆಳಗ್ಗೆ 7 ಗಂಟೆಯಿಂದ ಮಧ್ಯರಾತ್ರಿವರೆಗೆ ನಿರಂತರ ದಾಸೋಹ ವ್ಯವಸ್ಥೆ ಇರಬೇಕು. ಹಿರಿಯ ನಾಗರಿಕರಿಗೆ ದರ್ಶನಕ್ಕಾಗಿ ಪ್ರತ್ಯೇಕ ಸರತಿ ಸಾಲಿನ ವ್ಯವಸ್ಥೆ ಮಾಡಬೇಕು. ಕೌದಳ್ಳಿಯಿಂದ ಬೆಟ್ಟಕ್ಕೆ ಪಾದಯಾತ್ರೆ ಮೂಲಕ ಬರುವ ಭಕ್ತರಿಗೆ ಮಾರ್ಗದುದ್ದಕ್ಕೂ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗ ಬೇಕು. ಬೆಟ್ಟದಲ್ಲಿ ಚಿರತೆ ದಾಳಿ ಹಿನ್ನೆಲೆಯಲ್ಲಿ ಪೊಲೀಸ್ ಹಾಗೂ ಅರಣ್ಯ ರಕ್ಷಕರ ಕಾರ್ಯಾಚರಣೆಗೆ ಅನುಕೂಲವಾಗುವಂತೆ ಪ್ರಾಧಿಕಾರದಿಂದ 50 ಮಂದಿ ಗೃಹ ರಕ್ಷಕರನ್ನು ಭದ್ರತೆಗಾಗಿ ನಿಯೋಜಿಸಬೇಕು ಎಂದು ಹೇಳಿದರು.



ಬೆಂಗಳೂರಿನಲ್ಲಿ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು.

ಜಾತ್ರಾ ಸಂದರ್ಭ ಅಕ್ರಮ ಮದ್ಯ ಮಾರಾಟ ತಡೆಯುವ ಸಲುವಾಗಿ ತಾಳು ಬೆಟ್ಟ ಹಾಗೂ ಪಾಲಾರ್‌ನಲ್ಲಿ ಚೆಕ್ ಪೋಸ್ಟ್ ಸ್ಥಾಪಿಸಿ ಪಾದಯಾತ್ರಿಗಳನ್ನು ಮತ್ತು ಭಕ್ತಾದಿಗಳು ತೆರಳುವ ಬಸ್‌ಗಳು ಸೇರಿದಂತೆ ಎಲ್ಲಾ ಬಗೆಯ ವಾಹನಗಳನ್ನು ವ್ಯಾಪಕವಾಗಿ ತಪಾಸಣೆ ಮಾಡಬೇಕು. ಜಾತ್ರೆ ಆರಂಭದ ಒಂದು ವಾರ ಮೊದಲಿನಿಂದ ಮತ್ತು ಜಾತ್ರೆ ಮುಗಿದ ಒಂದು ವಾರದವರೆಗೆ 24x7 ಅವಧಿಯಲ್ಲಿ ನಿರಂತರ ವಿದ್ಯುತ್ ಸರಬರಾಜಾಗುವಂತೆ ನೋಡಿಕೊಳ್ಳಬೇಕು. ತಾಳುಬೆಟ್ಟ ಹಾಗೂ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಆರೋಗ್ಯ ಇಲಾಖೆಯಿಂದ ಪ್ರಥಮ ಚಿಕಿತ್ಸಾ ಕೇಂದ್ರಗಳನ್ನು ತೆರೆದು ಭಕ್ತಾದಿಗಳಿಗೆ ಆರೋಗ್ಯ ಸೇವೆ ನೀಡಲು ಅಧಿಕಾರಿಗಳು ಮುಂದಾಗಬೇಕು ಎಂದು ನಿರ್ದೇಶನ ನೀಡಿದರು.

ಸಾಲೂರು ಬೃಹನ್ ಮಠದ ಅಧ್ಯಕ್ಷರು ಹಾಗೂ ಪ್ರಾಧಿಕಾರದ ಶಾಶ್ವತ ಸದಸ್ಯ ಡಾ.ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶಾಸಕ ಎಂ.ಆರ್.ಮಂಜುನಾಥ್, ಜಿಲ್ಲಾಧಿಕಾರಿ ಶ್ರೀರೂಪ, ಜಿಪಂ ಸಿಇಓ ಮೋನಾ ರೋತ್, ಶ್ರೀಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

> ❛ ಶ್ರೀಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಹಾಶಿವರಾತ್ರಿ ಜಾತ್ರೆ ಫೆ.14ರಿಂದ 18ರವರೆಗೆ 5 ದಿನಗಳ ಕಾಲ ಹಾಗೂ ಮಾ.16ರಿಂದ 19ರವರೆಗೆ 4 ದಿನಗಳ ಕಾಲ ಯುಗಾದಿ ಜಾತ್ರೆಯಲ್ಲಿ ಮಹದೇಶ್ವರ ಸ್ವಾಮಿಗೆ ವಿವಿಧ ಧಾರ್ಮಿಕ ಸೇವೆಗಳು ನಡೆಯಲಿದೆ. ಈ ಅವಧಿಯಲ್ಲಿ ಬೆಟ್ಟಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲಿದ್ದು, ಅವರಿಗೆ ಯಾವುದೇ ತೊಂದರೆಯಾಗದಂತೆ ಸಿದ್ಧತಾ ಕಾರ್ಯಗಳನ್ನು ಸುಸೂತ್ರವಾಗಿ ನಿರ್ವಹಿಸಬೇಕು. ಕುಡಿಯುವ ನೀರು, ಸ್ವಚ್ಛತೆ, ದಾಸೋಹ, ದರ್ಶನ, ನೆರಳಿನ ವ್ಯವಸ್ಥೆ, ಶೌಚಾಲಯ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು. ವ್ಯವಸ್ಥೆಯಲ್ಲಿ ಯಾವುದೇ ಲೋಪವಾಗದಂತೆ ನಿಗಾ ವಹಿಸಿ. – ಕೆ.ವೆಂಕಟೇಶ್, ಸಚಿವ.

ರೈಫಲ್ ಶೂಟಿಂಗ್‌ನಲ್ಲಿ ಬೆಳ್ಳಿ ಪದಕ



ಚಾಮರಾಜನಗರ, ಜ.28– ಬೆಂಗಳೂರಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಂಪಿಕ್ ಅಸೋಸಿಯೇಶನ್ ಇವರ ಸಹ ಯೋಗದಲ್ಲಿ ಕರ್ನಾಟಕ ರಾಜ್ಯ ರೈಫಲ್ ಅಸೋಸಿಯೇಷನ್ ಆಯೋಜಿಸಿದ್ದ ಕರ್ನಾಟಕ 4ನೇ ಮಿನಿ ಸ್ಟೇಟ್ ಗೇಮ್ಸ್‌ನ 25 ಮೀಟರ್ ಸೆಂಟರ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಚಾಮರಾಜನಗರದ ಇಮ್ರಾನ್ ಅಹ್ಮದ್ ಅವರು ಬೆಳ್ಳಿ ಪದಕ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಬೆಂಗಳೂರಿನ ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಕ್ಲಬ್‌ನಲ್ಲಿ ಜ.16 ರಿಂದ 22ರವರೆಗೆ ನಡೆದ ಶೂಟಿಂಗ್ ಸ್ಪರ್ಧೆಯಲ್ಲಿ ಚಾಮರಾಜನಗರದ ಶೂಟಿಂಗ್ ಕ್ರೀಡಾಪಟು ಇಮ್ರಾನ್ ಅಹ್ಮದ್ 1555 ಪಾಯಿಂಟ್ ಪಡೆದು ಬೆಳ್ಳಿ ಪದಕವನ್ನು ತನ್ನದಾಗಿಸಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ನಡೆಸಿದ ಶೂಟಿಂಗ್ ಸ್ಪರ್ಧೆಯಲ್ಲಿ ರಾಜ್ಯದಿಂದ 100 ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಕರ್ನಾಟಕ ರೈಫಲ್ ಅಸೋಸಿಯೇಷನ್ ತರಬೇತಿದಾರ ಸುರೇಶ್.ಎಂ ಅವರು ಇಮ್ರಾನ್ ಅಹ್ಮದ್ ಅವರನ್ನು ಅಭಿನಂದಿಸಿದ್ದಾರೆ.

ಇಮ್ರಾನ್ ಅಹ್ಮದ್ ಮಾತನಾಡಿ, ಚಾಮರಾಜನಗರ ಗಡಿ ಜಿಲ್ಲೆ ನಾನು ಶೂಟಿಂಗ್ ತರಬೇತಿ ಪಡೆಯಲು ಪ್ರತಿವಾರ ಬೆಂಗಳೂರಿಗೆ ಹೋಗುತ್ತಿದ್ದೇನೆ. ನನಗೆ ಉತ್ತಮ ತರಬೇತಿಯನ್ನು ಕರ್ನಾಟಕ ರೈಫಲ್ ಅಸೋಸಿಯೇಷನ್ ತರಬೇತಿದಾರ ಸುರೇಶ್ ನೀಡುತ್ತಿದ್ದಾರೆ. ಮುಂದಿನ ನನ್ನ ಗುರಿ ಒಲಂಪಿಕ್‌ನಲ್ಲಿ ಭಾಗವಹಿಸುವುದಾಗಿದೆ ಎಂದು ತಿಳಿಸಿದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಚಾಮರಾಜನಗರ, ಜ.28– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಬೆಂಗಳೂರು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಸಹಯೋಗದಲ್ಲಿ ಜ.30 ಮತ್ತು 31ರಂದು ತಾಲೂಕಿನ ಸುವರ್ಣಾವತಿ ಜಲಾಶಯದಲ್ಲಿ ಏರ್ಪಡಿಸಲಾಗಿದ್ದ ಜಲ ಸಾಹಸ ಕ್ರೀಡೆಯನ್ನು ಫೆ.3 ಮತ್ತು 4ಕ್ಕೆ ಮುಂದೂಡಲಾಗಿದ್ದು, ಅರ್ಜಿ ಸಲ್ಲಿಸಲು ಜ.31 ರವರೆಗೆ ಅವಧಿ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಕಚೇರಿ ಮೊ. 9880211027, 9945615695, 9916466659 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ದೇಹದ ಸಮತೋಲನಕ್ಕೆ ರಾಗಿ ಉತ್ತಮ ಆಹಾರ

ಸಾಲೂರು ಮಠದ ಪೀಠಾಧ್ಯಕ್ಷ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ



ರಾಗಿ ಉತ್ಪನ್ನಗಳ ಮಳಿಗೆಯನ್ನು ಸಾಲೂರು ಮಠದ ಪೀಠಾಧ್ಯಕ್ಷ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಉದ್ಘಾಟಿಸಿದರು.

ಹನೂರು, ಜ.28– ದೇಹದ ಸಮತೋಲನಕ್ಕೆ ರಾಗಿ ಉತ್ತಮ ಆಹಾರವಾಗಿದೆ. ಅದರಲ್ಲೂ ಮಲೆ ಮಹದೇಶ್ವರ ಬೆಟ್ಟದ ಗ್ರಾಮಗಳಲ್ಲಿ ನೈಸರ್ಗಿಕವಾಗಿ ಬೆಳೆಯುತ್ತಿರುವ ರಾಗಿ ಉತ್ತಮ ಗುಣಮಟ್ಟ ಹೊಂದಿದೆ ಎಂದು ಸಾಲೂರು ಮಠದ ಪೀಠಾಧ್ಯಕ್ಷ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ದೇವಸ್ಥಾನದ ರಂಗಮಂದಿರದ ಬಳಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಾಗೂ ಮಹಿಳಾ ಸ್ವ–ಸಹಾಯ ಸಂಘಗಳ ಒಕ್ಕೂಟದ ಸಹಯೋಗದಲ್ಲಿ ರಾಗಿ ಉತ್ಪನ್ನಗಳ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, ಈ ಮಳಿಗೆಯಲ್ಲಿ ಮಲೆ ಮಹದೇಶ್ವರ ಬೆಟ್ಟದ ಸುತ್ತಮುತ್ತಲ ಗ್ರಾಮಗಳಲ್ಲಿ ಬೆಳೆದಿರುವ ರಾಗಿಯನ್ನು ಮಹಿಳೆಯರು ಸಾಂಪ್ರದಾಯಿಕ ಶೈಲಿಯಲ್ಲಿ ಕಲ್ಲಿನಿಂದ ಬೀಸಿ ತಯಾರಿಸಿದ ಹಿಟ್ಟು ದೊರೆಯಲಿದೆ. ಜನರಿಗೆ ಆಹಾರ ಉತ್ಪನ್ನಗಳಲ್ಲಿ ಇರುವ ಪೋಷಕಾಂಶಗಳ ಕುರಿತು ಅರಿವು ಮೂಡಿಸುವ ಜೊತೆಗೆ ಮಹಿಳಾ ಸ್ವಸಹಾಯ ಸಂಘಗಳ ಬಲವರ್ಧನೆಗೆ ಇದು ಸಹಕಾರಿಯಾಗಲಿದೆ. ಇದನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಿ ಎಂದು ತಿಳಿಸಿದರು.

ಮಲೆ ಮಹದೇಶ್ವರಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು ಮಾತನಾಡಿ, ಆಹಾರ ಉತ್ಪನ್ನಗಳು ಕಲುಷಿತಗೊಳ್ಳುತ್ತಿರುವ ಈ ಕಾಲದಲ್ಲಿ ಮಲೆ ಮಹದೇಶ್ವರ ಬೆಟ್ಟದ ಗ್ರಾಮಗಳಲ್ಲಿ ನೈಸರ್ಗಿಕವಾಗಿ ಬೆಳೆಯುತ್ತಿರುವ ರಾಗಿ ಉತ್ತಮ ಗುಣ ಮಟ್ಟ ಹೊಂದಿದೆ. ಆದ್ದರಿಂದ ಈ ಪ್ರದೇಶದಲ್ಲಿ ಬೆಳೆಯುವ ರಾಗಿಗೆ ವಿಶೇಷ ಗುಣ ಮತ್ತು ಬೇಡಿಕೆ ಇದೆ. ಆದ್ದರಿಂದ ಸಾರ್ವಜನಿಕರು ಇಲ್ಲಿ ದೊರೆಯುವ ರಾಗಿ ಉತ್ಪನ್ನವನ್ನು ಖರೀದಿಸುವ ಮೂಲಕ ಮಹಿಳಾ ಸಂಘಗಳ ಬಲವರ್ಧನೆಗೆ ಸಹಕರಿಸಬೇಕು ಎಂದು ತಿಳಿಸಿದರು.

ಈ ವೇಳೆ ಕೊಂಬುಡ್ಕಿ, ತುಳಸಿಕೆರೆ, ಇಂಡಿಗನತ್ತ, ಮೆಂದರೆ ಹಾಗೂ ಇನ್ನಿತರ ಗ್ರಾಮಗಳ ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕಠಿಣ ಪರಿಶ್ರಮ, ಏಕಾಗ್ರತೆಯಿಂದ ಓದಿದರೆ ಯಶಸ್ಸು ಸಾಧ್ಯ

ಕೊಳ್ಳೇಗಾಲ ವನ್ಯಜೀವಿ ವಲಯದ ವಲಯ ಅರಣ್ಯ ಅಧಿಕಾರಿ ಬಿ.ಎಸ್.ವಾಸು

ಯಳಂದೂರು, ಜ.28– ಕಠಿಣ ಪರಿಶ್ರಮ, ನಿರಂತರ ಅಭ್ಯಾಸ ಮತ್ತು ಏಕಾಗ್ರತೆಯಿಂದ ಓದಿದರೆ ಯಶಸ್ಸು ಸಾಧ್ಯ ಎಂದು ಕೊಳ್ಳೇಗಾಲ ವನ್ಯಜೀವಿ ವಲಯದ ವಲಯ ಅರಣ್ಯ ಅಧಿಕಾರಿ ಬಿ.ಎಸ್.ವಾಸು ತಿಳಿಸಿದರು.

ಕೊಳ್ಳೇಗಾಲ ತಾಲೂಕಿನ ಜಕ್ಕಳ್ಳಿ ಶಾಲೆಯಲ್ಲಿ ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ರೋಟರಾಕ್ಟ್ ಕ್ಲಬ್, ರಾಷ್ಟ್ರೀಯ ಸೇವಾ ಯೋಜನೆ, ರೋಟರಿ ಬೆಂಗಳೂರು ಮಾನ್ಯತಾ, ರೋಟರಿ ಬೆಂಗಳೂರು ಅಬ್ಬಿಗೆರೆ, ಕೆಸಿಸಿ ಪ್ರೈವೇಟ್ ಲಿ., ಟ್ಯಾಗ್ ಅನ್ಲಿಮಿಟೆಡ್ ಮತ್ತು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ ಚಾಮರಾಜನಗರ, ವನ್ಯಜೀವಿ ವಲಯ ಕೊಳ್ಳೇಗಾಲ ಇವರ ಸಹಯೋಗದಲ್ಲಿ ಆಯೋಜಿಸಿದ್ದ 'ನಮ್ಮೂರ ಶಾಲೆ–ಬಳಪ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕರಳಕಟ್ಟೆ, ಜಕ್ಕಳ್ಳಿ, ಅರೇಪಾಳ್ಯ, ಎರಕಟ್ಟೆ ಹಾಗೂ ಹಿತ್ತಲದೊಡ್ಡಿ ಶಾಲೆಗಳ ಮತ್ತು ಅರಣ್ಯ ಇಲಾಖೆಯ ಹೊರಗುತ್ತಿಗೆ ನೌಕರರ ಮಕ್ಕಳು ಸೇರಿದಂತೆ 236 ವಿದ್ಯಾರ್ಥಿಗಳಿಗೆ ಸಮವಸ್ತ್ರ, ಬ್ಯಾಗ್, ನೋಟ್‌ಬುಕ್, ಲೇಖನ ಸಾಮಗ್ರಿಗಳನ್ನು ವಿತರಿಸಲಾಗಿದ್ದು, ಇವುಗಳ ಸದ್ಬಳಕೆ ಮಾಡಿಕೊಂಡು ಉತ್ತಮ ಕಲಿಕೆಯೊಂದಿಗೆ ಹೆಚ್ಚು ಅಂಕಗಳಿಸಬೇಕೆಂಬ ಆಸೆ ನಿಮ್ಮ ಭವಿಷ್ಯದ ಗುರಿಗೆ ದಾರಿಯಾಗಲಿ ಎಂದ ಅವರು ಬೆಂಗಳೂರಿನ ರಾಮಯ್ಯ ವಿವಿಯವರು ಗ್ರಾಮೀಣ ಮತ್ತು ಕಾಡಂಚಿನ ಶಾಲೆಗಳನ್ನು ಗುರುತಿಸಿ, ಶಿಕ್ಷಣಕ್ಕೆ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸುತ್ತಿರುವುದು ಶ್ಲಾಘನೀಯ ಎಂದು ಪ್ರಶಂಸಿಸಿದರು.



ಮಕ್ಕಳಿಗೆ ಸಮವಸ್ತ್ರ, ಬ್ಯಾಗ್, ನೋಟ್‌ಬುಕ್, ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಫಾದರ್ ಪೌಲ್ ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳು ಮತ್ತು ಸ್ಥಳೀಯ ಸಮುದಾಯದ ಜನರ ಮೇಲೆ ಸಕಾರಾತ್ಮಕ ಪ್ರಭಾವ ಬೀರಿದ್ದು, ಸಮಾನತೆ ಹಾಗೂ ಶಿಕ್ಷಣದ ಮಹತ್ವದ ಕುರಿತು ಜಾಗೃತಿ ಮೂಡಿಸಿದೆ ಮತ್ತು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಹಾಗೂ ನಿಸ್ವಾರ್ಥ ಮನಸ್ಸಿನಿಂದ ಕಾರ್ಯಕ್ರಮ ಆಯೋಜಿಸಿರುವ ಎಲ್ಲರನ್ನೂ ಪ್ರಶಂಸಿಸಿದರು.

ಕಾರ್ಯಕ್ರಮದ ಮುಖ್ಯಸ್ಥ ಡಾ.ಎ.ದಾಮೋದರ್ ನಾಯಕ್ ಮಾತನಾಡಿ, ಈ ಕಾರ್ಯಕ್ರಮ ಶಿಕ್ಷಣ ಹಾಗೂ ಸೇವೆಗಳ ಮೂಲಕ ಗ್ರಾಮೀಣ ಮತ್ತು ಗಿರಿಜನ ಸಮುದಾಯಗಳನ್ನು ಉತ್ತೇಜಿಸುವ ನಮ್ಮ ನಿರಂತರ ಬದ್ಧತೆಯ ಭಾಗವಾಗಿದೆ. 'ನಮ್ಮೂರ ಶಾಲೆ– ಬಳಪ' ಕಾರ್ಯಕ್ರಮ ಪ್ರತಿ ಮಗುವಿಗೂ ಅಗತ್ಯವಾದ ಜ್ಞಾನ ಮತ್ತು ಆರೈಕೆ ದೊರಕುವಂತೆ ಮಾಡುವ ದಿಕ್ಕಿನಲ್ಲಿ ಒಂದು ಮಹತ್ವದ ಹೆಜ್ಜೆಯಾಗಿದೆ. ಈ ಸಂಯುಕ್ತ ಪ್ರಯತ್ನವು ಸೇವೆ ವಂಚಿತ ಸಮುದಾಯಗಳಲ್ಲಿ ಸಕಾರಾತ್ಮಕ ಬದಲಾವಣೆ ತರಲು ವಿಶ್ವವಿದ್ಯಾಲಯದ ನಿಸ್ವಾರ್ಥ ಸೇವೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಕಾರ್ಕಲಾ ವೆನ್ನೆಲ್ಲಾ ಮಾತನಾಡಿ, ವಿದ್ಯಾರ್ಥಿಗಳು ಬೇರೆ ಕಡೆ ಗಮನ ಹರಿಸದೆ ವಿದ್ಯಾಭ್ಯಾಸದ ಕಡೆ ಮನಸ್ಸನ್ನು ಕೇಂದ್ರಿಕರಿಸಬೇಕು. ಮೊಬೈಲ್ ಮತ್ತು ಟಿವಿಯಿಂದ ಆದಷ್ಟು ದೂರವಿದ್ದು, ಉತ್ತಮ ಶಿಕ್ಷಣ ಪಡೆಯುವ ಜೊತೆಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಇನ್ನೊಬ್ಬರಿಗೆ ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಆಟೋಟ ಮತ್ತು ಮನೋರಂಜನಾ ಸ್ಪರ್ಧೆಗಳನ್ನು ನಡೆಸಿ, ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ವೇಳೆ ಸಹ ಪ್ರಾಧ್ಯಾಪಕ ಡಾ. ಪರಶುರಾಮನ್, ಉಪ ವ್ಯವಸ್ಥಾಪಕ ಶಿವರಾಜ್ ಕುಮಾರ್, ರೋಟರಾಕ್ಟ್‌ನ ಮಹಮದ್ ಬಿಲಾಲ್, ಅಲ್ಮಾ ಖಾನ್, ಯಶವಂತ್ ಗೌಡ, ಎಸ್.ಎ. ಶ್ರೀಜಾ, ಹರ್ಷಿತ, ಮೋಹಿತ್ ಪಾಂಡೆ, ಜೋಶ್ನಾ, ತೇಜಸ್, ಅಲೋಕ್, ಶ್ರೀಯುಕ್ತ, ವಿರಾಜ್, ಯಶವಂತ, ಪೂರ್ಣಚಂದ್ರ, ಪ್ರತಾಪ್, ಚರಣ್ ರಾಜ್, ದಾನೇಶ್ವರಿ, ಮುಖ್ಯ ಶಿಕ್ಷಕಿ ಕುಮಾರಿ, ಲಕ್ಷ್ಮಿ, ರಾಜು, ರಂಗರಾಜು, ಮಹೇಶ್, ಗಸ್ತು ಅರಣ್ಯಪಾಲಕರಾದ ಸುನೀಲ್ ಬಸಪ್ಪ ಬೆಳವಿ, ಸಂಜುನಾಥ ಆಯಟ್ಟಿ, ರಾಜು, ಅರಣ್ಯ ವೀಕ್ಷಕ ಆಕಾಶ್ ಸೋಪಾನ ಜೋಷಿ, ಗ್ರಾಮಸ್ಥರು ಮತ್ತು ಇಲಾಖೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

ನಾಳೆ ಶಿಶಿಕ್ಷು ಮೇಳ

ಚಾಮರಾಜನಗರ, ಜ.28– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ಜ.30ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ಪ್ರಧಾನಮಂತ್ರಿ ರಾಷ್ಟ್ರೀಯ ಶಿಶಿಕ್ಷು ಮೇಳವನ್ನು ಮರಿಯಾಲದ ಜೆಎಸ್‌ಎಸ್ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಏರ್ಪಡಿಸಲಾಗಿದೆ. ಐಟಿಐನ ವಿವಿಧ ವೃತ್ತಿಗಳು, ಪಿಯುಸಿ ಹಾಗೂ ಪದವಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಶಿಶಿಕ್ಷು ತರಬೇತಿಗೆ ನೇಮಕ ಮಾಡಿಕೊಳ್ಳಲಾಗುವುದು. ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾ ವ್ಯಾಪ್ತಿಯ ವಿವಿಧ ಕಂಪನಿಗಳು ಮೇಳದಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಭಾಗವಹಿಸುವಂತೆ ಪ್ರಕಟಣೆ ತಿಳಿಸಿದೆ.

ಟೀಂ ಮೈಸೂರು ತಂಡದಿಂದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಲಾಲಾ ಲಜಪತ್ ರಾಯ್ ಜನ್ಮ ದಿನ ಆಚರಣೆ



ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪತ್ ರಾಯ್ ಅವರ ಜನ್ಮದಿನವನ್ನು ಟೀಂ ಮೈಸೂರು ತಂಡ ಆಚರಿಸಿತು.

ಮೈಸೂರು,ಜ.28(ಎಸ್‌ಪಿಎನ್)– ಭಾರತೀಯ ಸೇನಾ ದಂಡನಾಯಕರಾಗಿದ್ದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪತ್ ರಾಯ್ ಅವರ ಜನ್ಮದಿನವನ್ನು ಟೀಂ ಮೈಸೂರು ತಂಡದ ಪದಾಧಿಕಾರಿಗಳು ಬುಧವಾರ ಆಚರಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಮೆಟ್ರೋಪೋಲ್ ವೃತ್ತದ ಬಳಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಜಯಘೋಷ ಕೂಗಲಾಯಿತು. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪನವರು 1899ರ ಜ.28 ರಂದು ಜನಿಸಿದರು. ಇವರು ಭಾರತೀಯ ಸೇನೆಯಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿ, ಭಾರತೀಯ ಸೇನೆಗೆ ಘನತೆ ಗೌರವ ತಂದುಕೊಟ್ಟಿದ್ದರು.

ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪತ್ ರಾಯ್ ಅವರು, 1865ರ ಜ.28 ರಂದು ಪಂಜಾಬಿನಲ್ಲಿ ಜನಿಸಿದರು. ಪ್ರಮುಖ ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗಿಯಾಗಿ ಭಾರತೀಯರಿಗೆ ಸ್ವಾತಂತ್ರ್ಯ ತಂದು ಕೊಡುವ ನಿಟ್ಟಿನಲ್ಲಿ ಹೋರಾಟ ರೂಪಿಸಿದ ಅಗ್ರಣ್ಯರು.

ಈ ವೇಳೆ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ರಾಮಕೃಷ್ಣಯ್ಯ ಹಾಗೂ ಟೀಂ ಮೈಸೂರು ತಂಡದ ಸದಸ್ಯರಾದ ಗೋಕುಲ್ ಗೋವರ್ಧನ್, ಹಿರಿಯಣ್ಣ, ಆನಂದ್, ರಾಮಪ್ರಸಾದ್, ಯತೀಶ್, ನವೀನ್, ರಮೇಶ್, ರಾಘವೇಂದ್ರ, ರವಿ, ಹರೀಶ್, ನಾರಾಯಣ್, ರವಿಕುಮಾರ್, ಉಮಾ, ಶಾಂತಮ್ಮ ಉಪಸ್ಥಿತರಿದ್ದರು.

ಉದ್ಯಮಿ ಮನೆಯಲ್ಲಿ 18 ಕೋಟಿ ಚಿನ್ನಾಭರಣ ಕದ್ದು ಮನೆಗೆಲಸದ ದಂಪತಿ ಪರಾರಿ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಮೆಗಾ ಕಳ್ಳತನ ನಡೆದಿದ್ದು, ಮನೆಗೆಲಸದ ದಂಪತಿ ಕೆಂಪಾಪುರ ಮುಖ್ಯ ರಸ್ತೆಯಲ್ಲಿರುವ ಉದ್ಯಮಿಯೊಬ್ಬರ ಮನೆಯಲ್ಲಿದ್ದ ಬರೋಬ್ಬರಿ 18 ಕೋಟಿ ರೂ. ಮೌಲ್ಯದ ಚಿನ್ನ, ಬೆಳ್ಳಿ ಮತ್ತು ವಜ್ರದ ಆಭರಣ ಹಾಗೂ ನಗದನ್ನು ಕದ್ದು ಪರಾರಿಯಾಗಿದ್ದಾರೆ.

ಆರೋಪಿಗಳನ್ನು, ಕಳ್ಳತನ ನಡೆಯುವ ಸುಮಾರು 20 ದಿನಗಳ ಮುನ್ನ ಮನೆ ಕೆಲಸ ಮಾಡುವ ಕೆಲಸಕ್ಕೆ ಸೇರಿದ್ದ ದಿನೇಶ್(32) ಮತ್ತು ಅವರ ಪತ್ನಿ ಕಮಲಾ(25) ಎಂದು ಗುರುತಿಸಲಾಗಿದ್ದು, ಪೊಲೀಸರು ಅವರ ಬಂಧನಕ್ಕೆ ಬಲೆ ಬೀಸಿದ್ದಾರೆ.

ಉದ್ಯಮಿ ಶಿಮಂತ್ ಎಸ್. ಅರ್ಜುನ್(28) ಭಾನುವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಸಂಬಂಧಿಕರೊಬ್ಬರ ಭೂಮಿ ಪೂಜೆಗೆ ತಮ್ಮ ಕುಟುಂಬದೊಂದಿಗೆ ಹೋಗಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆ ಅವರ ಮನೆಯಲ್ಲಿ ಕೆಲಸಕ್ಕಿದ್ದ ದಿನೇಶ್ ಮತ್ತು ಕಮಲಾ ಈ ಕೃತ್ಯ ಎಸಗಿದ್ದಾರೆ.

ಆರೋಪಿಗಳ ಬಂಧನಕ್ಕೆ ಹಲವು ತಂಡಗಳನ್ನು ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬಾಡಿಗೆಗೆ
600 ಚದರ ಅಡಿ ಆರ್‌ಸಿಸಿ ಗೋಡೌನ್ ಬಾಡಿಗೆಗೆ ಲಭ್ಯವಿದೆ. ನಿರ್ಮಲಾ ಆಸ್ಪತ್ರೆ ಹತ್ತಿರ, ರಿಂಗ್ ರೋಡ್, ಆಲನಹಳ್ಳಿ.
ಸಂಪರ್ಕಿಸಿ: 9964176349

ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತಲು ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಬೇಕಾಗಿದ್ದಾರೆ. ರೈಟಿಂಗ್ ಅಂಡ್ ಮೊಬೈಲ್ ಆಪರೇಟಿಂಗ್ ಬರಬೇಕು
8970944445
7019935825

HOUSE FOR SALE
30x40 East facing 4 BHK with attached bathrooms, 3 car parkings with lift option triplex house, near Andolana Circle, Ramakrishnanagar 'A' & 'B' Block is for sale.
9620607138
8105751169

Solar Water Heaters
Built for Modern Living
Jupiter Solar
Solar Water Heater SALES & SERVICE
20 ವರ್ಷಗಳ ವ್ಯಾರಂಟಿ
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ, ಅಕೌಂಟ್ಸ್ ನಿರ್ವಹಣೆಗಾಗಿ, ಬಿ.ಕಾಮ್ ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ. ಸಂಪರ್ಕಿಸಿ:
8073393505

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ, ಚಿನ್ನದ ಗುಣಮಟ್ಟದ ಆಧಾರದ ಮೇಲೆ ಕೊಂಡುಕೊಳ್ಳಲಾಗುತ್ತದೆ. ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಚಿನ್ನದ ದರ– 15000(24CT)
9108146123

RAI ESTATES
RERA APPROVED — MUDA APPROVED — E-KHATA
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

ಬೇಕಾಗಿದ್ದಾರೆ
1) ಡ್ರೈವರ್ಸ್ (Eicher)
2) ಸೂಪರ್ ವೈಸರ್ಸ್
9731356002
9606349136

FOR SALE
North facing commercial building (20x56) earning rent of 1.05 Lakh per month in East of Vishwa Manava Double Road, Near Vijaya Bank Circle, Kuvempunagar, Mysore, is for sale.
9620607138
8105751169

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9606838940

ಕೆಲಸಕ್ಕೆ ಬೇಕಾಗಿದ್ದಾರೆ
Aee Bee auto LPG gas ಬಂಕ್ ನೂತನವಾಗಿ ಪ್ರಾರಂಭವಾಗಿದೆ
ಸ್ಥಳ : ನಂಜುಮಳಿಗೆ ಸರ್ಕಲ್, ಮೈಸೂರು
ಆಕರ್ಷಕ ವೇತನದೊಂದಿಗೆ ಅನುಭವವುಳ್ಳ ಗ್ಯಾಸ್ ಫಿಲ್ಲಿಂಗ್ ಪುರುಷರು, ಕೂಡಲೇ ಬೇಕಾಗಿದ್ದಾರೆ.(ವಸತಿ ಸೌಲಭ್ಯವಿದೆ). ಸಂಪರ್ಕಿಸಿ
9035217205

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

UDYOGA MELA 2026
Only for senior citizens. Exclusively for 50+ age dt. 2-2-2026. Time: 10 am. Place: Sepoy Hotel, M.G. Road, Agrahara, Opp. JSS Hospital, Mysore.Required documents: Aadhar, Pan, 10th or above marks card, 1 photo, pass book, followed by hi-tea.
7022034200

WANTED
1) Electrician - 2 Nos.
2) Plumber - 2 Nos.
Walk-in interview @ The Quorum Hotel
The Quorum Hotel #2257/1, Vinoba Road, Mysore-570 005
9620274629
9035062106

SITE REQUIRED IN MYSORE
ದೇವನೂರ್ 3ನೇ ಹಂತ, ರಾಜೀವ್ ನಗರ, ಸಾತಗಳ್ಳಿ 'ಎ' ಜೋನ್, 'ಬಿ' ಜೋನ್, ಡಿಟಿಎಸ್ ರಾವ್ ನಗರ
30x40, 40x60, 50x80
ಓನರ್ ಸಂಪರ್ಕಿಸಿ:
7338648879
9741631851

HOUSE FOR SALE
30x40 N/F duplex house for sale at No. 419, 6th Main, 3rd Stage, Dattagalli, Mysuru.
9538072720

ಮನೆ ಬಾಡಿಗೆಗೆ ಇದೆ
20x30, 1ನೇ ಮಹಡಿ ಮನೆ (ಹಾಲ್, 1 ರೂಂ, ಅಟ್ಯಾಚ್ಡ್ ಬಾತ್ ರೂಂ) (Veg only) ರಾಮಕೃಷ್ಣನಗರ E & F ಬ್ಲಾಕ್, ಚರ್ಚ್ ಹಿಂಭಾಗ. (Brokers excuse).
9480733069

ಬೇಕಾಗಿದ್ದಾರೆ
* ಮಾರ್ಕೆಟಿಂಗ್ ಸೇಲ್ಸ್ ಎಕ್ಸಿಕ್ಯೂಟಿವ್
ಕೂಡಲೇ ಸಂಪರ್ಕಿಸಿ 9743647484
* ಅಕೌಂಟ್ ಅಸಿಸ್ಟೆಂಟ್ (within 3 years experience)
* ಡೇಟಾ ಎಂಟ್ರಿ ಆಪರೇಟರ್ (within 1 year experience)
ಕೂಡಲೇ ಸಂಪರ್ಕಿಸಿ 7892930047

ಬೇಕಾಗಿದ್ದಾರೆ
ಕೊಡಗು ಜಿಲ್ಲಾದ್ಯಂತ ಬ್ಯಾಂಕ್ ವೆರಿಫಿಕೇಶನ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಅನಿಲ್: 7026996123
ಶೇಖರ್: 9739343495

GIFTS ON NEW YEAR SALE
30x40 Sites Near RT Nagar BSNL Layout
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road.
2 & 3 BHK Apartments @ Ramakrishna Ngr
Commercial Properties Also Available
PRAKRUTHI PROPERTIES
95386 90359, 90359 90359

ಸಂಪು ಹಾಗೂ ಟ್ಯಾಂಕ್ ಕ್ಲೀನಿಂಗ್ ಮತ್ತು ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ
Mob: 9964733988

FOR SALE
20x30 Properties @ Kuvempu Nagar
40x60 Commercial Property @ Srirampura 80ft Road
20X30 NEW DUPLEX HOUSE @ BALAJI ENCLAVE, UTTANAHALLI
Duplex House Near Vijaya Nagar 4th Stage
Properties @ Dattgalli
PRAKRUTHI PROPERTIES
95386 90359, 90359 90359

HOUSE FOR LEASE
Newly built ground floor East face, 2 BHK 30x40. Rs. 16 Lakhs, Negotiable. 2nd Main Road, Omkar Layout, J.P. Nagar, Mysore-31
9945891131
6364675668

WANTED
To run an Educational and charitable trust need 30x40 / 40x60 site / house, 50x80 / 100x100 vacant land
10 guntas / 20 guntas / 1 acre land.
9945987977

ಪ್ರಗತಿ ವಧು–ವರರ ಅನ್ವೇಷಣೆ(ರಿ)
Reg No: DRMY/SOR/195
ಕಾವೇರಿ ಸರ್ಕಲ್, ಡಾ|| ರಾಜ್‌ಕುಮಾರ್ ರೋಡ್, ಯರಗನಹಳ್ಳಿ, ಶಕ್ತಿನಗರ, ಮೈಸೂರು, ನಮ್ಮಲ್ಲಿ ಕುರುಬ, ಒಕ್ಕಲಿಗ, ಲಿಂಗಾಯತ, ಆದಿಕರ್ನಾಟಕ, ಕ್ರಿಶ್ಚಿಯನ್ ಹಾಗೂ ಎರಡನೇ ವಿವಾಹ ಸಂಬಂಧ ಕೂಡ ಮಾಡಿಕೊಡುತ್ತೇವೆ.
9844396822
8105974815

ತಕ್ಷಣ ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನಲ್ಲಿರುವ Govt. Retd. A.W. Group of ಕಂಪನಿಗೆ ಹುದ್ದೆಗಳಿಗೆ Freshers + Experience ಆದ 194 ಕನ್ನಡ ಬಲ್ಲ ಅಭ್ಯರ್ಥಿಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, PUC, ITI, Any degree
ವಯೋಮಿತಿ : 18 to 34 Years
ತಿಂಗಳಿಗೆ : 21,500 - 27,000 (ಉಚಿತ ಊಟ + ವಸತಿಯೊಂದಿಗೆ) ಸ್ಯಾಲರಿ
9886479849 / 7349699460

ಕೆಲಸಕ್ಕೆ ಬೇಕಾಗಿದ್ದಾರೆ ಸೆಕ್ಯುರಿಟಿ ಗಾರ್ಡ್ (ಪುರುಷರು)
ಇನ್ಫೋಸಿಸ್ ಹತ್ತಿರ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ದಟ್ಟಗಳ್ಳಿ, ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಕೂರ್ಗಳ್ಳಿ, Hootagalli, ವಿಜಯನಗರ 3rd Stage, ಗೋಕುಲಂ ಮತ್ತು ಮೈಸೂರು ಸುತ್ತಮುತ್ತ ಬೇಕಾಗಿದ್ದಾರೆ
Mob: 83174 75912

ಬೇಕಾಗಿದ್ದಾರೆ
ನಮ್ಮ ನಾಟಿ ನಾನ್‌ವೆಜ್ ಸ್ಟೈಲ್ ಫುಡ್ ಟ್ರಕ್‌ಗೆ ಕೆಲಸದ ಖಾಲಿ ಹುದ್ದೆಗಳು ಇವೆ. ಸಂಜೆ: 5:00 PM - 11:00 PM. ಸ್ತ್ರೀ ಹಾಗೂ ಪುರುಷರು (ವಯಸ್ಸು 20 ರಿಂದ 35ವರ್ಷ) ಇಬ್ಬರೂ ಅರ್ಜಿ ಹಾಕಬಹುದು. ಉತ್ತಮ ವೇತನ ನೀಡಲಾಗುತ್ತದೆ. ಫುಡ್ ಟ್ರಕ್ ಓಡಿಸಲು ಡ್ರೈವರ್‌ಗಳು ಬೇಕಾಗಿದ್ದಾರೆ. ಆಸಕ್ತ ಅಭ್ಯರ್ಥಿಗಳು ದಯವಿಟ್ಟು ಸಂಪರ್ಕಿಸಿ:
Mob: 7019600596

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಸುವ್ಯವಸ್ಥಿತ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಅಡುಗೆ ಭಟ್ರು (South Chef), ಅಸಿಸ್ಟೆಂಟ್ ಕುಕ್, ಕೌಂಟರ್ / ಫುಡ್ ಪ್ಯಾಕಿಂಗ್, ಕ್ಲೀನಿಂಗ್ / ವಾಷಿಂಗ್, ಚಾಟ್ ಮಾಸ್ಟರ್, ಸಪ್ಲೈಯರ್ (ವೈಟರ್).
Mob: 7338392631

Houses & Office Space for Rent
@ Kuvempunagar, Saraswathipuram & surroundings.
Mob: 93421-25252

Properties for Sale
@ Jayanagar, Kuvempunagar, Gokulam & surroundings.
Mob: 93421-25252

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಪ್ಯಾಕಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
(PART TIME / FULL TIME)
ಕುವೆಂಪುನಗರ ಸುತ್ತ ಇರುವವರಿಗೆ ಮಾತ್ರ
9535370330

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದಲ್ಲಿ ವಾಸವಾಗಿರುವ ಕುಟುಂಬಕ್ಕೆ 50 ವರ್ಷದ ಒಳಗೆ ಇರುವ ಮಹಿಳೆ ಮನೆ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು. ಬೆಳಿಗ್ಗೆ 8.30 ರಿಂದ 12.30 ಗಂಟೆ ತನಕ, ಕೂಡಲೇ ಸಂಪರ್ಕಿಸಿ:
9845131318
9880643198

ಉದ್ಯೋಗಾವಕಾಶ
ಮಹಿಳಾ ಸಿಬ್ಬಂದಿಗಳು ಬೇಕಾಗಿದ್ದಾರೆ. ಹಗಲು, ರಾತ್ರಿ ಪಾಳಿ ಹಾಗೂ ಅಲ್ಲೇ ಉಳಿದುಕೊಂಡು ಕೆಲಸ ಮಾಡುವುದು, ಊಟ, ವಸತಿ, ಇಎಸ್‌ಐ, ಪಿಎಫ್ ಮತ್ತು ಸ್ಪರ್ಧಾತ್ಮಕ ಮಾಸಿಕ ವೇತನ ನೀಡಲಾಗುತ್ತದೆ
ಸಂಪರ್ಕಿಸಿ: 97416 37711, 9606714441, 0821-4242351

ಬೇಕಾಗಿದ್ದಾರೆ
ಹೂಟಗಳ್ಳಿ–ಕೆ.ಆರ್. ಆಸ್ಪತ್ರೆ ಹತ್ತಿರ–ಫಾಲ್ಕನ್ ಟೈಯರ್ ಫ್ಯಾಕ್ಟರಿ ಹತ್ತಿರ, ಇನ್ಫೋಸಿಸ್ ಹಿಂಭಾಗ ಹಾಗೂ ನಗರ ಸುತ್ತಮುತ್ತಲಿನ ಪ್ರದೇಶಗಳಿಗೆ ಸೆಕ್ಯೂರಿಟಿ ಗಾರ್ಡ್ + ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಲೈಸೆನ್ಸ್ಡ್ ಗನ್‌ಮ್ಯಾನ್‌ಗಳು ಬೇಕಾಗಿದ್ದಾರೆ. ಮೊದಲು ಬಂದವರಿಗೆ ಆದ್ಯತೆ.
(ವಸತಿ + ESI+ PF + W/o) ಇರುತ್ತದೆ.
9632049421

WANTED
FEMALE OFFICE ASSISTANT TO OUR AUDIT OFFICE -1 POST
Education Qualification PUC plus Computer Knowledge is Essential preperable to Hebbal Surroundings Area.
9740285064
Address : Nagarajegowda, M.Com(CA) Auditor & Tax Consultant, No. 240, 2nd Floor, Vijayanagar -Railway Colony Main Road, Near Surya Bakery, Hebbal, Mysore-16

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಶೋರೂಮ್ ಹಾಗೂ ಬೈಕ್ ಶೋರೂಮ್‌ಗಳಿಗೆ, CASHIER, BILLING, RECEPTIONIST, HR, ADMIN, ACCOUNTANT ETC, ಕೆಲಸಕ್ಕೆ ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ.
EDUCATION SSLC, PUC, ITI, DIPLOMA, DEGREE. SALARY (18k -38k)
Contact: 6366718368
9632659609, 7899627704

MYSURU RETINA CARE STAFF REQUIRED
[FRESHER OR EXPERIENCE]
1. OPTOMETRIST,
2. RECEPTIONIST,
3. OT STAFF,
CONTACT NUMBER
7338369364/ 0821-2543244
#22A, SRI GURU KRUPAM, 1ST FLOOR, ABOVE ANANTHAM CAFE, NIVEDITHA NAGAR, MYSORE-570022,

ಸೈಟು/ಮನೆಗಳು ಮಾರಾಟಕ್ಕಿದೆ
30x40. 3 ಅಂತಸ್ತಿನ ಮನೆ GF 2 BHK 1ನೇ ಮಹಡಿ 2ನೇ ಮಹಡಿ Duplex ಶಾರದಾದೇವಿನಗರ
CFTRI ಲೇಔಟ್ ಸ್ವಂತಕ್ಕೆ ಕಟ್ಟಿರುವ ಮನೆ
MUDA 20x30 3 BHK Duplex House ಲಲಿತಾದ್ರಿನಗರ ಮೈಸೂರು
Site 40x60 ಲಿಂಗಾಂಬುದಿ ಪಾಳ್ಯ R.T. Nagar ನೇಸರ ಲೇಔಟ್
9448938989
7892035789

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸುತ್ತದೆ.
9448229184
7899625268

ಕಳೆದು ಹೋಗಿದೆ
ಮನೆ ನಂ 86, ಎಂಐಜಿ ದಟ್ಟಗಳ್ಳಿ 2ನೇ ಹಂತ, ಮೈಸೂರು. ಡಾ. ಲಾಲ್ಲೆ ಸುರೇಶ್ ನಾರಾಯಣ ರಾವ್ ರವರ ಪ್ರಾಪರ್ಟಿ ಸ್ವಾಧೀನ ಪತ್ರ ಕಳೆದುಹೋಗಿರುತ್ತದೆ. ಕುವೆಂಪುನಗರದ ಬಸ್ ಸ್ಟ್ಯಾಂಡ್ ಬಳಿ ಕಳೆದುಹೋಗಿರುತ್ತದೆ. ಸಿಕ್ಕವರು ಸಂಪರ್ಕಿಸಿ
PH: 9611509551

SHAHI EXPORTS PVT. LTD. ತಕ್ಷಣ ಬೇಕಾಗಿದ್ದಾರೆ
7th , SSLC, PUC / ITI / degree ಪಾಸ್ / ಫೇಲ್ ಆಗಿರುವ, General ಹಾಗೂ ಶಿಫ್ಟ್‌ನಲ್ಲಿ ಕೆಲಸ ಮಾಡಲು ಆಸಕ್ತಿ ಇರುವ ಮಹಿಳೆಯರಿಗೆ / ಪುರುಷರಿಗೆ ಕೆಲಸದ ಅವಕಾಶವಿದೆ. ಆಕರ್ಷಕ ಸಂಬಳ 15,000 ರಿಂದ 40,000 ಸಾವಿರವರೆಗೆ. ಕೂಡಲೇ ಸಂಪರ್ಕಿಸಿ:
8618181051
9019941018

ಬೇಕಾಗಿದ್ದಾರೆ
1. ಸೂಪರ್‌ವೈಸರ್, 2. ರಿಸೆಪ್ಷನಿಸ್ಟ್, 3. ಪಾರ್ಟ್‌ಟೈಮ್ ಹುಡುಗರು. ಸಂಜೆ 6 ರಿಂದ 10 ಗಂಟೆಗೆ. ಖುದ್ದಾಗಿ ಸಂಪರ್ಕಿಸಿ, ಹೆಲ್ತ್ ಸಿಟಿ, ಪಿ.ಕೆ. ಆಚಾರ್ಯ ಸಭಾಭವನ ಪಕ್ಕ, ರಿಂಗ್ ರಸ್ತೆ, ದಟ್ಟಗಳ್ಳಿ, ಮೈಸೂರು.
7975356711
9108039302

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ – ಸಿದ್ಧಾರ್ಥ ಲೇಔಟ್ ದಕ್ಷಿಣ ಭಾರತೀಯ ಶೈಲಿ,
1. ಅಡುಗೆ ಭಟ್ಟರು,
2. ಸರ್ವಿಸ್ ಕೌಂಟರ್ ಹುಡುಗರು,
3. ಕಾಫೀ ಕೌಂಟರ್ ಹುಡುಗರು
ಸಂಪರ್ಕಿಸಿ: 9945253425

AR HOLIDAYS 4 ದಿನಗಳ
ಕೇರಳ ದೇವಸ್ಥಾನ ಪ್ಯಾಕೇಜ್ ಟ್ರಿಪ್ (ದಿನಾಂಕ– 16 ರಿಂದ ಫೆಬ್ರವರಿ 19ರವರೆಗೆ)
* ಗುರುವಾಯೂರ್ * ತ್ರಿಶೂರ್ * ಜಟಾಯು * ವರ್ಕಳ * ತ್ರಿವೇಂಡ್ರಂ
(ಒಟ್ಟು 12+ ಸ್ಥಳ) ಕೇವಲ ರೂ.6299 ಮಾತ್ರ, (ಸಾರಿಗೆ, ಆಹಾರ, ಕೊಠಡಿಗಳು ಸೇರಿವೆ), ಪಿಕಪ್–ಬೆಂಗಳೂರು, ಮಂಡ್ಯ, ಮೈಸೂರು
ಸಂಪರ್ಕಿಸಿ– 6362916014

ಪ್ರವಾಸ
* 9 ದಿನಗಳ ರಾಜಸ್ಥಾನ್ ಪ್ರವಾಸ 5/3/26
* 4 ದಿನಗಳ ಕಾಶಿ 6/2/26
* 9 ದಿನಗಳ ಅಯೋಧ್ಯ ಮತ್ತು ನೇಪಾಳ ಪ್ರವಾಸ 18/2/26
ಸುವರ್ಣ ಯಾತ್ರಾ
6360146483
9019462508

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಯಾಷಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ
ಸಮಯ : 8 ರಿಂದ 4 ರವರೆಗೆ
ವಿಳಾಸ : ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ & ಹೌಸ್‌ಕೀಪಿಂಗ್ ಮಹಿಳೆಯರು ಹಾಗೂ SSLC & ITI ಓದಿರುವ ಹುಡುಗರು ಫ್ಯಾಕ್ಟರಿ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: ಮೈಸೂರು.
Contact : 8792537093
7676948164, 9900747093

ಶೆಡ್ ಬಾಡಿಗೆಗೆ ಇದೆ
ಬೆಳವಾಡಿ ಇಂಡಸ್ಟ್ರಿಯಲ್ ಏರಿಯಾ ಜಾಕಿ ಫ್ಯಾಕ್ಟರಿ ಹಿಂಭಾಗ, ಹುಣಸೂರು ರಸ್ತೆ. ಶೆಡ್ ಅಳತೆ 100x40.
9900259292

ಬೇಕಾಗಿದ್ದಾರೆ
ಮಡಿಕೇರಿ–ಮಂಗಳೂರು ಹಾಗೂ ಮಡಿಕೇರಿ– ಮೈಸೂರು ಮಾರ್ಗಗಳಲ್ಲಿ ಪ್ರತಿ ನಿತ್ಯ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ಓದು ಬರಹ ತಿಳಿದಿರುವ ಯುವಕರು ಬೇಕಾಗಿದ್ದಾರೆ. ಡೆಲಿವರಿ ಬಾಯ್ ಆರಂಭಿಕ ವೇತನ 16000+ಲೋಡಿಂಗ್ ಚಾರ್ಜ್, ಮಿನಿ ಟೆಂಪೋ ಡ್ರೈವರ್ 19,000, ಲಾರಿ ಡ್ರೈವರ್‌ಗೆ ಆರಂಭಿಕ ವೇತನ 21,000. ಪ್ರತಿ ಭಾನುವಾರ ರಜೆ.
9740408488

S.K. CONSTRUCTION ಕೆಲಸಕ್ಕೆ ಬೇಕಾಗಿದ್ದಾರೆ
Office Attender ಕೆಲಸಕ್ಕೆ
Salary: Rs. 10,000.
8904202804

SITE FOR SALE
40x60 E/F MUDA Auction site @ Vijayanagar 4th Stage, 1st Phase. 30x40 House for sale @ Vijayanagar 2nd Stage, 100x55 E/F @ Vijayanagar 4th Stage, 2nd Phase, 80 ft. road.
9986773639
9980039509

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸಲ್ ಹೋಟೆಲ್‌ಗೆ
ಕಿಚನ್ ಹೆಲ್ಪರ್ – 13000/–
ಹಿಟ್ಟು ಕಲಸುವವರು – 14000/–
ಚಪಾತಿ ಬೇಯಿಸುವವರು – 15000/–
ಸಂಬಳದೊಂದಿಗೆ ಊಟ, ವಸತಿ ಉಚಿತ
ಸಮಯ : ಬೆಳಗ್ಗೆ 9.30 ರಿಂದ 3 ಗಂಟೆ ಸಾಯಂಕಾಲ 5.30 ರಿಂದ 10 ಗಂಟೆಗೆ
7204404170

ಬೇಕಾಗಿದ್ದಾರೆ
A) ಸೆಕ್ಯೂರಿಟಿ ಗಾರ್ಡುಗಳು
1) ಕೆಆರ್‌ಎಸ್ ರಸ್ತೆ(ಹುಲಿಕೆರೆ)
2) ಪಂಪ್‌ಹೌಸ್
3) ಸಿಟಿ ಸುತ್ತಮುತ್ತ(ಮೈಸೂರು)
B) ಮಾರ್ಕೆಟಿಂಗ್ ಆಫೀಸರ್ (ಸೆಕ್ಯೂರಿಟಿ ಫೀಲ್ಡ್)
9686422400
9242406261

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, 10th, PUC, Diploma, any Degree pass or fail ಹಾಗೂ front office ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 15000 ರಿಂದ 30000ರ ವರಗೆ. ವಿ.ಸೂ: ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ age below 35. Years. Android Mobile ಹಾಗೂ Two wheeler ಇರಬೇಕು.
ಸಂಪರ್ಕಿಸಿ: ಭರತ್ ಕುಮಾರ್
Mob: 9880151303

HOUSE FOR SALE
20x30 ground and first floor, well maintained house, near Madegowda Circle, Rajeev Nagar, Mysore.
BROKERS EXCUSE
Mob: 9900251774

WANTED
WARDEN CUM CLERK FOR VISHWAKARMA HOSTEL, MYSORE
Age limit: 20-50 years.
Preference given for Vishwakarma caste.
9880777103, 9901239071

'R' ರಿಯಲ್ ಎಸ್ಟೇಟ್
ಸೈಟುಗಳನ್ನು ಕೊಳ್ಳಲು / ಮಾರಲು ಸೈಟುಗಳು ಮಾರಾಟಕ್ಕಿದೆ.
30x30, 30x40 & 40x60
Mob: 9538412881

ನಿವೇಶನ ಮಾರಾಟಕ್ಕಿದೆ
40x60 ಅಳತೆಯ ದಕ್ಷಿಣ ದಿಕ್ಕಿನ ಖಾಲಿ ನಿವೇಶನ, ಶ್ರೀರಾಂಪುರ, ಮೈಸೂರು.
9739703467, 9686895205

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ದೇವೇಗೌಡ ಸರ್ಕಲ್ ಹತ್ತಿರ ಇರುವ ಕ್ಯಾಂಟೀನ್‌ನಲ್ಲಿ ಕ್ಯಾಷಿಯರ್ ಆಗಿ ಕಾರ್ಯನಿರ್ವಹಿಸಲು ಸಿಟಿ ಸುತ್ತಮುತ್ತ ಇರುವ ಮಹಿಳೆಯರು ಬೇಕಾಗಿದ್ದಾರೆ.
* 3 ರಿಂದ 5 ವರ್ಷ ಅನುಭವವುಳ್ಳ ಮತ್ತು ದ್ವಿಚಕ್ರ ವಾಹನವುಳ್ಳವರಿಗೆ ಮೊದಲ ಆದ್ಯತೆ. ವಯಸ್ಸು 20 ರಿಂದ 40, ಸಂಪರ್ಕಿಸಿ.
7795525899
7338676999

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಫೀಲ್ಡ್‌ನಲ್ಲಿ ಅನುಭವವುಳ್ಳ ಸೆಕ್ಯೂರಿಟಿ ಫೀಲ್ಡ್ ಆಫೀಸರ್ಸ್, ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಹೌಸ್ ಕೀಪಿಂಗ್‌ನಲ್ಲಿ ಅನುಭವವುಳ್ಳ ಮಹಿಳೆಯರು ಹಾಗೂ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ
0821-2334785

ತಕ್ಷಣ ಬೇಕಾಗಿದ್ದಾರೆ
ವರ್ಕ್ ಫ್ರಮ್ ಹೋಮ್ ಕೆಲಸಕ್ಕೆ ವಿದ್ಯಾರ್ಥಿಗಳಿಗೆ & ಪುರುಷರಿಗೆ ಹಾಗೂ ಮಹಿಳೆಯರಿಗೆ ಮೊದಲ ಆದ್ಯತೆ (ಮನೆಯಿಂದಲೇ ಕೆಲಸ)
7th, 10th, PUC, Any Degree ಪಾಸ್ ಫೇಲ್ ಆದವರು, ಸಂಪರ್ಕಿಸಿ HR.
9964311522

ವಧು ಬೇಕಾಗಿದ್ದಾರೆ
ಇಂಜಿನಿಯರ್ 30, ಬ್ರಾಹ್ಮಣ ವರನಿಗೆ ಸಸ್ಯಾಹಾರಿ ವಧು ಬೇಕಾಗಿದೆ. ಮದುವೆ ಮತ್ತು ಇತರೆ ಖರ್ಚುಗಳನ್ನು ಭರಿಸಲಾಗುವುದು.
8431597521

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಮತ್ತು ಫೀಲ್ಡ್ ಆಫೀಸರ್ ಹುದ್ದೆಗಳಿಗೆ ಗಂಡಸರು ಬೇಕಾಗಿದ್ದಾರೆ. ಕೆ.ಆರ್.ಎಸ್, ಮೇಟಗಳ್ಳಿ, ಹೂಟ್ಟಗಳ್ಳಿ, ಕೂರ್ಗಹಳ್ಳಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. (ಇ.ಎಸ್.ಐ ಮತ್ತು ಪಿ.ಎಫ್)ಸೌಲಭ್ಯ ಇದೆ. ಸ್ಕ್ವಾಡ್ರನ್ ಸೆಕ್ಯೂರಿಟಿ – ಮೆನ್ ಪವರ್ ಸರ್ವಿಸ್ #221, 6th ಕ್ರಾಸ್, ಮಹಾದೇಶ್ವರ ಬಡಾವಣೆ, ತ್ರಿನೇತ್ರ ಸರ್ಕಲ್, ಹೆಬ್ಬಾಳ್ ಮೈಸೂರು–570016
Contact- 6360523675/ 9686553206/ 8197269895

ಹೆಸರು ಬದಲಾವಣೆ
ಮೈಸೂರು ಜಿಲ್ಲೆ, ಹಿರಿಯಾಪಟ್ಟಣ ತಾಲ್ಲೂಕು, ರಾವಂದೂರು ಹೋಬಳಿ, ಹಿಟ್ಟಿಹೆಬ್ಬಾಗಿಲು ಗ್ರಾಮದ ಲಕ್ಷ್ಮಮ್ಮ ರವರ ಮಗನಾದ ಸುನೀಲ್‌ಕುಮಾರ್.ಹೆಚ್.ಎಲ್ ಆದ ನಾನು ತಿಳಿಸುವುದೇನೆಂದರೆ, ನಾನು ನನ್ನ ಮಗಳ ಹೆಸರಿನಲ್ಲಿ ಹಿಟ್ಟೆ ಹೆಬ್ಬಾಗಿಲು ಅಂಚೆ ಕಛೇರಿಯಲ್ಲಿ ಸುಕನ್ಯಾ ಸಮೃದ್ಧಿ ಯೋಜನೆಯಡಿ (ಖಾತೆ ಸಂ. 4859723127)ಯಲ್ಲಿ ನನ್ನ ಮಗಳ ಹೆಸರಿನಲ್ಲಿ ಖಾತೆಯನ್ನು ತೆರೆಯುವ ಸಂದರ್ಭದಲ್ಲಿ ನನ್ನ ಮಗಳ ಹೆಸರು ವಿಸ್ಮಯ.ಹೆಚ್.ಎಸ್ ಎಂದು ನಮೂದು ಮಾಡಿಸಿರುತ್ತೇವೆ. ಆಧಾರ್ ಕಾರ್ಡ್, ಜನನ ಧೃಡೀಕರಣ ಪತ್ರ, ಶಾಲಾ ದಾಖಲಾತಿ ಹಾಗೂ ಇತರ ದಾಖಲಾತಿಗಳಲ್ಲಿ ವಿನುತ.ಎಸ್ ಎಂದು ತಿದ್ದುಪಡಿ ಮಾಡಿಸಿದ್ದು, ನನ್ನ ಮಗಳ ಹೆಸರನ್ನು ವಿಸ್ಮಯ.ಹೆಚ್.ಎಸ್ ಎಂಬುವುದರ ಬದಲಾಗಿ ವಿನುತ.ಎಸ್ ಎಂದು ಬದಲಾಯಿಸಿ, ನೋಟರಿ ಕೆ.ಎ. ಸಣ್ಣೇಗೌಡ ಅವರ ಮುಂದೆ ಪ್ರಮಾಣೀಕರಿಸಿರುತ್ತೇನೆ.
ಸಹಿ/– ಸುನೀಲ್‌ಕುಮಾರ್.ಹೆಚ್.ಎಲ್

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ನಾವು ಕ್ಷೇತ್ರಕ್ಕೆ ಬರ್ತಿಲ್ಲ ಅಂತ ನಿರ್ಲಕ್ಷ್ಯ ಮಾಡಿದರೆ ಕ್ರಮ ಖಚಿತ

ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಸಂಸದ ಸುನೀಲ್ ಬೋಸ್ ಎಚ್ಚರಿಕೆ

ತಿ.ನರಸೀಪುರ, ಜ.28 ಕೆಲಸದ ಒತ್ತಡದ ಹಿನ್ನೆಲೆಯಲ್ಲಿ ನಾನಾಗಲಿ ನಮ್ಮ ತಂದೆಯವರಾಗಲಿ ಕ್ಷೇತ್ರಕ್ಕೆ ಹೆಚ್ಚಾಗಿ ಭೇಟಿ ನೀಡಲು ಸಾಧ್ಯವಾಗುತ್ತಿಲ್ಲ.ಇದನ್ನೇ ಬಂಡವಾಳ ಮಾಡಿಕೊಂಡು ಅಧಿಕಾರಿಗಳು ತಾವು ಮಾಡುವ ಕೆಲಸದಲ್ಲಿ ನಿರ್ಲಕ್ಷ್ಯ ವಹಿಸಿದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಸಂಸದ ಸುನೀಲ್ ಬೋಸ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಬುಧವಾರ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಭಾಗವಹಿಸಿ ಸಮರ್ಪಕವಾದ ಮಾಹಿತಿ ನೀಡದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, ನಾವು ಕ್ಷೇತ್ರಕ್ಕೆ ಬರ್ತಾ ಇಲ್ಲ ಅಂತ ನಿರ್ಲಕ್ಷ್ಯ ಮಾಡಿದ್ರೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಕ್ಷೇತ್ರಕ್ಕೆ ನನ್ನ ಹಾಗೂ ತಂದೆಯ ಭೇಟಿ ಕಡಿಮೆಯಾಗಿರಬಹುದು. ಆದರೆ, ಕ್ಷೇತ್ರದ ಅಭಿವೃದ್ಧಿಗೆ ಬೇಕಾದ ಅನುದಾನ ಬಿಡುಗಡೆ ಮಾಡಿಕೊಡುತ್ತಿದ್ದೇವೆ. ಅಧಿಕಾರಿಗಳು ಅಭಿವೃದ್ಧಿ ಕಾಮಗಾರಿಗಳಿಗೆ ಸಮರ್ಪಕವಾದ ರೀತಿಯಲ್ಲಿ ಅನುದಾನ ಸದ್ಬಳಕೆ ಮಾಡಿಕೊಳ್ಳಬೇಕು.

ನಿಂದು ಅತಿಯಾಯ್ತು..., ಹೋಗಿ ದನ ಮೇಯ್ಸು

ಪುರಸಭೆ ಸಭಾಂಗಣಕ್ಕೆ ಎಂಟ್ರಿ ಆಗುತ್ತಿದ್ದಂತೆ ಬನ್ನೂರು ಪುರಸಭೆ ಸದಸ್ಯರಿಂದ ಮಾಹಿತಿ ಪಡೆದು ಪುರಸಭೆ ಸಿಇಓ ಹೇಮಂತ್ ರಾಜು ಅವರನ್ನು ತೀವ್ರವಾಗಿ ತರಾಟೆ ತೆಗೆದುಕೊಂಡ ಸಂಸದರು ನಿನಗಿಷ್ಟ ಬಂದವರಿಗೆ ಲ್ಯಾಪ್‌ಟಾಪ್ ನೀಡಿದ್ದೀಯ. ನಿನಗೆ ಲ್ಯಾಪ್ ಟಾಪ್ ವಿತರಣೆ ಮಾಡಲು ಹೇಳಿದ್ದು ಯಾರು? ಯಾರನ್ನು ಕೇಳಿ ವಿತರಣೆ ಮಾಡಿದ್ದೀಯ, ಶಿಷ್ಟಾಚಾರ ಪಾಲನೆ ಮಾಡಿದ್ದೀಯ ಎಂದು ಏರು ದನಿಯಲ್ಲಿ ಪ್ರಶ್ನಿಸಿದರು. ಇದರಿಂದ ಸ್ವಲ್ಪ ವಿಚಲಿತರಾದ ಹೇಮಂತ್ ರಾಜು, ಸಾರ್ ನಾನು ಯಾವುದೇ ತಪ್ಪು ಮಾಡಿಲ್ಲ. ಅಧ್ಯಕ್ಷರು ಹಾಗೂ ಪುರಸಭೆ ಸದಸ್ಯರು ಸೇರಿ ಕಾರ್ಯಕ್ರಮ ಮಾಡಿಕೊಂಡಿದ್ದಾರೆ. ನಾನು ಅವರಿಗೆ ಹೇಳಿದರೂ ಅವರು ನಮಗೆ ಕೋರಂ ಇದೆ ಎಂದು ಹೇಳಿ ವಿತರಣೆ ಮಾಡಿದ್ದಾರೆ. ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಲಾದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ ನನ್ನದೇನೂ ತಪ್ಪಿಲ್ಲ, ಲ್ಯಾಪ್‌ಟಾಪ್ ವಿತರಣೆ ವೇಳೆ ನಾನು ಅಲ್ಲಿರಲಿಲ್ಲ, ಬೆಂಗಳೂರಿನಲ್ಲಿದ್ದೆ ಎಂದರು. ಇದರಿಂದ ಮತ್ತಷ್ಟು ಕೆರಳಿದ ಸಂಸದರು ಈ ಬಗ್ಗೆ ನೀನೇನು ಕ್ರಮ ತೆಗೆದುಕೊಂಡಿದ್ದೀಯ, ಪ್ರೋಟೋಕಾಲ್‌ನಲ್ಲಿ ಶಾಸಕರು ಬರೋದಿಲ್ಲವೇನು, ನೀ ಏನು ಚೀಫ್ ಆಫೀಸರ್ರ, ನಿಂದು ಅತಿಯಾಯ್ತು ಹೋಗಿ ದನ ಮೇಯಿಸು ಎಂದು ಕಿಡಿಕಾರಿ ನಿನ್ನನ್ನು ಸಸ್ಪೆಂಡ್ ಮಾಡಿಸುತ್ತೇನೆ ಎಂದು ಗುಡುಗಿದರು.

ನಾವು ಕ್ಷೇತ್ರಕ್ಕೆ ಭೇಟಿ ನೀಡುತ್ತಿಲ್ಲ. ನಾವಾಡಿದ್ದೇ ಆಟ ಎಂದು ಅಧಿಕಾರಿಗಳು ಮಾಡಬೇಕಾದ ಕೆಲಸದ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಪರಿಣಾಮ ಎದುರಿಸಬೇಕಾಗುತ್ತದೆ. ನಮಗೆ ಕ್ಷೇತ್ರಕ್ಕೆ ಹೆಚ್ಚಿನ ಸಮಯ ಭೇಟಿ ನೀಡಲು ಸಾಧ್ಯವಾಗದಿರಬಹುದು, ಆದರೆ ಅಧಿಕಾರಿಗಳ ಕಾರ್ಯ ವೈಖರಿ ಬಗ್ಗೆ ಮಾಹಿತಿ ಕಲೆ ಹಾಕುತ್ತೇವೆ, ಬಿಡುಗಡೆಯಾಗಿರುವ ಅನುದಾನದ ಸದ್ಬಳಕೆ ಆಗಬೇಕು. ನಮ್ಮ ಅನುಪಸ್ಥಿತಿಯಲ್ಲಿ ನಾವು ನಿಯೋಜಿಸಲಾದ ವ್ಯಕ್ತಿಗೆ ಎಲ್ಲ ಮಾಹಿತಿಗಳನ್ನು ಕಾಲಕಾಲಕ್ಕೆ ನೀಡಬೇಕು ಎಂದು ತಿಳಿಸಿದರು.

ಮಧ್ಯವರ್ತಿಗಳದ್ದೇ ಕಾರುಬಾರು: ತಾಲೂಕು ಕಚೇರಿಯಲ್ಲಿ ಮಧ್ಯವರ್ತಿಗಳಿಲ್ಲದೇ ಯಾವುದೇ ಕೆಲಸಗಳು ನಡೆಯುತ್ತಿಲ್ಲ ಎಂಬ ಬಗ್ಗೆ ದೂರು ಕೇಳಿ ಬಂದಿದೆ. ಇದನ್ನು ನಿಯಂತ್ರಿಸಲು ತಹಸೀಲ್ದಾರ್ ಕ್ರಮ ತೆಗೆದುಕೊಳ್ಳಬೇಕು. ಸಾರ್ವಜನಿಕರು ನೇರವಾಗಿ ಬಂದು ತಮ್ಮ ಕೆಲಸ ಕಾರ್ಯ ಮಾಡಿಕೊಂಡು ಹೋಗುವ ವಾತಾವರಣ ನಿರ್ಮಾಣ ಮಾಡಬೇಕು. ಮಧ್ಯವರ್ತಿಗಳ ಅನುಪಸ್ಥಿತಿಯಲ್ಲಿಯೂ ಸಾರ್ವಜನಿಕರು ಯಾವುದೇ ಲಂಚ ನೀಡದೆ ನಿರಾಳವಾಗಿ ತಮ್ಮ ಕೆಲಸ ಮಾಡಿಸಿಕೊಳ್ಳುವ ಪರಿಸ್ಥಿತಿ ಬರಬೇಕೆಂದು ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಅವರಿಗೆ ಸೂಚಿಸಿದರು.

ಅಧಿಕಾರಿಗಳ ಎತ್ತುಗಡಿ: ಒಂದೇ ಸ್ಥಳದಲ್ಲಿ ಎರಡು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಪಟ್ಟಿ ಮಾಡಿ ಅವರ ವರ್ಗಾವಣೆಗೆ ಕ್ರಮ ಕೈಗೊಳ್ಳಲು ಚಿಂತನೆ ನಡೆಸಲಾಗುತ್ತಿದೆ. ಆದರೆ ಉತ್ತಮವಾಗಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಸಹ ತಾಲೂಕಿನಲ್ಲಿದ್ದರೆ ಅಂತಹ ಪ್ರಾಮಾಣಿಕ ಅಧಿಕಾರಿಗಳನ್ನು ಇಲ್ಲಿಯೇ ಉಳಿಸಿಕೊಳ್ಳಲಾಗುತ್ತದೆ ಎಂದು ಸಂಸದರು ತಿಳಿಸಿದರು.


ಅಧಿಕಾರಿಗಳ ಸಭೆಯಲ್ಲಿ ಸಮರ್ಪಕ ಮಾಹಿತಿ ನೀಡದ ಅಧಿಕಾರಿಗಳನ್ನು ಸಂಸದ ಸುನೀಲ್ ಬೋಸ್ ತರಾಟೆ ತೆಗೆದುಕೊಂಡರು.

ಈ ವೇಳೆ ತಾ.ಪಂ. ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಕುಕ್ಕೂರು ಗಣೇಶ್ ಮೀನುಗಾರಿಕೆ ಇಲಾಖೆಯಲ್ಲಿ ಯಾವುದೇ ಸವಲತ್ತು ನೀಡುವಾಗ ಯಾರಿಗೂ ಮಾಹಿತಿ ನೀಡುತ್ತಿಲ್ಲ ಫಲಾನುಭವಿಗಳ ಆಯ್ಕೆ ಸಹ ಪಾರದರ್ಶಕವಾಗಿಲ್ಲ ಎಂದು ದೂರಿದರು. ಗಣೇಶ್ ಆರೋಪ ತಳ್ಳಿಹಾಕಿದ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಕೆ.ಬಿ. ಶ್ವೇತ ಇಲಾಖೆಯಲ್ಲಿ ಎಲ್ಲ ವ್ಯವಹಾರಗಳು ಪಾರದರ್ಶಕವಾಗಿವೆ. ಎಲ್ಲೂ ಕಾನೂನು ಬಾಹೀರವಾದ ಆಯ್ಕೆ ಮಾಡಿಲ್ಲ, ಎಲ್ಲವನ್ನೂ ದಾಖಲೆಯಲ್ಲಿ ನಮೂದು ಮಾಡಿಯೇ ಫಲಾನುಭವಿಗಳ ಆಯ್ಕೆ ನಡೆದಿದೆ ಎಂದು ವಿವರಣೆ ನೀಡಿದರು. ಆನಂತರ ನೂರಾರು ಮಂದಿ ಸಾರ್ವಜನಿಕರು ಸಂಸದರಿಗೆ ವಿವಿಧ ಸಮಸ್ಯೆಗಳ ಕುರಿತಂತೆ ಅಹವಾಲು ಸಲ್ಲಿಸಿದರು. ಈ ವೇಳೆ ಕೆಲ ಅಹವಾಲಿಗೆ ಸ್ಥಳದಲ್ಲೇ ಪರಿಹಾರ ಸೂಚಿಸಿದ ಸಂಸದರು ಕೆಲವೊಂದು ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಕೆಡಿಪಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಸೋಸಲೆ ಮಹದೇವಸ್ವಾಮಿ, ಬಿ.ಎಂ. ದಿವಾಕರ್, ಪುರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಮಾಜಿ ಸದಸ್ಯ ರಘು, ತಾ.ಪಂ. ಮಾಜಿ ಅಧ್ಯಕ್ಷ ದೊಡ್ಡೇ ಬಾಗಿಲು ಮಲ್ಲಿಕಾರ್ಜುನಸ್ವಾಮಿ, ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಕಗ್ಗಲಿಪುರ ಕೆ.ಎಂ.ಮಧುಕುಮಾರ್, ಬೀಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ಕೊಡಗಳ್ಳಿ ಧನಂಜಯ, ಪುರಸಭೆ ಮುಖ್ಯಾಧಿಕಾರಿ ಸಿ.ಶ್ರೀನಿವಾಸ್, ಲೋಕೋಪಯೋಗಿ ಇಲಾಖೆಯ ಎಇಇ ಸತೀಶ್ ಚಂದ್ರನ್, ಸಿಡಿಪಿಓ ಗೋವಿಂದರಾಜು, ಜಿ.ಪಂ. ಎಇಇ ಚರಿತ, ಸೆಸ್ಕಾಂ ಎಇಇ ವೀರೇಶ್, ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ, ಆಪ್ತ ಸಹಾಯಕ ಬಸವರಾಜು ಸೇರಿದಂತೆ ಮತ್ತಿತರರಿದ್ದರು.

ಹೆಚ್.ಡಿ.ಕೋಟೆಯಲ್ಲಿ ಹಿಂದೂ ಸಮಾಜೋತ್ಸವದ ಶೋಭಾಯಾತ್ರೆ

ಪೂರ್ಣಕುಂಭ ಹೊತ್ತ ಮಹಿಳೆಯರು, ವೀರಗಾಸೆ, ನಗಾರಿಯೊಂದಿಗೆ ಭಾರತಮಾತೆಯ ಭವ್ಯ ಮೆರವಣಿಗೆ

ಹೆಚ್.ಡಿ.ಕೋಟೆ: ಅಯೋಧ್ಯೆ ಶ್ರೀ ರಾಮ ಮಂದಿರದ ಮೇಲೆ ಧರ್ಮ ಧ್ವಜ ಹಾರಿಸಿರುವುದು ಈ ರಾಷ್ಟ್ರದಲ್ಲಿ ಸನಾತನ ಧರ್ಮದ ವಿಜಯ ಪರ್ವ ಪ್ರಾರಂಭವಾಗಿದೆ ಎಂಬುದು ಸಾಧು ಸಂತರ ಅಭಿಪ್ರಾಯವಾಗಿದೆ ಎಂದು ಹಿಂದೂ ಜಾಗರಣಾ ವೇದಿಕೆ ಪ್ರಾಂತ ಪ್ರಮುಖರಾದ ಉಲ್ಲಾಸ್ ತಿಳಿಸಿದರು.

ಪಟ್ಟಣದಲ್ಲಿ ನಡೆದ ಹಿಂದೂ ಸಮಾಜೋತ್ಸವ ಶೋಭಾ ಯಾತ್ರೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿ ನಿರಂತರ ಹೋರಾಟದ ಮೂಲಕ ಭವ್ಯವಾದ ರಾಮಮಂದಿರವನ್ನು ಕಟ್ಟಿದ್ದು, ಹಿಂದೂಗಳ ಹೋರಾಟದ ಸಂಕಲ್ಪ ಶಕ್ತಿಯ ಸಂಕೇತವಾಗಿದೆ. ಹಾಗೇ ಸೋಮನಾಥ ದೇವಾಲಯದ ಮೇಲೆ ದಾಳಿಯಾಗಿ ಸಾವಿರ ವರ್ಷಗಳು ಸಂದಿದ್ದು, ಅದು ಎಷ್ಟೇ ಬಾರಿ ದಾಳಿ ನಡೆದರು ಹಿಂದೂಗಳು ಮತ್ತೆ ಮತ್ತೆ ಪುನರುತ್ಥಾನಗೊಳಿಸಿದರು ಎಂದರು.


ಹಿಂದೂ ಸಮಾಜೋತ್ಸವ ಶೋಭಯಾತ್ರೆಯಲ್ಲಿ ಮಂಗಳವಾದ್ಯದೊಂದಿಗೆ, ಪೂರ್ಣಕುಂಭ ಕಳಶ ಹೊತ್ತ ಮಹಿಳೆಯರು ಗಮನ ಸೆಳೆದರು.

ಸ್ವಾಮಿ ವಿವೇಕಾನಂದರು ವಿದೇಶದಿಂದ ಆಗಮಿಸಿದ ನಂತರ ಇಡೀ ದೇಶ ಸುತ್ತಿದರು. ಹಿಂದೂಗಳು ತಮ್ಮ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡು ಪರಸ್ಪರ ಅಸೂಯೆ, ಕಚ್ಚಾಟದಲ್ಲಿ ತೊಡಗಿರುವುದನ್ನು ಕಂಡರು. ಆಗ ಧರ್ಮ ಉಳಿದರೆ ಮಾತ್ರ ದೇಶವೆಂದು ಧರ್ಮ ಸಂಸ್ಕೃತಿಯ ಪುನರುತ್ಥಾನ ಮತ್ತು ಧರ್ಮ ಸಂರಕ್ಷಣೆಗಾಗಿ ತಮ್ಮ ಜೀವನ ಮುಡಿಪಾಗಿಟ್ಟಿದ್ದನ್ನು ನಾವು ಮರೆಯಬಾರದು ಎಂದರು. ದಿವ್ಯ ಸಾನಿಧ್ಯ ವಹಿಸಿದ್ದ ಪಡುವಲು ವಿರಕ್ತ ಮಠದ ಮಹದೇವ ಸ್ವಾಮಿಗಳು ಮಾತನಾಡಿ ರಾಷ್ಟ್ರದ ಮೇಲೆ ಆಕ್ರಮಣ, ದಬ್ಬಾಳಿಕೆಯು ದೇಶದ ಹೊರಗಿನಿಂದ ಮತ್ತು ಒಳಗಡೆ ನಡೆಯುತ್ತಿದೆ. ಹಾಗಾಗಿ ನಾವು ಜಾತಿ, ಮತ, ಪಂಥ ಮೀರಿ ಒಗ್ಗೂಡಬೇಕಾದ ಅನಿವಾರ್ಯತೆ ಇದೆ. ಆಧುನಿಕ ಪಾಶ್ಚಾತ್ಯ ಸಂಸ್ಕೃತಿಗೆ ಒಳಗಾಗಿ ಉಡುಗೆ ತೊಡುಗೆಗಳು, ಆಚಾರ ವಿಚಾರಗಳನ್ನು ಅನುಸರಿಸುವುದನ್ನು ತಡೆಯಬೇಕು. ನಮ್ಮ ದೇಶದ ಸಂಸ್ಕೃತಿ ಶ್ರೇಷ್ಠವಾಗಿದ್ದು ಮಕ್ಕಳಿಗೆ ತಿಳಿಹೇಳಬೇಕು. ತಂದೆ-ತಾಯಿ, ಗುರು-ಹಿರಿಯರನ್ನು ಗೌರವಿಸುವುದು ಆದ್ಯ ಕರ್ತವ್ಯವಾಗಬೇಕು ಎಂದರು. ಕಾರ್ಯಕ್ರಮಕ್ಕೂ ಮೊದಲು ಶೋಭಾಯಾತ್ರೆಯು ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಗೋ ಪೂಜೆ ನೆರವೇರಿಸಿದ ನಂತರ ಮಂಗಳ ವಾದ್ಯ, ಮಹಿಳೆಯರು ಪೂರ್ಣಕುಂಭ ಕಳಶ ಹೊತ್ತು ಸಾಗಿದರೆ, ವೀರಗಾಸೆ, ನಗಾರಿಯೊಂದಿಗೆ ಭಾರತ ಮಾತೆಯ ಭಾವಚಿತ್ರವನ್ನು ಪ್ರಮುಖ ಬೀದಿ ಗಳಲ್ಲಿ ಸಾಗಿತು, ಟೈಗರ್ ಬ್ಲಾಕ್ ಮತ್ತು ಸುತ್ತಮುತ್ತಲಿನ ಯುವಕರ ಬೈಕ್ ರ‍್ಯಾಲಿ ನಡೆಯಿತು. ಕಾರ್ಯಕ್ರಮದಲ್ಲಿ ಸಂಯೋಜಕರಾದ ಜೆ.ಬಿ. ಶಿವಸ್ವಾಮಿ, ಪೂರ್ಣೇಶ್, ಸಿ.ಎನ್.ನಾಗಣ್ಣ, ರುದ್ರಪ್ಪ, ಶಂಭೇಗೌಡ, ವೀರಪ್ಪ, ಟಿ.ವೆಂಕಟೇಶ್, ನಟರಾಜು, ಮಹದೇವಪ್ಪ ಸಂತೋಷ್, ಕನ್ನಡ ಪ್ರಮೋದ, ಜಯಂತ್, ಶ್ರೀಕಾಂತ್, ದೇವರಾಜು, ನಂದೀಶ್, ಚಂದ್ರಮೌಳಿ, ಮಹೇಶ್, ರೂಪೇಶ್ ಇದ್ದರು.

ಕಾಮಗೌಡಹಳ್ಳಿಯಲ್ಲಿ ಬಸವ ಭವನ ಉದ್ಘಾಟನೆ



ಹುಣಸೂರು, ಜ.28– ತಾಲೂಕಿನ ಹನಗೋಡು ಹೋಬಳಿಯ ಕಾಮಗೌಡನಹಳ್ಳಿಯಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ವೀರಶೈವ ಲಿಂಗಾಯತ ಸಮಾಜದ ಬಸವ ಭವನವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಭವನ ನಿರ್ಮಾಣಕ್ಕೆ ವೈಯಕ್ತಿಕವಾಗಿ 10 ಲಕ್ಷ ರೂ ಹಾಗೂ ದಾಸೋಹಕ್ಕೆ 50 ಸಾವಿರ ರೂ ಗಳನ್ನು ನಮ್ಮ ಮಾತೃಶ್ರೀ ರತ್ನಮ್ಮ ಪ್ರೇಮ್ ಕುಮಾರ್ ಅವರ ಹೆಸರಿನಲ್ಲಿ ನೀಡಿದ್ದೇನೆ. ಭವನವನ್ನು ಗ್ರಾಮಸ್ಥರು ಸಾಮಾಜಿಕ ಸೇವಾ ಹಾಗೂ ಧಾರ್ಮಿಕ ಕಾರ್ಯಗಳಿಗೆ ಸದ್ಬಳಕೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಹೆಚ್.ಪಿ.ಮಂಜುನಾಥ್ ಅವರನ್ನು ಸನ್ಮಾನಿಸಿ ಗೌರವಿಸಿದರು. ಈ ವೇಳೆ ಸಮಾಜ ಸೇವಕರಾದ ಡಾ. ವೃಷಭೇಂದ್ರಸ್ವಾಮಿ, ಉದ್ಯಮಿ ಡಾ.ಎಚ್.ವಿ.ಕಾರ್ತಿಕ್, ಗ್ರಾ.ಪಂ. ಸದಸ್ಯರಾದ ಕೆ.ಇ ಈಶ್ವರ್, ಶಿವಣ್ಣ, ಸಂತೋಷ್ ಕುಮಾರ್ ಗ್ರಾಮದ ಮುಖಂಡರಾದ ಮಹದೇವಪ್ಪ, ಫೈನಾನ್ಸ್ ಮಂಜುನಾಥ್, ಲಿಂಗರಾಜಪ್ಪ, ಬಸಪ್ಪ, ನಾಗರಾಜ್ ಸೇರಿದಂತೆ ಗ್ರಾಮಸ್ಥರು ಇದ್ದರು.

ಅದ್ಧೂರಿ ವೀರಾಂಜನೇಯ ಸ್ವಾಮಿಯ ಬ್ರಹ್ಮರಥೋತ್ಸವ

ಹುಣಸೂರು, ಜ.28– ಶ್ರೀ ವೀರಾಂಜನೇಯ ಸ್ವಾಮಿಯ 74ನೇ ವರ್ಷದ ಬ್ರಹ್ಮರಥೋತ್ಸವ ಅದ್ದೂರಿಯಾಗಿ ನಡೆಯಿತು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ ಮಂಟಪಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಮೂರು ದಿನಗಳಿಂದ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಗಣಪತಿ ಹೋಮ, ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು. ಎರಡನೇ ದಿನವೂ ಶ್ರೀಆಂಜನೇಯಸ್ವಾಮಿ ವಿಗ್ರಹ ಮಂಟಪದಲ್ಲಿ ಕೂರಿಸಿ ತಾಲೂಕಿನ ಸುತ್ತಮುತ್ತ ಗ್ರಾಮದವರು ಸೇರಿ ಬಾಚಳ್ಳಿ ಗ್ರಾಮದಲ್ಲಿ ಮೆರವಣಿಗೆ ನಡೆಸಲಾಯಿತು. ಜಾತ್ರೆಗೆ ಅಗಮಿಸಿದ್ದ ಭಕ್ತರು ಭಾಗಿಯಾಗಿ ದೇವರ ದರ್ಶನ ಪಡೆದರು.

ಬ್ರಹ್ಮ ರಥೋತ್ಸವದಲ್ಲಿ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಬಂದು ದೇವಸ್ಥಾನದ ಸುತ್ತ ವೀರಾಂಜನೇಯ ಸ್ವಾಮಿಯ ತೇರನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತೇರನ್ನು ಎಳೆಯುವ ಮೂಲಕ ಜೈಕಾರ ಕೂಗುತ್ತಾ ಸಂಭ್ರಮಿಸಿದರು. ರಥ ಎಳೆಯುವಾಗ ಭಕ್ತರು, ಬಾಳೆಹಣ್ಣು, ಜವನ ಎಸೆದು ಭಕ್ತರು ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಂಡರು.


ಶ್ರೀ ವೀರಾಂಜನೇಯ ಸ್ವಾಮಿಯ ಬ್ರಹ್ಮರಥೋತ್ಸವ ಅದ್ದೂರಿಯಾಗಿ ನಡೆಯಿತು.

ದೇವಸ್ಥಾನಕ್ಕೆ ಬಂದ ಭಕ್ತಾದಿಗಳಿಗೆ ದೇವಸ್ಥಾನದ ವತಿಯಿಂದ ಅನ್ನದಾನ ಮಾಡಲಾಯಿತು ಮತ್ತು ಶ್ರೀ ಆಂಜನೇಯ ಸ್ವಾಮಿಯ ಭಕ್ತಾದಿಗಳಿಂದಲೂ ಭಕ್ತಾದಿಗಳಿಗೆ ಅನ್ನದಾನ ಮಾಡಲಾಯಿತು.

ಶ್ರೀ ಆಂಜನೇಯ ಬ್ರಹ್ಮರಥೋತ್ಸವದ ಜಾತ್ರಾ ಮಹೋತ್ಸವದ ಅಂಗವಾಗಿ ಇದೇ ಮೊದಲ ಬಾರಿಗೆ ಹಾಲು ಹಲ್ಲು ಮತ್ತು ಎರಡು ಹಲ್ಲಿನ ಕರುಗಳ ಚಕ್ಕಡಿ ಪಾಯಿಂಟ್ ಗಾಡಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಗಾಡಿ ಕಟ್ಟಿ ಗಾಡಿಗೆ ಪೂಜೆ ಮಾಡುವ ಮೂಲಕ ಹಾಗೂ ರಾಸುಗಳಿಗೆ ಫಲ ತಿನ್ನಿಸುವುದರ ಮೂಲಕ ಮುಡಾ ಅಧ್ಯಕ್ಷರಾದ ಎಚ್.ಪಿ ಅಮರನಾಥ್ ಚಾಲನೆ ನೀಡಿದರು.

ಗಾಡಿ ಚಕ್ರಕಟ್ಟಿ ಓಡಿಸುವ ಸ್ಪರ್ಧೆ ನೋಡಲು ಅಕ್ಕಪಕ್ಕದ ಗ್ರಾಮದವರು ಸಾವಿರಾರು ಸಂಖ್ಯೆಯಲ್ಲಿ ಬಂದು ಸ್ಪರ್ಧೆ ವೀಕ್ಷಣೆ ಮಾಡಿ ಸಂಭ್ರಮಪಟ್ಟರು

ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಸಮಿತಿ ಅಧ್ಯಕ್ಷ ಹೆಚ್.ಡಿ.ನಾರಣಪ್ಪ ಕಾರ್ಯದರ್ಶಿ ಉಮೇಶ್, ಗಣೇಶ್ ಕುಮಾರ್ ಸ್ವಾಮಿ, ಪುಟ್ಟರಾಜು, ಸತೀಶ್, ಶ್ರೀಧರ್, ರಾಜು, ಈಶ್ವರ್, ಯೋಗಾನಂದ, ಶಂಬು, ಚಿಕ್ಕ ಹುಣಸೂರು ಲಕ್ಷ್ಮೀ ನಾರಾಯಣ, ಧನರಾಜ್, ಅನಿಲ್, ವಿಶ್ವನಾಥ್, ಕಾಳಪ್ಪ ಹಾಜರಿದ್ದರು.

ಮನ್ರೇಗಾದಲ್ಲಿ ವ್ಯಾಪಕ ಭ್ರಷ್ಟಾಚಾರ, ಜಿ ರಾಮ್ ಜೆಯಲ್ಲಿ ವಿಕಸಿತ ಭಾರತ

ನಂಜನಗೂಡು: ಗ್ರಾಮೀಣ ಪ್ರದೇಶದಲ್ಲಿ ಜನರಿಗೆ 125 ದಿನ ಉದ್ಯೋಗ ನೀಡುವುದರ ಜೊತೆಗೆ ದುಡಿಯುವ ರೈತರ ದಿನಗೂಲಿಯನ್ನು ಹೆಚ್ಚಿಸಲಾಗಿದ್ದು, ವಿಕಸಿತ ಭಾರತ ವಿ.ಬಿ.ಜಿ.ರಾಮ್.ಜಿ ಕಾಯಿದೆ ಮಹತ್ವಪೂರ್ಣ ಬದಲಾವಣೆಯೊಂದಿಗೆ ವಿಕಸಿತ ಭಾರತದ ದೂರದೃಷ್ಟಿ ಹೊಂದಿದೆ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಹಿಂದಿನ ಮನ್ರೇಗಾ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಶೇ90ರಷ್ಟು ಅನುದಾನ ಪಡೆದು ವ್ಯಾಪಕ ಭ್ರಷ್ಟಾಚಾರ ನಡೆಸಲಾಗುತ್ತಿತ್ತು, ರೈತರ ನಕಲಿ ಖಾತೆಗಳನ್ನು ತೆರೆದು ಹಣ ಲೂಟಿ ಮಾಡಲಾಗುತ್ತಿತ್ತು, ಸರಿಯಾದ ಮುಂದಾಲೋಚನೆಯಿಂದ ಕೆಲಸದ ನಕ್ಷೆ ತಯಾರಿಸದೆ ಕೇಂದ್ರ ಸರ್ಕಾರದ ಅನುದಾನವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿತ್ತು, ಕಳೆದ 20 ವರ್ಷಗಳಲ್ಲಿ ಕೋಟ್ಯಾಂತರ ರೂಪಾಯಿ ಬಳಸಿಕೊಂಡ ಯೋಜನೆಯಿಂದ ಯಾವುದೇ ಆಸ್ತಿ ನಿರ್ಮಾಣವಾಗಲಿಲ್ಲ, ಸಾರ್ವಜನಿಕರ ತೆರಿಗೆ ಹಣ ಸೋರಿ ಹೋಗುತ್ತಿತ್ತು, ಇದನ್ನು ಮನಗಂಡ ಕೇಂದ್ರ ಸರ್ಕಾರ ಕೆಲವು ಮಹತ್ವಪೂರ್ಣ ಬದಲಾವಣೆಯೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಾಗಿದೆ, ಕೇಂದ್ರ ಸರ್ಕಾರದ ವಿರುದ್ಧ ಕಳೆದ 14 ವರ್ಷಗಳಲ್ಲಿ ಯಾವುದೇ ಭ್ರಷ್ಟಾಚಾರದ ಆರೋಪ ಮಾಡಲು ಸಾಧ್ಯವಾಗದ ಕಾಂಗ್ರೆಸ್, ಟೀಕೆ ಮಾಡಲು ವಿಷಯದ ಕೊರತೆಯಿಂದ ರಾಜಕೀಯ ಪ್ರೇರಿತ ಅಪಾದನೆಯಲ್ಲಿ ತೊಡಗಿದೆ ಎಂದರು.


ನಂಜನಗೂಡು ಪತ್ರಕರ್ತರ ಭವನದಲ್ಲಿ ಮಾಜಿ ಶಾಸಕ ಹರ್ಷವರ್ಧನ್ ಮಾತನಾಡಿದರು

ಜಿ.ರಾಮ್.ಜಿ ಕಾಯಿದೆಯನ್ನು ರಾಜ್ಯ ಸಭೆ ಹಾಗೂ ಲೋಕ ಸಭೆಗಳಲ್ಲಿ ಕೂಲಂಕುಶವಾಗಿ ಚರ್ಚಿಸಿ ಭ್ರಷ್ಟಾಚಾರ ತಪ್ಪಿಸಲು ಯೋಜನೆಯನ್ನು ರೂಪಿಸಲಾಗಿದೆ, ಗ್ರಾಮೀಣ ಪ್ರದೇಶದಲ್ಲಿ ಯೋಜನೆಯ ಬಗ್ಗೆ ಯಾವುದೇ ವಿರೋಧ ವ್ಯಕ್ತವಾಗಿಲ್ಲ, ರಾಜ್ಯ ಕಾಂಗ್ರೆಸ್ ಜನರನ್ನು ತಪ್ಪುದಾರಿಗೆ ಎಳೆಯಲು ವಿರೋಧ ಮಾಡುತ್ತಿದೆ, ಸಿಎಂ ಸಿದ್ದರಾಮಯ್ಯ ನವರಿಗೆ ಗ್ರಾಪಂ ಕಚೇರಿಗಳಿಗೆ ಸುಣ್ಣ-ಬಣ್ಣ ಒಡೆಸಲು ದುಡ್ಡಿಲ್ಲ, ಗ್ರಾಪಂ ಕಚೇರಿಗಳಿಗೆ ಮಹಾತ್ಮ ಗಾಂಧೀಜೀ ಹೆಸರಿಡುತ್ತಾರಂತೆ, ಗಾಂಧೀಜಿ ಹೆಸರಿಡುವ ಬಗ್ಗೆ ನಮ್ಮ ತಕರಾರಿಲ್ಲ ಎಂದು ಹೇಳಿದರು.

ಮಾಜಿ ಜಿ.ಪಂ ಸದಸ್ಯ ಸದಾನಂದ ಮಾತನಾಡಿದರು. ತಾಲೂಕು ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ, ಮುಖಂಡರಾದ ಸಿದ್ದರಾಜು, ವೆಂಕಟಸ್ವಾಮಿ, ವಳಗೆರೆ ಪುಟ್ಟಸ್ವಾಮಿ, ರಾಘವೇಂದ್ರ, ಹೆಮ್ಮರಗಾಲ ಶಿವಣ್ಣ ಇದ್ದರು.

ಸೋಮನಾಥಪುರದಲ್ಲಿ ಗಣರಾಜ್ಯೋತ್ಸವ ಆಚರಣೆ

ತಿ.ನರಸೀಪುರ, ಜ.28– ಸೋಮನಾಥಪುರ ಆರೋಹಣ ಸೆಂಟ್ರಲ್ ಸ್ಕೂಲ್‌ನಲ್ಲಿ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಗ್ರೂಪ್ ಕ್ಯಾಪ್ಟನ್ ವಿ.ಎಸ್.ಶಿವರಾಜ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ನೆರವೇರಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಮಕ್ಕಳನ್ನು ಕುರಿತು ಶಿಸ್ತು, ಗುರು ಹಿರಿಯರಲ್ಲಿ ಗೌರವ ಮತ್ತು ಕರ್ತವ್ಯಗಳು, ಸಂವಿಧಾನದ ಮಹತ್ವ, ತಮ್ಮ ಸಿಂಧೂರ ಕಾರ್ಯಾಚರಣೆಯ ಕುರಿತಾಗಿ ಮಾತನಾಡಿದರು. ಉತ್ತಮ ಹವ್ಯಾಸಗಳು ಸದಾ ನಮ್ಮನ್ನು ಸಾಧನೆಗಳತ್ತ ಕರೆದೊಯ್ಯುವ ಮೆಟ್ಟಿಲುಗಳೆಂದು ತಮ್ಮ ಪ್ರೇರಣದಾಯಕ ಮಾತುಗಳಿಂದ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ಜೊತೆಗೆ ತಮ್ಮ ವೃತ್ತಿ ಜೀವನದ ಅನುಭವಗಳನ್ನು ಮಕ್ಕಳೊಂದಿಗೆ ಹಂಚಿಕೊಂಡರು. ಶಾಲೆಯ ಅಧ್ಯಕ್ಷರಾದ ಹನುಮಂತೇಗೌಡರು ಗಣರಾಜ್ಯ ದಿನದ ಮಹತ್ವ ಮತ್ತು ಧನಾತ್ಮಕ ಮೌಲ್ಯಗಳನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಕುರಿತಾಗಿ ಮಾತನಾಡಿದರು. ಉಪಾಧ್ಯಕ್ಷರಾದ ಸುರೇಶ್ ಬಿ.ಎನ್, ಕಾರ್ಯದರ್ಶಿ ರಾಮಚಂದ್ರ ಎನ್.ಎಂ ಹಾಗೂ ಗೌರವ ಕಾರ್ಯದರ್ಶಿಗಳಾದ ಯೋಗೇಂದ್ರ ಬಿ.ಎಸ್ ಮತ್ತು ಖಜಾಂಚಿಗಳಾದ ಮಾಣಕ್‌ಚಂದ್ ಮತ್ತು ಆಡಳಿತ ಮಂಡಳಿಯ ಸದಸ್ಯರಾದ ಬಿ.ಕೆ.ವೆಂಕಟೇಶ್ ಪ್ರಸಾದ್, ಸುಭಾಷ್ ಚೌದರಿ ಹಾಗೂ ಸೂರಜ್ ಸೇರಿದಂತೆ ಶಾಲೆಯ ಪ್ರಾಂಶುಪಾಲರಾದ ವಿಮಲ.ಬಿ ಮತ್ತು ಮುಖ್ಯೋಪಾಧ್ಯಾಯರಾದ ಲಕ್ಷ್ಮಿ ಬಿ.ಆರ್, ಪೋಷಕರು ಉಪಸ್ಥಿತರಿದ್ದರು.



ಜಿ.ಡಿ.ಹರೀಶ್ ಗೌಡರಿಗೆ ಸನ್ಮಾನ



ತಿ.ನರಸೀಪುರ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಟಿ.ಸಿ. ಫಣೀಶ್ ಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿದ್ದ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ ಅವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷ ಮಲ್ಲಣ್ಣ, ಟಿಎಪಿಎಂಎಸ್ ಅಧ್ಯಕ್ಷ ಸುಬ್ರಹ್ಮಣ್ಯ, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಬೋರೇಗೌಡ, ಪುರಸಭಾ ಸದಸ್ಯ ಕಿರಣ್, ಬೆನಕನಹಳ್ಳಿ ವಿಜಯಕುಮಾರ್, ರವಿ ಮತ್ತಿತರಿದ್ದಾರೆ.

ಕೆ.ಆರ್.ನಗರದಲ್ಲಿ ರವಿಶಂಕರ್ ಗೆಲ್ಲಿಸಿ ತಪ್ಪು ಮಾಡಿಕೊಂಡಿದ್ದೀವಿ

ಜಿ.ಪಂ. ಮಾಜಿ ಸದಸ್ಯ, ದಲಿತ ಮುಖಂಡ ಅಚ್ಯುತಾನಂದ್ ವಾಗ್ದಾಳಿ

ಕೆ.ಆರ್.ನಗರ: ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದಿಂದ ಶಾಸಕ ಡಿ.ರವಿಶಂಕರ್ ಅವರನ್ನು ಗೆಲ್ಲಿಸಿ ತಪ್ಪು ಮಾಡಿಕೊಂಡಿದ್ದೇವೆ ಎಂದು ಕ್ಷೇತ್ರದ ಜನತೆಗೆ ಎರಡೂವರೆ ವರ್ಷಗಳ ಅವಧಿಯಲ್ಲೆಯೇ ಗೊತ್ತಾಗಿ ಪಶ್ಚಾತ್ತಾಪ ಪಡುತ್ತಿದ್ದಾರೆ ಎಂದು ಜಿ.ಪಂ. ಮಾಜಿ ಸದಸ್ಯ ಹಾಗೂ ದಲಿತ ಮುಖಂಡ ಅಚ್ಯುತಾನಂದ್ ವಾಗ್ದಾಳಿ ನಡೆಸಿದರು.

ಪಟ್ಟಣದ ಅಂಬೇಡ್ಕರ್ ಬಡಾವಣೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಅಧ್ಯಕ್ಷೆ ಗೀತಾ ಮಹೇಶ್ ಹಾಗೂ ಬೆಂಬಲಿಗರು ಮಾಜಿ ಸಚಿವ ಸಾ.ರಾ.ಮಹೇಶ್ ಸಮ್ಮುಖದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿದ ಸಂದರ್ಭದಲ್ಲಿ ಮಾತನಾಡಿದ ಅವರು ಶಾಸಕ ಡಿ. ರವಿಶಂಕರ್ ಅವರ ಕ್ಷೇತ್ರಕ್ಕೆ ಶಾಶ್ವತವಾದ ಅಭಿವೃದ್ಧಿ ಕಾರ್ಯ ಎಲ್ಲಿ ಮಾಡಿದ್ದಾರೆ ಎಂದು ಪ್ರಶ್ನೆಗಳ ಸುರಿಮಳೆಗೈದರು.

> ರವಿಶಂಕರ್ ಅವರೇ ನೀವು ಶಾಸಕರಾದ ಮೇಲೆ ಅತಿಸೂಕ್ಷ್ಮ ಸಮಾಜ ಸೇರಿದಂತೆ 400 ಹೊರ ಗುತ್ತಿಗೆ ನೌಕರರನ್ನು ಉದ್ಯೋಗದಿಂದ ತೆಗೆದ್ರಿ, ಇದಕ್ಕಾಗಿಯೇ ನಿಮ್ಮನ್ನು ಕ್ಷೇತ್ರದ ಜನತೆ ಗೆಲ್ಲಿಸಿದ್ದು, ಈ ಕಾರಣದಿಂದಲೇ ಈ ಕ್ಷೇತ್ರದಲ್ಲಿ ಮಂಚನಹಳ್ಳಿ ಮಹದೇವ್ ನಂತರ ಇಪ್ಪತ್ತು ವರ್ಷಗಳು ಬೇಕಾಯಿತು ನೀವು ಗೆಲ್ಲಲು, ನಿಮ್ಮ ವರ್ತನೆಯಿಂದ ಜನರು ಬೇಸತ್ತಿದ್ದಾರೆ ಇನ್ನೂ ಇಪ್ಪತ್ತು ವರ್ಷಗಳು ನೀವು ಗೆಲ್ಲಲ್ಲ. –ಅಚ್ಯುತಾನಂದ

ಶಾಸಕ ಡಿ.ರವಿಶಂಕರ್ ಹಾಗೂ ಅವರ ತಂದೆ ದೊಡ್ಡಸ್ವಾಮೇಗೌಡರು ಈ ಇಬ್ಬರು ಮಹಾನುಭಾವರು ಕ್ಷೇತ್ರದ ಜನತೆ ಗೌರವವನ್ನು ಹಾಳು ಮಾಡಿದ್ದಾರೆ. ಒಬ್ಬ ಅಧಿಕಾರಿ ಬರಲು ಇವರಿಗೆ ಹಣ ಕೊಡಬೇಕು. ಪ್ರತಿಯೊಂದಕ್ಕೂ ತೋಟದ ಮನೆಗೆ ಕರೆಸುತ್ತಾರೆ. ಹಾಗಾದರೆ ಪಟ್ಟಣದ ಲೋಕೋಪಯೋಗಿ ಇಲಾಖೆ ಕಚೇರಿಯಲ್ಲಿ ನೀವು ಶಾಸಕರ ಕಚೇರಿ ತೆರೆದಿರುವುದು ಯಾವ ಉದ್ದೇಶಕ್ಕೆ ಎಂದು ಸ್ಪಷ್ಟಪಡಿಸಿ ಎಂದರು.

ಪಟ್ಟಣದ ಹೆದ್ದಾರಿಯ ಪಕ್ಕದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಒಂದು ಎಕರೆ ಜಾಗ ಕೊಟ್ಟು ಎರಡು ಕೋಟಿ ಅನುದಾನ ನೀಡಿದ್ದು ಮಾಜಿ ಸಚಿವ ಸಾ.ರಾ.ಮಹೇಶ್ ಅವರು, ಇವಾಗ ನೀವಾಗಿದ್ದರೆ ಆ ಜಾಗವನ್ನು ಕೊಡುತ್ತಿರಲಿಲ್ಲ, ಅಂಬೇಡ್ಕರ್ ಭವನದ ಜಾಗವನ್ನು ಒತ್ತುವರಿ ಮಾಡಿಕೊಂಡು ಕಬಳಿಸಲು ಹೊರಡುತ್ತೀರಿ. ಏಕೆ ಇದು ನಿಮಗೆ ಗೊತ್ತಿಲ್ಲವೇ ಶಾಸಕರೇ ಎಂದು ರವಿಶಂಕರ್ ವಿರುದ್ಧ ಗುಡುಗಿದರು.


ಪುರಸಭೆ ಮಾಜಿ ಅಧ್ಯಕ್ಷೆ ಗೀತಾಮಹೇಶ್ ಹಾಗೂ ಬೆಂಬಲಿಗರು ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಯಾದರು.

ಪುರಸಭೆ ಮಾಜಿ ಅಧ್ಯಕ್ಷೆ ಗೀತಾಮಹೇಶ್ ಅಧಿಕೃತವಾಗಿ ಕಾಂಗ್ರೆಸ್ ಪಕ್ಷ ತೊರೆದು ಜೆಡಿಎಸ್ ಭಾವುಟ ಹಿಡಿದುಕೊಂಡು ಪಕ್ಷ ಸೇರಿದ ಬಳಿಕ ಮಾತನಾಡಿ ನನ್ನನ್ನು ಮಾಜಿ. ಸಚಿವರಾದ ಸಾ.ರಾ.ಮಹೇಶ್ ಅಣ್ಣ ಪುರಸಭೆ ಅಧ್ಯಕ್ಷೆ ಮಾಡಿದ್ದರು. ಎರಡು ಬಾರಿ ಗೆಲುವಿಗೆ ಶ್ರಮಿಸಿದರು. ನಾನು ಬದುಕಿರುವರೆಗೂ ಸಾ.ರಾ.ಮಹೇಶ್ ಅಣ್ಣನವರ ಅಭಿಮಾನಿಯಾಗಿರುತ್ತೇನೆ ಎಂದು ತಿಳಿಸಿದರು.

> ಚೌಕಹಳ್ಳಿ ಗ್ರಾಮದ ಯುವಕ ಬಿದ್ದು ತಲೆಗೆ ಪೆಟ್ಟಾಗಿ ಗಂಭೀರವಾಗಿ ಗಾಯಗೊಂಡು ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾನೆ. ಯುವಕನಿಗೆ ಸುಮಾರು ಆರೂವರೆ ಲಕ್ಷ ಆಸ್ಪತ್ರೆಯ ಬಿಲ್ ಬಂದಿದೆ. ಹಣವನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಪುಣ್ಯಾತ್ಮರು ಕಟ್ಟಿದರು. ಇಂತಹ ತಾಯಿ ಹೃದಯ ಹೊಂದಿದ ವ್ಯಕ್ತಿಯನ್ನು ಗೆಲ್ಲಿಸಬೇಕಾಗಿದೆ. ನಿಮ್ಮನ್ನು ಗೆಲ್ಲಿಸಿ ನನ್ನ ಸಮುದಾಯದ ಜನ ಪಶ್ಚತ್ತಾಪ ಪಡುತ್ತಿದ್ದಾರೆ. ನಿಮ್ಮ ಸಿಎಂ 45 ಸಾವಿರ ಕೋಟಿ ದಲಿತರ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಿಸಿ ಕೊಂಡು ದಲಿತರ ಅಭಿವೃದ್ಧಿ ಕಾರ್ಯಕ್ರಮಗಳು ನೆನೆಗುದ್ದಿಗೆ ಬಿದ್ದಿವೆ. – ಅಚ್ಯುತಾನಂದ್.

ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜಿ.ಪಂ. ಮಾಜಿ ಸದಸ್ಯ ಅಮಿತ್ ವಿ.ದೇವರಹಟ್ಟಿ, ದಲಿತ ಮುಖಂಡ ಹನಸೋಗೆ ನಾಗರಾಜ್ ಮಾತನಾಡಿದರು.

ರಾಜ್ಯ ಜೆಡಿಎಸ್ ಘಟಕದ ಪ್ರ ಕಾರ್ಯದರ್ಶಿ ಚಂದ್ರಶೇಖರ್, ತಾ. ಜಾದಳ ಅಧ್ಯಕ್ಷ ಹಂಪಾಪುರ ಕುಮಾರ್, ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ತಾ.ಜಾದಳ ವಕ್ತಾರ ಕೆ.ಎಲ್.ರಮೇಶ್, ತಾ.ಪಂ. ಮಾಜಿ ಸದಸ್ಯ ಹಂಗರಬಾಯನಹಳ್ಳಿ ತಮ್ಮಣ್ಣ, ಪುರಸಭೆ ಮಾಜಿ ಅಧ್ಯಕ್ಷ ಡಿ.ಕಾಂತರಾಜ್, ಮಾಜಿ ಸದಸ್ಯರಾದ ಸಂತೋಷ್ ಗೌಡ, ಕೆ.ಉಮೇಶ್, ಯುವ ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ಸೂರಿ, ಜೆಡಿಎಸ್ ವಿಜಯ್, ಡಿ.ವಿ.ಗುಡಿಕಾಶಿ, ಭೇರ್ಯ ಸೋಮು, ಮುದುಗುಪ್ಪೆ ದೇವಯ್ಯ, ಗುಡಿಕೀರ್ತಿ, ಯುವ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕುಚೇಲ ಸೇರಿದಂತೆ ಅನೇಕರು ಇದ್ದರು.

ನನ್ನ ಸರ್ಕಾರ ಸಾಮಾಜಿಕ ನ್ಯಾಯಕ್ಕೆ ಬದ್ಧ

ಸಂಸತ್ ಬಜೆಟ್ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ಭಾಷಣ

ನವದೆಹಲಿ: ನನ್ನ ಸರ್ಕಾರ 'ನಿಜವಾದ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಧವಾರ ಹೇಳಿದ್ದಾರೆ.

ಇಂದು ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಮುರ್ಮು, ಪ್ರಸ್ತುತ ಸರ್ಕಾರವು ದೇಶದ ಅಭಿವೃದ್ಧಿಯನ್ನು ತ್ವರಿತಗೊಳಿಸಿದೆ. ಮಹಿಳೆಯರು ಮತ್ತು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಸಮುದಾಯಗಳನ್ನು ಒಳಗೊಂಡಂತೆ ಸಾಮಾಜಿಕ ಕಲ್ಯಾಣ ನೀತಿಗಳನ್ನು ಜಾರಿಗೆ ತರುವುದರಿಂದ ಹಿಡಿದು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ತ್ವರಿತ ಪ್ರಗತಿ ಸಾಧಿಸುತ್ತಿದೆ ಎಂದು ಸರ್ಕಾರದ ಹಲವು ಸಾಧನೆಗಳನ್ನು ಪಟ್ಟಿ ಮಾಡಿದರು.

ದೇಶದ ಸುಮಾರು 95 ಕೋಟಿ ನಾಗರಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳು ಈಗ ಲಭ್ಯವಾಗಿವೆ ಮತ್ತು ಕಳೆದ 10 ವರ್ಷಗಳಲ್ಲಿ 25 ಕೋಟಿ ಭಾರತೀಯರು ಬಡತನದಿಂದ ಮುಕ್ತರಾಗಿದ್ದಾರೆ ಎಂದು ರಾಷ್ಟ್ರಪತಿ ತಿಳಿಸಿದರು.

ಬಾಬಾಸಾಹೇಬ್ ಅಂಬೇಡ್ಕರ್ ಅವರು ಪ್ರಚಾರ ಮಾಡಿದ ಮತ್ತು ಸಂವಿಧಾನದಲ್ಲಿ ಪ್ರತಿಪಾದಿಸಲಾದ ಆದರ್ಶಗಳು ಇಂದಿಗೂ ದೇಶದ ಜನತೆಗೆ ಸ್ಫೂರ್ತಿ ನೀಡುತ್ತಿವೆ. ನನ್ನ ಸರ್ಕಾರ ನಿಜವಾದ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ ಎಂದು ಅವರು ಹೇಳಿದರು.



ಲೋಕಸಭೆ–ರಾಜ್ಯಸಭೆಯ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮಾತನಾಡಿದರು.

ನಿಜವಾದ ಸಾಮಾಜಿಕ ನ್ಯಾಯ ಎಂದರೆ ದೇಶದ ಪ್ರತಿಯೊಬ್ಬ ನಾಗರಿಕನು ಯಾವುದೇ ತಾರತಮ್ಯವಿಲ್ಲದೆ ತಮ್ಮ ಹಕ್ಕಿನ ಪಾಲನ್ನು ಪಡೆಯುತ್ತಾನೆ ಎಂದು ಮುರ್ಮು ತಿಳಿಸಿದರು.

ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಎಂಬ ಸರ್ಕಾರದ ದೃಷ್ಟಿಕೋನದಿಂದಾಗಿ ದಲಿತ ಮತ್ತು ಆದಿವಾಸಿ ಸಮುದಾಯಗಳಿಗೆ ಈಗ ಎಲ್ಲಾ ಪ್ರಯೋಜನಗಳು ಲಭ್ಯವಾಗುತ್ತಿವೆ. ಭ್ರಷ್ಟಾಚಾರ ಮುಕ್ತ ವ್ಯವಸ್ಥೆಯನ್ನು ನಿರ್ಮಿಸಲಾಗಿದೆ. ರಾಷ್ಟ್ರದ ಅಭಿವೃದ್ಧಿಗೆ ಪ್ರತಿ ರೂಪಾಯಿ ಖರ್ಚು ಮಾಡುವುದನ್ನು ಸರ್ಕಾರ ಖಚಿತಪಡಿಸುತ್ತಿದೆ ಎಂದರು.

ಕಳೆದ 10–11 ವರ್ಷಗಳಲ್ಲಿ, ಭಾರತವು ಪ್ರತಿಯೊಂದು ವಲಯದಲ್ಲಿ ತನ್ನ ಅಡಿಪಾಯವನ್ನು ಬಲಪಡಿಸಿದೆ ಎಂದು ರಾಷ್ಟ್ರಪತಿಗಳು ಹೇಳಿದರು. ಉತ್ಪಾದನಾ ವಲಯದಲ್ಲಿ, ನಿರ್ದಿಷ್ಟವಾಗಿ ಎಲೆಕ್ಟ್ರಾನಿಕ್ಸ್ ಹಾಗೂ ಕೃಷಿ ಸರಕುಗಳು ಮತ್ತು ಮೀನುಗಾರಿಕೆಯಲ್ಲಿ ಭಾರತದ ಬೆಳವಣಿಗೆಯನ್ನು ಮುರ್ಮು ಶ್ಲಾಘಿಸಿದರು.

ಮೂಲಸೌಕರ್ಯ ಅಭಿವೃದ್ಧಿಗೆ ರೈಲ್ವೆ ಒಂದು ಉತ್ತಮ ಉದಾಹರಣೆ. ಭಾರತೀಯ ರೈಲ್ವೆಯ ಸಾಧನೆಗಳನ್ನು ಶ್ಲಾಘಿಸಿದ ರಾಷ್ಟ್ರಪತಿ ಮುರ್ಮು, ಇತ್ತೀಚಿನ ವರ್ಷಗಳಲ್ಲಿ ರೈಲು ಸಂಪರ್ಕ ಮತ್ತು ಸೌಲಭ್ಯಗಳು ಗಮನಾರ್ಹವಾಗಿ ಸುಧಾರಿಸಿವೆ ಎಂದು ಹೇಳಿದರು.

ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ಸೇವೆ ಸಲ್ಲಿಸುತ್ತಿರುವ ಭಾರತೀಯ ರೈಲ್ವೆ ಶೀಘ್ರದಲ್ಲೇ ಶೇಕಡಾ 100 ರಷ್ಟು ವಿದ್ಯುದೀಕರಣವನ್ನು ಸಾಧಿಸಲಿದೆ ಎಂದು ಮುರ್ಮು ತಿಳಿಸಿದರು.

ಅಜಿತ್ ಪವಾರ್ ನಿಧನಕ್ಕೆ ಸಂತಾಪ: ಇಂದು ಬೆಳಗ್ಗೆ ಸಂಭವಿಸಿದ ವಿಮಾನ ದುರಂತದಲ್ಲಿ ಮೃತಪಟ್ಟ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ನಿಧನಕ್ಕೆ ರಾಷ್ಟ್ರಪತಿ ಮುರ್ಮು ಅವರು ಸಂತಾಪ ಸೂಚಿಸಿದರು.

ಅಜಿತ್ ಪವಾರ್ ಅವರ ಅಕಾಲಿಕ ನಿಧನವು ತುಂಬಲಾಗದ ನಷ್ಟವಾಗಿದೆ. ಮಹಾರಾಷ್ಟ್ರದ ಅಭಿವೃದ್ಧಿಗೆ, ವಿಶೇಷವಾಗಿ ಸಹಕಾರಿ ವಲಯದಲ್ಲಿ ಅವರ ವಿಶೇಷ ಕೊಡುಗೆಗಾಗಿ ಅವರನ್ನು ಯಾವಾಗಲೂ ಸ್ಮರಿಸಲಾಗುವುದು" ಎಂದು ರಾಷ್ಟ್ರಪತಿಗಳು ಹಿಂದಿಯಲ್ಲಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಕಿ (ತ) + ಹಾಟ್‌ಸ್ಪಾಟ್ (ತ)	2+2 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
---	---

ಎಟಿಎಂ ಸಿಬ್ಬಂದಿಯಿಂದಲೇ 1.3 ಕೋಟಿ ರೂ. ಲೂಟಿ: ಏಳು ಖದೀಮರ ಪತ್ತೆಗೆ ಪೊಲೀಸರ ಹುಡುಕಾಟ

ಬೆಂಗಳೂರು: ಎಟಿಎಂಗೆ ತುಂಬಬೇಕಿದ್ದ 1.3 ಕೋಟಿಗೂ ಅಧಿಕ ಹಣವನ್ನು ಸಿಬ್ಬಂದಿಯೇ ದೋಚಿ ಪರಾರಿಯಾಗಿದ್ದಾರೆ. 80 ಅಡಿ ರಸ್ತೆಯಲ್ಲಿರುವ ಕೋರಮಂಗಲದ ಆಕ್ಸಿಸ್ ಬ್ಯಾಂಕ್ ಶಾಖೆಯಲ್ಲಿ ಈ ಲೂಟಿ ಘಟನೆ ನಡೆದಿದೆ. ಈ ಸಂಬಂಧ ಜ.19 ರಂದು ಏಳು ಸಿಬ್ಬಂದಿ ವಿರುದ್ಧ ಕೋರಮಂಗಲ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

ಮಹಿಳೆ ಸೇರಿದಂತೆ ಏಳು ಆರೋಪಿಗಳು ಹಿಟಾಚಿ ಪೇಮೆಂಟ್ ಸರ್ವಿಸಸ್ ಲಿಮಿಟೆಡ್‌ನ ಉದ್ಯೋಗಿಗಳಾಗಿದ್ದು, ನಗರದಾದ್ಯಂತ ವಿವಿಧ ಎಟಿಎಂಗಳಲ್ಲಿ ಹಣವನ್ನು ತುಂಬಲು ಅವರನ್ನು ನಿಯೋಜಿಸಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿಗಳು ಬ್ಯಾಂಕ್‌ನಿಂದ ಹಣವನ್ನು ಸಂಗ್ರಹಿಸಿದ್ದಾರೆ. ಆದರೆ ಅದರಲ್ಲಿ ಒಂದು ಭಾಗವನ್ನು ಎಟಿಎಂ ಯಂತ್ರಗಳಿಗೆ ಜಮಾ ಮಾಡದೆ. ಅದನ್ನು ತಮ್ಮ ವೈಯಕ್ತಿಕ ಲಾಭಕ್ಕಾಗಿ ಬಳಸಿಕೊಂಡು 1 ಲಕ್ಷದಿಂದ 2 ಲಕ್ಷದವರೆಗೆ ಕದ್ದಿದ್ದಾರೆ.

ಕಂಪನಿಯ ಆಂತರಿಕ ತನಿಖೆಯ ಪ್ರಕಾರ ಏಪ್ರಿಲ್ 2024 ಮತ್ತು ಜೂನ್ 2025ರ ನಡುವೆ ಈ ವಂಚನೆ ನಡೆದಿದ್ದು, ದೂರು ದಾಖಲಿಸಲಾಗಿದೆ. ಪ್ರವೀಣ್, ಧನಶೇಖರ್, ಹರೀಶ್ ಕುಮಾರ್ ಮತ್ತು ರಾಮಕ್ಕ ವಿರುದ್ಧ 57,96,400 ರೂ. ಹರೀಶ್ ಕುಮಾರ್, ಪ್ರವೀಣ್ ಮತ್ತು ವರುಣ್ ವಿರುದ್ಧ 80,49,000 ರೂ.ಗಳನ್ನು ದುರ್ಬಳಕೆ ಮಾಡಿಕೊಂಡಿದ್ದಕ್ಕಾಗಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಎರಡು ಪ್ರಕರಣಗಳನ್ನು ಬಿಎನ್‌ಎಸ್‌ನ ಸೆಕ್ಷನ್ 316 (ಕ್ರಿಮಿನಲ್ ನಂಬಿಕೆಯ ಉಲ್ಲಂಘನೆ) ಮತ್ತು 318 (ವಂಚನೆ) ಅಡಿಯಲ್ಲಿ ದಾಖಲಿಸಲಾಗಿದೆ. ದುರುಪಯೋಗ ಮತ್ತಿತರ ವಿವರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸುತ್ತಿದ್ದು, ಆರೋಪಿಗಳಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟಿ20 ಸರಣಿ: ನ್ಯೂಜಿಲೆಂಡ್‌ಗೆ ಮೊದಲ ಗೆಲುವು



ಕಿವೀಸ್ ತಂಡದ ಆಟಗಾರರ ಸಂಭ್ರಮ

ವಿಶಾಖಪಟ್ಟಣಂ, ಜ.28(ವಿವಿಹೆಚ್)– ಸಂಘಟಿತ ಬ್ಯಾಟಿಂಗ್ ಮತ್ತು ಬೌಲಿಂಗ್ ಬಲದಿಂದ ಅತಿಥೇಯ ಭಾರತ ತಂಡವನ್ನು 50 ರನ್ ಗಳಿಂದ ಮಣಿಸಿದ ಪ್ರವಾಸಿ ನ್ಯೂಜಿಲೆಂಡ್ ತಂಡ ಟಿ20 ಪಂದ್ಯಾವಳಿಯಲ್ಲಿ ಮೊದಲ ಗೆಲುವು ದಾಖಲಿಸಿತು.

ಸರಣಿಯ ನಾಲ್ಕನೇ ಟಿ20 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 215 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಭಾರತ 18.4 ಓವರ್‌ಗಳಲ್ಲಿ ಆಲೌಟ್ ಆಗುವ ಮೂಲಕ 165 ರನ್ ಗಳಿಸಿತು.

ನ್ಯೂಜಿಲೆಂಡ್ ಇನ್ನಿಂಗ್ಸ್: ಮೊದಲು ಬ್ಯಾಟಿಂಗ್‌ಗೆ ಇಳಿದ ನ್ಯೂಜಿಲೆಂಡ್ ಪರ ಆರಂಭಿಕ ಆಟಗಾರರಾದ ಡೆವೊನ್ ಕಾನ್ವೇ ಹಾಗೂ ಟಿಮ್ ಸೈಫರ್ಟ್ ಉತ್ತಮ ಆರಂಭ ಒದಗಿಸಿಕೊಟ್ಟರು. ಕಾನ್ವೆ 23 ಎಸೆತಗಳಲ್ಲಿ 44 ರನ್ ಗಳಿಸಿದರೆ, ಸೈಫರ್ಟ್ 36 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಸಹಿತ 62 ರನ್ ಗಳಿಸಿ, ಮೊದಲ ವಿಕೆಟ್‌ಗೆ 100 ರನ್‌ಗಳ ಸ್ಫೋಟಕ ಜೊತೆಯಾಟವಾಡಿದರು.

ಉತ್ತಮ ಆರಂಭದೊಂದಿಗೆ ಬೃಹತ್ ಮೊತ್ತ ಕಲೆಹಾಕುವ ಸೂಚನೆ ನೀಡಿದ್ದ ಕೀವಿಸ್ ಮಧ್ಯಮ ಕ್ರಮಾಂಕದಲ್ಲಿ ಎಡವಿತು. ರಚಿನ್ ರವೀಂದ್ರ 2, ಗ್ಲೇನ್ ಫಿಲಿಪ್ಸ್ 24, ಮಾರ್ಕ್ ಚಾಪ್‌ಮನ್ 9, ನಾಯಕ ಮಿಚೆ ಸ್ಯಾಂಟ್ನರ್ 11 ಹಾಗೂ ಜಾಕ್ರಿ ಫೋಕ್ಸ್ 13 ರನ್ ಗಳಿಸಿ ನಿರ್ಗಮಿಸಿದರು.

ಡೆತ್ ಓವರ್‌ನಲ್ಲಿ ಮಿಂಚಿದ ಡೇರಿಲ್ ಮಿಚೆಲ್ 18 ಎಸೆತಗಳಲ್ಲಿ ಅಜೇಯ 39 ರನ್ ಗಳಿಸುವ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ಮ್ಯಾಟ್ ಹೆನ್ರಿ 6 ರನ್ ಗಳಿಸಿ ಸ್ಕ್ರೀಜ್‌ನಲ್ಲಿದ್ದರು.

ಟೀಂ ಇಂಡಿಯಾ ಪರ ಕುಲದೀಪ್ ಯಾದವ್, ಅರ್ಶದೀಪ್ ಸಿಂಗ್ ತಲಾ 2 ವಿಕೆಟ್ ಕಿತ್ತರೆ, ಬೂಮ್ರಾ ಮತ್ತು ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಟೀಂ ಇಂಡಿಯಾ ಇನ್ನಿಂಗ್ಸ್: ಬೃಹತ್ ಮೊತ್ತ ಬೆನ್ನತ್ತಿದ ಭಾರತಕ್ಕೆ ಆರಂಭಿಕ ಆಘಾತ ಎದುರಾಯಿತು. ಅಭಿಷೇಕ್ ಶರ್ಮಾ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಗೋಲ್ಡನ್ ಡಕ್ ಆಗಿ ಪೆವಿಲಿಯನ್ ಸೇರಿದರು. ಬಳಿಕ ಬಂದ ನಾಯಕ ಸೂರ್ಯಕುಮಾರ್ ಯಾದವ್ 8, ಹಾರ್ದಿಕ್ ಪಾಂಡ್ಯ 2 ರನ್ ಗಳಿಸಿ ಔಟಾದರು.

ಭರ್ಜರಿ ಇನ್ನಿಂಗ್ಸ್ ಕಟ್ಟುವ ಮುನ್ಸೂಚನೆ ನೀಡಿದ್ದ ಸಂಜು 24 ರನ್ ಗಳಿಸಿದ್ದ ವೇಳೆ ಸ್ಯಾಂಟ್ನರ್‌ಗೆ ಕ್ಲೀನ್ ಬೌಲ್ಡ್ ಆದರೆ, ರಿಂಕು ಸಿಂಗ್ 39 ರನ್ ಗಳಿಸಿ, ಫೋಕ್ಸ್‌ರ ಎಲ್‌ಬಿಡಬ್ಲ್ಯೂ ಬಲೆಗೆ ಬಿದ್ದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಭರ್ಜರಿಯಾಗಿ ಬ್ಯಾಟ್ ಬೀಸಿದ ಶಿವಂ ದುಬೆ ಕೇವಲ 15 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದರು. ಆ ಮೂಲಕ ಟಿ20ಯಲ್ಲಿ ತಮ್ಮ ವೈಯಕ್ತಿಕ 5ನೇ ಅರ್ಧಶತಕ ದಾಖಲಿಸಿದರು. ಕೇವಲ 23 ಎಸೆತಗಳಲ್ಲಿ 3 ಬೌಂಡರಿ ಹಾಗೂ 7 ಭರ್ಜರಿ ಸಿಕ್ಸರ್ ಸಹಿತ 65 ರನ್ ಚಚ್ಚಿ ಔಟಾದರು. ಅಂತಿಮವಾಗಿ ಹರ್ಷಿತ್ ರಾಣಾ 9, ಅರ್ಶದೀಪ್ ಸಿಂಗ್ ಡಕ್‌ಔಟ್, ಬುಮ್ರಾ 4, ಕುಲ್ದೀಪ್ ಯಾದವ್ 1 ರನ್ ಗಳಿಸಿ ಔಟಾದರೆ, ರವಿ ಬಿಷ್ಣೋಯ್ ಅಜೇಯ 10 ರನ್ ಗಳಿಸಿದರು. ಕಿವೀಸ್ ಪರ ಸ್ಯಾಂಟ್ನರ್ 3 ವಿಕೆಟ್, ಜಾಕೋಬ್ ಡಫಿ ಹಾಗೂ ಇಶ್ ಸೋಧಿ ತಲಾ 2 ವಿಕೆಟ್, ಮ್ಯಾಟ್ ಹೆನ್ರಿ ಮತ್ತು ಫೋಕ್ಸ್ ತಲಾ ಒಂದೊಂದು ವಿಕೆಟ್ ಪಡೆದು ಗಮನ ಸೆಳೆದರು.

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ



ಕೇಶವ ಜೋಷಿ



ಪ್ರೊ. ನರೇಂದ್ರ ನಾಯಕ್



ವೆಂಕಟೇಶ್


ಮೈಸೂರು, ಜ.28– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಫೆ.1ರಂದು ಭಾನುವಾರ ಸಂಜೆ 6 ಗಂಟೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–288ರ ಅಂಗವಾಗಿ ಪಂ.ಎಂ. ವೆಂಕಟೇಶ ಕುಮಾರ್ ಅವರಿಂದ ಗಾಯನ ಏರ್ಪಡಿಸಲಾಗಿದೆ.

ಪಂ.ಎಂ. ವೆಂಕಟೇಶಕುಮಾರ್ ಅವರು ರಾಷ್ಟ್ರದ ಅತ್ಯುನ್ನತ ಹಿಂದೂಸ್ತಾನಿ ಗಾಯಕರಲ್ಲೊಬ್ಬರು. ಇವರು ಬಳ್ಳಾರಿ ಜಿಲ್ಲೆಯ ಲಕ್ಷ್ಮೀಪುರದಲ್ಲಿ 1953ರಲ್ಲಿ ಜನಿಸಿದರು. ತಾಯಿ ಪಾರ್ವತಮ್ಮನವರು. ತಂದೆ ಹುಲೆಪ್ಪನವರು ಜಾನಪದ ಕಲಾವಿದರು, ಕರ್ನಾಟಕ ಸಂಗೀತವನ್ನು ಬಲ್ಲವರು. ರಾಮಾಯಣ–ಮಹಾಭಾರತದ ಸನ್ನಿವೇಶಗಳನ್ನು ನಿರರ್ಗಳವಾಗಿ ಸಂಗೀತದ ಮಾಧ್ಯಮದಲ್ಲಿ ಪ್ರಸ್ತುತಪಡಿಸಬಲ್ಲ ಸಾಮರ್ಥ್ಯ ಹೊಂದಿದ್ದರು. ಸೋದರಮಾವ ಬೆಳಗಲ್ ವೀರಣ್ಣನವರು ನಾಡಿನ ವಿಖ್ಯಾತ ರಂಗಭೂಮಿ ಕಲಾವಿದರು. ಬಾಲ್ಯದಿಂದಲೇ ಸಂಗೀತದತ್ತ ಒಲವು ಹೊಂದಿದ್ದ ವೆಂಕಟೇಶಕುಮಾರ್ ಅವರನ್ನು ಗದುಗಿನ ವೀರೇಶ್ವರ ಪುಣ್ಯಾಶ್ರಮದ ಶ್ರೀ ಪುಟ್ಟರಾಜ ಗವಾಯಿಗಳ ಬಳಿಗೆ ತಂದೊಪ್ಪಿಸಲಾಯಿತು. ಅವರ ಪದತಲದಲ್ಲಿ ಕುಳಿತು ಗುರು–ಶಿಷ್ಯ ಪರಂಪರೆಯಲ್ಲಿ ಸುಮಾರು 12 ವರ್ಷಗಳ ಕಾಲ ಸಂಪ್ರದಾಯ ಬದ್ಧವಾಗಿ ಸಂಗೀತಾಧ್ಯಯನ ಮಾಡಿದರು.

ಹಾರ್ಮೋನಿಯಂ ಸಹಕಾರ ನೀಡುತ್ತಿರುವ ಪ್ರೊ. ನರೇಂದ್ರ ಎಲ್. ನಾಯಕ್, ಖ್ಯಾತ ಸಂಗೀತ ದಿಗ್ಗಜರಾದ ಪಂ.ವಸಂತ್ ಕನಕಾಪುರ್, ಉಸ್ತಾದ್ ರಫೀಕ್ ಖಾನ್ ಮತ್ತು ಪಂ.ವ್ಯಾಸಮೂರ್ತಿ ಕಟ್ಟಿಯವರ ಬಳಿ ಸಂಗೀತ ಶಿಕ್ಷಣ ಪಡೆದು ಒಳ್ಳೆಯ ಗಾಯಕರಾಗಿ ಮತ್ತು ಹಾರ್ಮೋನಿಯಂ ಕಲಾವಿದರಾಗಿ ರೂಪುಗೊಂಡಿದ್ದಾರೆ. ಬಾಲ್ಯದಿಂದಲೂ ಸಂಗೀತದ ಬಗ್ಗೆ ಅದಮ್ಯ ಆಸಕ್ತಿ. ಹಲವಾರು ಸಂಗೀತ ದಿಗ್ಗಜರ ಜೊತೆಗೆ ವೇದಿಕೆ ಹಂಚಿಕೊಂಡಿರುವವರು. ಅಖಿಲ ಭಾರತ ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ಮಂಗಳೂರಿನ ಸಾಂಸ್ಕೃತಿಕ ಸಂಸ್ಥೆ ಸಂಗೀತ ಭಾರತ್ ಫೌಂಡೇಷನ್ನಿನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಸೂರತ್ಕಲ್‌ನ ಎನ್‌ಐಟಿಕೆ ಕಾಲೇಜಿನಲ್ಲಿ ಪ್ರಾಧ್ಯಾಪಕರೂ ಆಗಿರುವ ಇವರು ಉನ್ನತ ಶಿಕ್ಷಣ ಕ್ಷೇತ್ರದಲ್ಲೂ ಅಸಾಧಾರಣ ಸಾಧನೆ ಮಾಡಿದ್ದಾರೆ.

ತಬಲ ಸಹಕಾರ ನೀಡುತ್ತಿರುವ ಪಂ. ಕೇಶವ್ ಜೋಷಿ, ಎಂಟನೆಯ ವರ್ಷದಿಂದಲೇ ಸಂಗೀತದತ್ತ ಆಕರ್ಷಿತರಾದವರು. ಮೊದಲಿಗೆ ಪಂ.ಆರ್.ಎಚ್. ಮೋರೆಯವರ ಬಳಿ 12 ವರ್ಷ ಶಿಷ್ಯವೃತ್ತಿ, ಅನಂತರ ಪಂ. ಕರವೀರ್ ಮಲ್ಲಾಪುರರವರ ಬಳಿ ಶಿಕ್ಷಣ ಮುಂದುವರಿಕೆ. ಬಳಿಕ ಬನಾರಸ್ ಘರಾನಾದ ಪಂ. ಈಶ್ವರಲಾಲ್ ಮಿಶ್ರ ಮತ್ತು ಧಾರವಾಡದ ಪಂ. ಸೂರಜ್ ಪುರಂದರೆಯವರ ಬಳಿ ಉನ್ನತ ತರಬೇತಿ. ರಾಷ್ಟ್ರೀಯ ಮಟ್ಟದ ತಬಲಾ ಅಲಂಕಾರ್ ಪ್ರಶಸ್ತಿಗೆ ಭಾಜನರು.

ಗಣರಾಜ್ಯೋತ್ಸವ



ಕರ್ನಾಟಕ ದಲಿತ ಪ್ಯಾಂಥರ್ಸ್ ಸಂಘಟನೆ ವತಿಯಿಂದ ಗಾಂಧಿನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನ ಪೀಠಿಕೆ ಓದು ಮೂಲಕ 77ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಸಂಘಟನೆಯ ಉಪಾಧ್ಯಕ್ಷ ವೆಂಕಟಗಿರಿ, ಪದಾಧಿಕಾರಿಗಳಾದ ಧನಲಕ್ಷ್ಮಿ, ಅನುಪಮ್, ಕಿರಣಕುಮಾರ್, ಮಹೇಶ್, ಚೇತನ್ ಕಾಂತರಾಜ್, ಅರವಿಂದ್, ದಿನೇಶ್, ಸಿದ್ದರಾಜು, ರಮೇಶ್, ನವೀನ್, ಧನಂಜಯ್, ಜವರಪ್ಪ, ಕುಮಾರಣ್ಣ, ಕೇಶವ ರಘು, ಚೆಲುವ ಇನ್ನಿತರರು ಉಪಸ್ಥಿತರಿದ್ದರು.

ಆಗ್ರಾದಲ್ಲಿ ಲವರ್‌ನಿಂದ ಹೆಚ್‌ಆರ್ ಮ್ಯಾನೇಜರ್ ಹತ್ಯೆ

ಆಗ್ರಾ (ಯುಪಿ): ಉತ್ತರ ಪ್ರದೇಶದ ಆಗ್ರಾದಲ್ಲಿ ಪೈಶಾಚಿಕ ಕೃತ್ಯ ನಡೆದಿದೆ. 30 ವರ್ಷದ ವ್ಯಕ್ತಿಯೊಬ್ಬ ಹೆಚ್‌ಆರ್ ಮ್ಯಾನೇಜರ್ ಆಗಿದ್ದ ತನ್ನ ಲವರ್ ಕೊಂದು, ಆಕೆಯ ದೇಹವನ್ನು ತುಂಡು ತುಂಡಾಗಿ ಕತ್ತರಿಸಿದ್ದಾನೆ. ಬಳಿಕ ತಲೆಯನ್ನು ಚೀಲವೊಂದರಲ್ಲಿ ಹಾಕಿ ಕಾಲುವೆಗೆ ಎಸೆದಿದ್ದಾನೆ. ಆರೋಪಿಯನ್ನು ಬಂಧಿಸಲಾಗಿದ್ದು, ತಲೆಯ ಪತ್ತೆಗೆ ಪ್ರಯತ್ನ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ರೀತಿ ಹತ್ಯೆಯಾದ ಯುವತಿಯನ್ನು ಮಿಂಕಿ ಶರ್ಮಾ(30) ಎಂದು ಗುರುತಿಸಲಾಗಿದೆ. ಆಗ್ರಾದ ಖಾಸಗಿ ಕಂಪನಿಯೊಂದರ ಕಚೇರಿಯಲ್ಲಿ ಹೆಚ್‌ಆರ್ ಮ್ಯಾನೇಜರ್ ಆಗಿದ್ದರು. ಅದೇ ಕಂಪನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದ ವಿನಯ್ ಅವರೊಂದಿಗೆ ಸಂಬಂಧ ಹೊಂದಿದ್ದರು ಎಂಬುದು ತಿಳಿದುಬಂದಿದೆ ಎಂದು ಡಿಸಿಪಿ (ನಗರ) ಸೈಯದ್ ಅಲಿ ಅಬ್ಬಾಸ್ ತಿಳಿಸಿದ್ದಾರೆ.

ವಿನಯ್ ಮಿಂಕಿಯನ್ನು ಮದುವೆಯಾಗಲು ಬಯಸಿದ್ದ, ಆದರೆ ಆಕೆ ನಿರಾಕರಿಸಿದ್ದಾರೆ. ಇದು ಅವರಿಬ್ಬರ ನಡುವೆ ಜಗಳಕ್ಕೆ ಕಾರಣವಾಗಿದೆ. ವಾಗ್ವಾದದ ನಂತರ ತೆಂಗಿನಕಾಯಿ ಕತ್ತರಿಸಲು ಬಳಸುವ ಚಾಕುವಿನಿಂದ ಪದೇ–ಪದೆ ಚುಚ್ಚಿದ್ದು, ಆಕೆಯ ಕುತ್ತಿಗೆಗೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ ನಂತರ ದೇಹವನ್ನು ತುಂಡು ತುಂಡಾಗಿ ಕತ್ತರಿಸಿದ್ದು, ಪ್ಲಾಸ್ಟಿಕ್ ಚೀಲದಲ್ಲಿ ಪ್ಯಾಕ್ ಮಾಡಿ ಪಾರ್ಸೆಲ್ ಟೇಪ್‌ನಿಂದ ಮುಚ್ಚಿದ್ದಾನೆ. ತಲೆಯನ್ನು ಪ್ರತ್ಯೇಕ ಗೋಣಿಚೀಲದಲ್ಲಿ ಇರಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜ.24ರ ತಡರಾತ್ರಿ ಈ ಘಟನೆ ನಡೆದಿದ್ದು, ತದನಂತರ ಆರೋಪಿ ಶವವನ್ನು ಗೋಣಿ ಚೀಲದಲ್ಲಿ ಹಾಕಿ ಯಮುನಾ ನದಿಗೆ ಎಸೆಯಲು ಹೊರಟಿದ್ದಾನೆ. ಆದರೆ ಅದನ್ನು ಸೇತುವೆಯ ಮೇಲೆ ಬಿಟ್ಟು ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ತುಂಡು ತುಂಡಾಗಿದ್ದ ತಲೆಯನ್ನು ಕಪ್ಪು ಪ್ಯಾಕೆಟ್‌ನಲ್ಲಿಟ್ಟು ಕಾಲುವೆಯಲ್ಲಿ ಎಸೆದಿದ್ದು, ಅದನ್ನು ಪತ್ತೆ ಹಚ್ಚಲು ಮುಳುಗು ತಜ್ಞರನ್ನು ನಿಯೋಜಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಹಲವು ಸಿಸಿಟಿವಿ ದೃಶ್ಯಗಳು ಮತ್ತು ಕಚೇರಿಯಲ್ಲಿ ದೊರೆತ ಪುರಾವೆಗಳ ಆಧಾರದ ಮೇಲೆ ಪೊಲೀಸರು ಜ.25 ರಂದು ವಿನಯ್‌ನನ್ನು ಬಂಧಿಸಿದ್ದಾರೆ.

ನಾಳೆಯಿಂದ ಸಿಲ್ಕ್ ಇಂಡಿಯಾ-2026 ಮೇಳ

ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ, ಮಾರಾಟ

ಮೈಸೂರು, ಜ.28(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಜ.30 ರಿಂದ ಫೆ.8ರವರೆಗೆ ಪರಿಶುದ್ಧ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಸಿಲ್ಕ್ ಇಂಡಿಯಾ–2026 ಮೇಳ ಆಯೋಜಿಸಲಾಗಿದೆ.

ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳ 60ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ವಾಯುಗುಣ ಮತ್ತು ನಿಸರ್ಗಕ್ಕೆ ಅನುಗುಣವಾಗಿ ತಸ್ಸರ್, ಎರಿ, ಮುಲ್ಬಾರಿ ಮತ್ತು ಮುಗಾ ರೇಷ್ಮೆ ಸೇರಿದಂತೆ ವಿವಿಧ ರಾಜ್ಯಗಳ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಮಾರಾಟ ಇರಲಿದೆ.

ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ ನಡೆಯುವ ಸಿಲ್ಕ್ ಇಂಡಿಯಾ ಮೇಳದಲ್ಲಿ ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕಲ್ಕೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲ್ಲೂರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೇಟಿರಿಯಲ್‌ಗಳು ಮತ್ತು ಸೀರೆಗಳು, ಬಾಗಲ್ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್ ಉಳ್ಳ ಮುಲ್ಬಾರಿ ಸಿಲ್ಕ್, ಕೊಲ್ಕೊತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್ದಾನಿ ರೇಷ್ಮೆ, ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಪ್ರದರ್ಶನಗೊಳ್ಳಲಿವೆ. ಇದಲ್ಲದೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್ವಾರ್ ಕಮೀಜ್ ಮತ್ತು ಉಡುಪಿನ ಬಟ್ಟೆಗಳು, ಕುಶನ್ ಕವರ್‌ಗಳು ಲಭ್ಯವಿವೆ.



ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ನಿಧನಕ್ಕೆ ಗಣ್ಯರ ಸಂತಾಪ

ಬೆಂಗಳೂರು, ಜ.28(ಕೆಎಂಶಿ)–ವಿಮಾನ ದುರಂತದಲ್ಲಿ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ನಿಧನಕ್ಕೆ ಅನೇಕ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.



ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಂತಾಪ ವ್ಯಕ್ತಪಡಿಸಿ, ಅಜಿತ್ ಪವಾರ್ ಅವರ ಅಕಾಲಿಕ ಮರಣ ವಾರ್ತೆ ತಿಳಿದು ತೀವ್ರ ಆಘಾತ ಉಂಟಾಯಿತು. ಮಹಾರಾಷ್ಟ್ರದ ಪ್ರಭಾವಿ ನಾಯಕರಾಗಿದ್ದ ಅವರು, ಅಪಾರ ಜನಪ್ರಿಯತೆಗಳಿಸಿದ್ದರು, ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಪ್ರಾರ್ಥಿಸಿದ್ದಾರೆ.

ಅಜಿತ್ ಪವಾರ್ ಅವರ ಕುಟುಂಬಕ್ಕೆ, ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂತಾಪ ವ್ಯಕ್ತಪಡಿಸಿ, ಅಜಿತ್ ಪವಾರ್ ಸಾವು ಆಘಾತಕಾರಿ, ಸಾವಿನ ಸುದ್ದಿ ಕೇಳಿ ಗಾಬರಿಯಾಯಿತು. ಅತ್ಯಂತ ಪ್ರಗತಿಪರ ಆಲೋಚನೆ ಹೊಂದಿದ್ದ ಅವರು, ಎಲ್ಲಾ ಕೆಲಸಗಳಲ್ಲೂ ಸಹಕಾರ ಕೊಡುತ್ತಿದ್ದಾರೆ ಎಂಬುದಾಗಿ ಮೊನ್ನೆಯಷ್ಟೇ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದರು.

ಅಜಿತ್ ಪವಾರ್ ಆತ್ಮಕ್ಕೆ ಶಾಂತಿ ದೊರೆಯಲಿ. ಅವರ ಕುಟುಂಬ ವರ್ಗ ಹಾಗೂ ಬೆಂಬಲಿಗರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಂತಾಪ ಸಂದೇಶ ನೀಡಿದ್ದು, ಮಹಾರಾಷ್ಟ್ರದ ಹಿರಿಯ ರಾಜಕಾರಣಿ, ಉಪಮುಖ್ಯಮಂತ್ರಿ ಅಜಿತ್ ಪವಾರ್ ವಿಮಾನ ದುರಂತದಲ್ಲಿ ದುರ್ಮರಣ ಹೊಂದಿರುವುದು ಬಹಳ ಆಘಾತಕಾರಿ ಸುದ್ದಿಯಾಗಿದೆ ಎಂದಿದ್ದಾರೆ. ಎಂಟು ಬಾರಿ ಶಾಸಕರಾಗಿ, ಆರು ಬಾರಿ ಉಪಮುಖ್ಯಮಂತ್ರಿಯಾಗಿದ್ದ ಅವರು ಹಿರಿಯ ರಾಜಕಾರಣಿ. ಅವರ ಅಗಲಿಕೆಯ ನೋವು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ಸದಸ್ಯರಿಗೆ, ಬೆಂಬಲಿಗರಿಗೆ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

ಜನಾರ್ಧನ್ ರಾವ್ ಜಾದವ್ ನಿಧನ

ಮೈಸೂರು, ಜ.28– ಮೈಸೂರಿನ ಜೆಸಿ ನಗರದ ನಿವಾಸಿ, ಸಿಎಫ್‌ಟಿಆರ್‌ಐ ನಿವೃತ್ತ ಮೆಕ್ಯಾನಿಕಲ್ ಇಂಜಿನಿಯರ್ ಜನಾರ್ಧನ್ ರಾವ್ ಜಾದವ್(86) ಕಳೆದ ರಾತ್ರಿ ನಿಧನರಾದರು.



ಮೃತರು ವಿದ್ಯಾವರ್ಧಕ ಇಂಜಿನಿಯರ್ ಕಾಲೇಜಿನಲ್ಲಿ ಇನ್‌ಸ್ಟ್ರಕ್ಟರ್ ಆಗಿಯೂ ಸೇವೆ ಸಲ್ಲಿಸಿದ್ದರು. ವಯೋಸಹಜ ಸಮಸ್ಯೆಯಿಂದ ಬಳಲುತ್ತಿದ್ದರು. ಮೃತರು ಪತ್ನಿ ಪುಷ್ಪಾಬಾಯಿ, ಪುತ್ರಿಯರಾದ ಉಮಾ, ಮಂಜುಳಾ, ರೂಪ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್‌ಇಪಿಯಿಂದ ಉನ್ನತ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ

ಬೆಂಗಳೂರು ಶೈಕ್ಷಣಿಕ, ಸಾಮಾಜಿಕ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ. ಗೌರೀಶ್ ಅಭಿಮತ

ಮೈಸೂರು, ಜ.28(ಎಂಕೆ)–ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ)ಯಿಂದ ಉನ್ನತ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆಯಾಗಲಿದ್ದು, ವಿಕಸಿತ ಭಾರತ್ ಶಿಕ್ಷಾ ಅಧಿಷ್ಠಾನ ಮಸೂದೆ ಮೂಲಕ ಜಾಗತಿಕ ಗುಣಮಟ್ಟದಲ್ಲಿ ಉನ್ನತ ಶಿಕ್ಷಣ ನೀಡಲು ಸಾಧ್ಯವಾಗಲಿದೆ ಎಂದು ಬೆಂಗಳೂರಿನ ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಗೌರೀಶ್ ಹೇಳಿದರು.

ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಆವರಣದಲ್ಲಿ ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ್, ಬೆಂಗಳೂರಿನ ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 'ವಿಕಸಿತ ಭಾರತ್ ಶಿಕ್ಷಾ ಅಧಿಷ್ಠಾನ ಮಸೂದೆ' ಕುರಿತ ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿಯಡಿ ಉನ್ನತ ಶಿಕ್ಷಣದಲ್ಲಿ ಎಲ್ಲಾ ವಿಷಯಗಳು ಒಳಗೊಳ್ಳಲಿದ್ದು, ವಿದ್ಯಾರ್ಥಿಗಳಲ್ಲಿ ಜ್ಞಾನದ ಜೊತೆಗೆ ಕೌಶಲ್ಯ ವೃದ್ಧಿ ಎನ್‌ಇಪಿ ಸಹಕಾರಿಯಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ 'ವಿಕಸಿತ ಭಾರತ್ ಶಿಕ್ಷಾ ಅಧಿಷ್ಠಾನ ಮಸೂದೆ' ಕುರಿತ ದುಂಡು ಮೇಜಿನ ಸಭೆ ನಡೆಯಿತು.

ರಾಷ್ಟ್ರೀಯ ಶಿಕ್ಷಣ ನೀತಿಯು ಸಂಶೋಧನೆಗೆ ಆದ್ಯತೆ ನೀಡುವುದರೊಂದಿಗೆ ಪಠ್ಯಕ್ರಮದಲ್ಲಿ ಸಾಕಷ್ಟು ಸರಳೀಕರಣವಿರಲಿದ್ದು, ಜಾಗತಿಕ ಗುಣಮಟ್ಟವನ್ನು ಹೊಂದಿರಲಿದೆ. ವಿಕಸಿತ ಭಾರತ್ ಶಿಕ್ಷಾ ಅಧಿಷ್ಠಾನ ಮಸೂದೆ–2025 ಜಾರಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಪರಿಣಾಮಕಾರಿ ಬದಲಾವಣೆಗಳಾಗಲಿದೆ ಎಂದರು.

ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ್‌ನ ಕರ್ನಾಟಕ ದಕ್ಷಿಣ್ ಪ್ರಾಂತ್‌ನ ಕಾರ್ಯದರ್ಶಿ ಡಾ.ಪ್ರವೀಣ್ ಕುಮಾರ್, ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಪ್ರೊ.ಎಸ್.ಬಿ.ಕಿವಾಡೆ, ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಸಹಾಯಕ ನಿರ್ದೇಶಕ ಡಾ.ಪಂಕಜ್ ಮತ್ತಿತರರಿದ್ದರು.

ವಿಶ್ವ ಹೆಣ್ಣು ಮಕ್ಕಳ ದಿನಾಚರಣೆ



ಮೈಸೂರಿನ ವಿದ್ಯಾರಣ್ಯಪುರಂನ ಸರ್ಕಾರಿ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ವಿಶ್ವ ಹೆಣ್ಣು ಮಕ್ಕಳ ದಿನಾಚರಣೆ, ಗಣರಾಜ್ಯೋತ್ಸವ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಬಲಿದಾನ ದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ಡ್ರೈ ಫ್ರೂಟ್ಸ್, ಹಣ್ಣು ಹಂಪಲು ವಿತರಿಸಲಾಯಿತು. ಈ ವೇಳೆ ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್, ಸಿಂಚನಗೌಡ (ಮಂಗಳಮುಖಿ), ವಿದ್ಯಾ, ಇನ್ಸ್ಟಾಗ್ರಾಮ್ ಚಂದನ್, ಬಾಲಾಜಿ, ಹಿರಿಯ ಕ್ರೀಡಾಪಟು ಮಹದೇವ್, ಛಾಯಾ, ಗಾಯಕ ಯಶವಂತ್ ಕುಮಾರ್, ಕ್ರೀಡಾ ತರಬೇತಿದಾರ ಜಗದೀಶ್, ರಾಜೇಶ್ ಕುಮಾರ್, ಮಹೇಶ್, ಎಸ್ ಪಿ ಅಕ್ಷಯ್ ಪ್ರಿಯಾದರ್ಶನ್, ದತ್ತ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯಪಾಲರಿಗೆ ಅಪಮಾನ ಆರೋಪ :

ವಿಧಾನಸಭೆಯಲ್ಲಿ ಆಡಳಿತ–ವಿಪಕ್ಷ ವಾಕ್ಸಮರ

- ರಾಜ್ಯಪಾಲರಿಗೆ ಅಪಮಾನ ಮಾಡಿದ್ದೀರಿ: ವಿಪಕ್ಷ
- ರಾಜ್ಯಪಾಲರಿಂದ ಸಂವಿಧಾನಕ್ಕೆ ಅಪಚಾರ: ಆಡಳಿತ ಪಕ್ಷ



ಬೆಂಗಳೂರು, ಜ.28(ಕೆಎಂಶಿ)– ರಾಜ್ಯಪಾಲರಿಗೆ ಅಪಮಾನ ಮಾಡಲಾಗಿದೆ ಎಂಬ ಆರೋಪ ವಿಧಾನಸಭೆಯಲ್ಲಿಂದು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿ, ಕೋಲಾಹಲದ ವಾತಾವರಣ ನಿರ್ಮಾಣವಾಯಿತು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸದನದಲ್ಲಿ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡಿದ ಆಡಳಿತ ಪಕ್ಷದ ಎ.ಎಸ್.ಪೊನ್ನಣ್ಣ ಹೇಳಿಕೆಗಳು ರಾಜ್ಯಪಾಲರಿಗೆ ಅಗೌರವ ಉಂಟು ಮಾಡಿದೆ. ರಾಜ್ಯದ ಪ್ರಥಮ ಪ್ರಜೆ ರಾಜ್ಯಪಾಲರನ್ನು ಪದೇ–ಪದೆ ಆಡಳಿತ ಪಕ್ಷ ಅಗೌರವಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು. ಈ ಹಿಂದೆ ಆರ್‌ಸಿಬಿ ವಿಜಯೋತ್ಸವದ ವೇಳೆ ಶಿಷ್ಟಾಚಾರ ಪಾಲನೆ ಮಾಡದೆ ರಾಜ್ಯಪಾಲರನ್ನು ಕರೆತರಲಾಗಿತ್ತು, ಜ.22ರಂದು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲು ರಾಜ್ಯಪಾಲರನ್ನು ಕರೆತಂದಾಗಲೂ ಅವಮಾನ ಮಾಡಲಾಗಿದೆ. ಗೌರವಪೂರ್ವಕವಾಗಿ ರಾಜ್ಯಪಾಲರನ್ನು ಕರೆತಂದು ಕಳುಹಿಸಬೇಕಾಗಿರುವುದು ಸರ್ಕಾರದ ಕರ್ತವ್ಯ, ಆದರೆ ಇಲ್ಲಿ ಅಪಮಾನ ಮಾಡಲಾಗಿದೆ ಎಂದರು.

ಈ ಹಿಂದೆ ನಿಮ್ಮ ರಾಜ್ಯಪಾಲರೊಂದಿಗೆ ಆಗಿನ ಸರ್ಕಾರಗಳು ಅವಮಾನ ಮಾಡಿರಲಿಲ್ಲ ಎಂದಾಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯಪ್ರವೇಶಿಸಿ, ರಾಜ್ಯಪಾಲರಲ್ಲಿ ನಿಮ್ಮವರು, ನಮ್ಮವರು ಎಂಬುದಿಲ್ಲ. ಅವರು ರಾಜ್ಯದ ರಾಜ್ಯಪಾಲರು, ಅವರಿಗೆ ಸದನದಲ್ಲಿ ಅವಮಾನ ಮಾಡಿಲ್ಲ. ನಾನೇ ಕಾರಿನ ಬಳಿ ಹೋಗಿ ಕರೆತಂದಿದ್ದೇನೆ. ಹೋಗುವಾಗಲೂ ಕಾರಿನವರೆಗೂ ಹೋಗಿ ಬಿಟ್ಟು ಬಂದಿದ್ದೇನೆ. ಯಾವ ಹಂತದಲ್ಲೂ ಅಗೌರವ ತೋರಿಲ್ಲ ಎಂದರು.

ರಾಜ್ಯಪಾಲರು ನಾವು ಬರೆದುಕೊಟ್ಟ ಭಾಷಣ ಪೂರ್ತಿಯಾಗಿ ಓದಿಲ್ಲ. ಓದಿ ದಾಖಲಿಸಲಾಗಿದೆ ಎಂಬಂಥ ನಡವಳಿಕೆಗಳಾಗಿವೆ. ಜೈ ಹಿಂದ್ ಎಂದು ಹೇಳುವ ಮೂಲಕ ರಾಜ್ಯಪಾಲರು ನಿರ್ಗಮಿಸಿದ್ದಾರೆ. ಇದು ರಾಜ್ಯಕ್ಕೆ ಮಾಡಿದ ಅನ್ಯಾಯ. ಸಂವಿಧಾನಕ್ಕಾದ ಅಪಚಾರ ಎಂದರು.

ಅಶೋಕ್ ಮುಂದುವರೆದು ಮಾತನಾಡಿ, ರಾಜ್ಯಪಾಲರಿಗೆ ಅಪಮಾನ ಮಾಡುವ ವಿಚಾರದಲ್ಲಿ ಈ ಸರ್ಕಾರ ಪುನರಾವರ್ತಿತ ಅಪರಾಧಿಯಂತೆ ವರ್ತಿಸುತ್ತಿದೆ ಎಂದರು.

ಕಾಂಗ್ರೆಸ್ಸಿನ ನಿಲುವನ್ನು ವಿರೋಧಿಸಿ ಬಿಜೆಪಿ ಸದಸ್ಯರು ಪ್ರತಿರೋಧ ವ್ಯಕ್ತಪಡಿಸಿದಾಗ, ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ವಾಗ್ವಾದ, ಆರೋಪ–ಪ್ರತ್ಯಾರೋಪಗಳು ಏರಿದ ದನಿಯಲ್ಲಿ ನಡೆದವು. ಸುರೇಶ್ ಕುಮಾರ್ ಮಾತನಾಡಿ, ರಾಜ್ಯಪಾಲರು ಭಾಷಣ ಮುಗಿಸಿ ಹೋಗುವಾಗ ಅಕ್ಕಪಕ್ಕದಲ್ಲಿದ್ದ ಸಭಾಧ್ಯಕ್ಷರು ಮತ್ತು ಸಭಾಪತಿ, ರಾಷ್ಟ್ರಗೀತೆಗಾಗಿ ಕಾಯುವಂತೆ ರಾಜ್ಯಪಾಲರಿಗೆ ಸಲಹೆ ನೀಡಬಹುದಿತ್ತು. ಅದನ್ನು ಬಿಟ್ಟು ಪದೇ–ಪದೆ ರಾಜ್ಯಪಾಲರಿಂದ ರಾಷ್ಟ್ರಗೀತೆಗೆ ಅವಮಾನವಾಗಿದೆ ಎಂಬ ಆರೋಪ ಸರಿಯಲ್ಲ ಎಂದರು.

ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಮಧ್ಯಪ್ರವೇಶಿಸಿ, ರಾಜ್ಯಪಾಲರು ಹೊರಡುವ ಸಂದರ್ಭದಲ್ಲಿ ರಾಷ್ಟ್ರಗೀತೆ ಹಾಕಿಲ್ಲ ಎಂಬುದಾಗಿ ತಾವು ನೆನಪಿಸಿದ್ದಾಗಿ ವಿಧಾನಪರಿಷತ್ ಸಭಾಪತಿ ಹೇಳಿದ್ದಾರೆ. ಆದರೂ ರಾಜ್ಯಪಾಲರು ರಾಷ್ಟ್ರಗೀತೆ ಹಾಡುವವರೆಗೂ ಕಾಯದೆ ಸದನದಿಂದ ನಿರ್ಗಮಿಸಿದ್ದಾರೆ. ಅದಕ್ಕಾಗಿಯೇ ತಾವು ರಾಜ್ಯಪಾಲರು ಸದನದಿಂದ ಓಡಿ ಹೋಗಿದ್ದಾರೆ ಎಂದಿದ್ದು, ಇದಕ್ಕೆ ಈಗಲೂ ಬದ್ಧನಾಗಿದ್ದೇನೆ ಎಂದರು.

ಸುನೀಲ್‌ಕುಮಾರ್ ಮಾತನಾಡಿ, ನರೇಗಾ ಯೋಜನೆ ಕುರಿತು ಸಂಸತ್‌ನಲ್ಲಿ ಚರ್ಚೆ ವೇಳೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿದೇಶಕ್ಕೆ ಓಡಿಹೋಗಿದ್ದರು. ಅದನ್ನು ನೆನಪು ಮಾಡಿಕೊಂಡು ಆಡಳಿತ ಪಕ್ಷದವರು ಮಾತನಾಡುತ್ತಿದ್ದಾರೆ ಎಂದಾಗ, ಸದನದಲ್ಲಿ ಮತ್ತೊಮ್ಮೆ ಕೋಲಾಹಲದ ವಾತಾವರಣ ಸೃಷ್ಟಿಯಾಯಿತು.

ಇದಕ್ಕೆ ಕಾಂಗ್ರೆಸ್‌ನ ಸದಸ್ಯರು ಸಂಸತ್ ಅಧಿವೇಶನ ನಡೆಯುವಾಗ ಪ್ರಧಾನಿ ಅವರು ವಿದೇಶ ಪ್ರವಾಸದಲ್ಲಿರುತ್ತಾರೆ ಎಂದಾಗ, ಸದನ ಮತ್ತೆ ಕೆಲಕಾಲ ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ಮಾತಿನ ಚಕಮಕಿ, ಗದ್ದಲಕ್ಕೆ ಕಾರಣವಾಯಿತು.

ಮೈಸೂರು ಜಿಲ್ಲೆ ಬೀದಿ ನಾಯಿಗಳ ಸಂತಾನಹರಣ ಶಸ್ತ್ರ ಚಿಕಿತ್ಸೆ!

- ಫೆಬ್ರವರಿಯಲ್ಲಿ ಶಸ್ತ್ರ ಚಿಕಿತ್ಸಾ ಕಾರ್ಯ ಆರಂಭ
- 15ನೇ ಹಣಕಾಸು ಆಯೋಗದ ಬಡ್ಡಿ ವಿನಿಯೋಗಕ್ಕೆ ಸೂಚನೆ
- ಮೈಸೂರು ಜಿಲ್ಲೆಯ 13 ಸ್ಥಳೀಯ ಸಂಸ್ಥೆಗಳಿಗೆ ಹೊಣೆ
- ಕ್ರಿಯಾ ಯೋಜನೆ ಸಿದ್ಧ, ಟೆಂಡರ್ ಪ್ರಕ್ರಿಯೆ ಪ್ರಗತಿ
- ಮೈಸೂರು ಜಿಲ್ಲೆಯಲ್ಲಿ 1.20 ಲಕ್ಷ ಬೀದಿ ನಾಯಿಗಳಿವೆ

ಮೈಸೂರು, ಜ.28(ಬಿಎಲ್‌ಯು)– ಮೈಸೂರು ನಗರ ಮತ್ತು ಜಿಲ್ಲೆಯಲ್ಲಿರುವ ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆಗಾಗಿ 60 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ. ಫೆಬ್ರವರಿಯಲ್ಲಿ ಶಸ್ತ್ರ ಚಿಕಿತ್ಸಾ ಕಾರ್ಯ ಆರಂಭವಾಗಲಿದ್ದು, ಎರಡು ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ರಾಜ್ಯ ಸರ್ಕಾರದ ನಿರ್ದೇಶನದಂತೆ 15ನೇ ಹಣಕಾಸು ಆಯೋಗ ನೀಡಿರುವ ಹಣದ ಬಡ್ಡಿಯಲ್ಲಿ ಈ ಕಾರ್ಯ ಕೈಗೊಳ್ಳಲಾಗುತ್ತಿದೆ. ಮೈಸೂರು ನಗರ ಪಾಲಿಕೆ, ನಗರ ಸಭೆ ಸೇರಿದಂತೆ ಮೈಸೂರು ಜಿಲ್ಲೆಯ 13 ಸ್ಥಳೀಯ ಸಂಸ್ಥೆಗಳಿಗೆ ಈ ಜವಾಬ್ದಾರಿ ನೀಡಲಾಗಿದ್ದು, ಸಂತಾನ ಹರಣ ಶಸ್ತ್ರ ಚಿಕಿತ್ಸೆ ನೀಡುವ ಹೊಣೆಯನ್ನು ಪಶುಸಂಗೋಪನಾ ಇಲಾಖೆಗೆ ವಹಿಸಲಾಗಿದೆ.

ಬೀದಿ ನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನೀಡಲು ನಿಗದಿತ ಸ್ಥಳ ಗುರುತಿಸಬೇಕು, ತರುವಾಯ ಅಲ್ಲಿ ಶೆಡ್ ಹಾಗೂ ಆರೈಕೆ ಕೇಂದ್ರ ಕೂಡ ನಿರ್ಮಾಣ ಮಾಡಬೇಕು. ಇದಕ್ಕಾಗಿ ಕ್ರಿಯಾ ಯೋಜನೆಯನ್ನು ಸ್ಥಳೀಯ ಸಂಸ್ಥೆಗಳು ರೂಪಿಸಿವೆ. ಬೀದಿ ನಾಯಿಗಳನ್ನು ಹಿಡಿದು ತರಲು, ಶೆಡ್ ಹಾಗೂ ಆರೈಕೆ ಕೇಂದ್ರ ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆ ಬಹುತೇಕ ಅಂತಿಮ ಹಂತದಲ್ಲಿದೆ. ಮೊದಲು ಬೀದಿ ನಾಯಿಗಳನ್ನು ಹಿಡಿದು ನಿಗದಿತ ಸ್ಥಳಕ್ಕೆ ತರಬೇಕು, ತರುವಾಯ ಅವುಗಳಿಗೆ ಲಸಿಕೆ ಹಾಕಬೇಕು, ನಂತರ ಎರಡು ದಿನ ಅವುಗಳನ್ನು ಅಲ್ಲೇ ಇರಿಸಿ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಬೇಕು, ಬಳಿಕ ಆರೈಕೆ ಕೇಂದ್ರದಲ್ಲಿ ಅವುಗಳಿಗೆ ಆಹಾರ ನೀಡಿ ಆರೈಕೆ ಮಾಡಬೇಕು. ಇದನ್ನು ಚಾಚೂತಪ್ಪದೆ ಪಾಲಿಸಬೇಕು ಎಂದು ರಾಜ್ಯ ಸರ್ಕಾರ ಜಿಲ್ಲಾಡಳಿತಕ್ಕೆ ಮಾರ್ಗಸೂಚಿ ಸಿದ್ಧಪಡಿಸಿದೆ.

ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡುವ ಶೆಡ್ ಹಾಗೂ ಆರೈಕೆ ಕೇಂದ್ರ ನಿರ್ಮಾಣವಾದ ನಂತರ ಅವುಗಳನ್ನು ಹಿಡಿದು ತರುವ ಕೆಲಸ ಆರಂಭವಾಗಲಿದೆ.

ಮೈಸೂರು ಜಿಲ್ಲೆಯಲ್ಲಿ 1.20 ಲಕ್ಷ ಬೀದಿನಾಯಿಗಳಿದ್ದು, ಇವುಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಲು ಅಗತ್ಯ ಲಸಿಕೆಯನ್ನು ಪಶು ಸಂಗೋಪನಾ ಇಲಾಖೆ ಸ್ಟಾಕ್ ಮಾಡಿಕೊಂಡಿದೆ. ಅಲ್ಲದೆ ಶಸ್ತ್ರ ಚಿಕಿತ್ಸೆಗಾಗಿ ವೈದ್ಯರ ತಂಡವನ್ನು ಪಟ್ಟಿ ಮಾಡಿದೆ.

ಮೈಸೂರು ನಗರ ಪಾಲಿಕೆ, ಹುಣಸೂರು ನಗರಸಭೆ, ತಿ.ನರಸೀಪುರ ನಗರಸಭೆ, ಪಿರಿಯಾಪಟ್ಟಣ ನಗರಸಭೆ, ಹೆಚ್.ಡಿ.ಕೋಟೆ ನಗರಸಭೆ, ಕೆ.ಆರ್.ನಗರ ನಗರಸಭೆಯಲ್ಲಿ ಬೀದಿನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ.



ಫೈಲ್ ಚಿತ್ರ

ಮೈಸೂರು ನಗರ ಪಾಲಿಕೆ ಸೇರಿದಂತೆ ಸ್ಥಳೀಯ ಸಂಸ್ಥೆಗಳು ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆಗಾಗಿ ಶೆಡ್ ಹಾಗೂ ಆರೈಕೆ ಕೇಂದ್ರ ನಿರ್ಮಾಣ ಮಾಡುವ ಸಂಬಂಧ ಈಗಾಗಲೇ ಕ್ರಿಯಾ ಯೋಜನೆ ಸಲ್ಲಿಸಿವೆ. ಇದರ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.


– ಪ್ರಿಯದರ್ಶಿನಿ, ಜಿಲ್ಲಾ ನಗರಾಭಿವೃದ್ಧಿ ಕೋಶ, ಯೋಜನಾ ನಿರ್ದೇಶಕಿ

ಇದಲ್ಲದೆ ಬೋಗಾದಿ ಪಟ್ಟಣ ಪಂಚಾಯಿತಿ, ಕಡಕೊಳ ಪಟ್ಟಣ ಪಂಚಾಯಿತಿ, ಶ್ರೀರಾಂಪುರ ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಕೂಡ ಸಂತಾನಹರಣ ಶಸ್ತ್ರ ಚಿಕಿತ್ಸೆ ಕಾರ್ಯ ಕೈಗೊಳ್ಳಲು ತಯಾರಿ ಮಾಡಿಕೊಳ್ಳಲಾಗುತ್ತಿದೆ.

ಬೀದಿ ನಾಯಿಗಳ ಉಪಟಳ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇದಕ್ಕೆ ಕಡಿವಾಣ ಹಾಕಬೇಕೆಂದು ಸುಪ್ರೀಂಕೋರ್ಟ್ ದೇಶದ ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿತ್ತು. ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ರಾಷ್ಟ್ರೀಯ ನೀತಿ ರೂಪಿಸಲು ಸೂಚನೆ ನೀಡಿತ್ತು. ಪ್ರಾಣಿ ಕಲ್ಯಾಣ ಕಾಯ್ದೆ ಮತ್ತು ಸಂತಾನಹರಣ ನಿಯಮಗಳ ಅನ್ವಯ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ನಿರ್ದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಕ್ರಿಯಾ ಯೋಜನೆ ರೂಪಿಸಿ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಸೇರಿದಂತೆ ರಾಜ್ಯಾದ್ಯಂತ ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆ ಮಾಡಲು ಎಲ್ಲಾ ತಯಾರಿ ಮಾಡಿಕೊಳ್ಳಲಾಗುತ್ತಿದೆ.

ಗ್ರಾಪಂಗಳಲ್ಲಿ ಇ–ಸ್ವತ್ತು ಖಾತಾ ವಿತರಣೆ ತಾಂತ್ರಿಕ ತೊಡಕು ತಿಂಗಳಲ್ಲಿ ನಿವಾರಣೆ

ಬೆಂಗಳೂರು, ಜ.28(ಕೆಎಂಶಿ)–ಗ್ರಾಮ ಪಂಚಾಯಿತ್‌ಗಳಲ್ಲಿ ಇ–ಸ್ವತ್ತು ಖಾತಾ ವಿತರಣೆಗೆ ಸಂಬಂಧಿಸಿದ ತಾಂತ್ರಿಕ ತೊಡಕುಗಳನ್ನು ಒಂದು ತಿಂಗಳೊಳಗೆ



ಪರಿಹರಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆಯಲ್ಲಿ ಇಂದು ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಕಿರಣ ಕುಮಾರ ಕೊಡ್ಗಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 2025ರ ಡಿಸೆಂಬರ್ 1ರಿಂದ ಇ–ಸ್ವತ್ತು 2.0 ತಂತ್ರಾಂಶದ ಅನುಷ್ಠಾನಗೊಳಿಸಲಾಗಿದೆ. ಆರಂಭಿಕ ಸಮಸ್ಯೆಗಳು ಇರುವುದು ನಿಜ. ಅವುಗಳನ್ನು ಪರಿಹರಿಸಲು 15–20 ದಿನಗಳೊಳಗೆ ಕ್ರಮ ಕೈಗೊಳ್ಳುತ್ತೇವೆ. ಇದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪ್ರಕಟಣೆ ನೀಡಲಾಗಿದೆ ಎಂದರು.

ಪಿಡಿಒ, ಇಇಒಗಳಿಗೆ ನಿರಂತರ ಕಾರ್ಯಾಗಾರ ನಡೆಸಲಾಗಿದೆ. ವ್ಯವಸ್ಥೆ ಸಬಲೀಕರಣ ಮತ್ತು ಸರಳೀಕರಣ ಪ್ರಯತ್ನಗಳು ನಡೆಯುತ್ತಿವೆ. ಇ–ಸ್ವತ್ತು ಇ–ತಂತ್ರಾಂಶ 1 ಮತ್ತು 2ರಲ್ಲಿ ಒಟ್ಟು 44,508 ಅರ್ಜಿಗಳು ಸ್ವೀಕಾರಗೊಂಡಿವೆ. 5,978 ಅರ್ಜಿಗಳು ಅನುಮೋದಿಸಲಾಗಿದೆ. ಹೊಸ ವ್ಯವಸ್ಥೆಗೆ ಬದಲಾಗುವಾಗ ಒಂದಿಷ್ಟು ಗೊಂದಲಗಳಾಗುವುದು ನಿಜ. ವೆಬ್‌ಸೈಟ್‌ನಲ್ಲಿ ತಂತ್ರಾಂಶಗಳ ತಾಂತ್ರಿಕ ಸಮಸ್ಯೆ ಮತ್ತು ವರ್ಕ್‌ಫ್ಲೋ ಅಡಚಣೆಗಳ ನಿವಾರಣೆಗೆ ಸಹಕರಿಸುವಂತೆ ಎನ್‌ಐಸಿ ಸಂಸ್ಥೆಗೆ ಪತ್ರ ಬರೆಯಲಾಗಿದೆ. ಈಗಾಗಲೇ ಸಂಸ್ಥೆಗೆ ಹಣವನ್ನೂ ನೀಡಿದ್ದೇವೆ. ಜನವರಿ 16ರಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವರಿಗೆ ಪತ್ರ ಬರೆದಿದ್ದು, ಸಮಸ್ಯೆ ಬಗೆಹರಿಸಿ ಇಲ್ಲವಾದರೆ ನಮ್ಮ ದತ್ತಾಂಶ ವಾಪಸ್ ಕೊಡಿ, ನಾವೇ ನಿರ್ವಹಣೆ ಮಾಡಿಕೊಡುತ್ತೇವೆ ಎಂದು ಹೇಳಿದ್ದೇವೆ.

CHANGE OF NAME

I, **Jayanthi Pai. B** aged 78 years, residing at No.B-3, J Block, Sarvagna Road, Kuvempunagar, Mysuru City, state on oath that in my old passport my name & date of birth has been wrongly mentioned as Jayanthi Jakribettu & date of birth as 14/01/1947. I swear that my correct name is **Jayanthi Pai. B & date of birth is 14/01/1948** vide affidavit sworn in front of Notary Vishalakshamma dated 24/01/2026. **Sd/- Jayanthi Pai. B**

ಸಾರ್ವಜನಿಕ ಪ್ರಕಟಣೆ

ಈ ಮುಖಾಂತರ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ನಮ್ಮ ಕಕ್ಷಿದಾರರು ಇದೇ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನುಗಳಿಗೆ ಸಂಬಂಧಪಟ್ಟ ಹಾಗೆ ಅದರ ಹಾಲಿ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಡಿ. ಸಾಲುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ. ಬಸವೇಗೌಡ ರವರ ಮಗನಾದ ಸುಮಾರು 46 ವರ್ಷದ ಶ್ರೀ. ಬಸಪ್ಪ ಮತ್ತು ಕುಟುಂಬದವರುಗಳಿಂದ ಖರೀದಿಸುವ ಉದ್ದೇಶದಿಂದ ಕ್ರಯಪತ್ರವನ್ನು ನೊಂದಾಯಿಸಿಕೊಳ್ಳಲು ತಯಾರಿರುತ್ತೇವೆ, ಆದುದರಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಸಂಬಂಧಪಟ್ಟ ಹಾಗೆ ಬೇರೆ ಯಾರಿಗಾದರು ಯಾವುದೇ ರೀತಿಯಲ್ಲಾದರು ಹಕ್ಕು, ಬಾಧ್ಯತೆ, ಅಧಿಕಾರ, ಆಸಕ್ತಿ ಇದ್ದಲ್ಲಿ ಇಂದಿನಿಂದ 06 ದಿನಗಳ ಕಾಲಾವಧಿಯೊಳಗೆ ಸಂಬಂಧಪಟ್ಟ ಅಸಲು ದಾಖಲೆಗಳೊಂದಿಗೆ ಈ ಕೆಳಕಂಡ ವಕೀಲರನ್ನು ಅವರ ಕಛೇರಿಯಲ್ಲಿ ಖುದ್ದಾಗಿ ಭೇಟಿ ಮಾಡತಕ್ಕದ್ದು. ಒಂದು ವೇಳೆ ಆ ರೀತಿಯಾಗಿ ಯಾರು ಭೇಟಿ ಮಾಡದಿದ್ದಲ್ಲಿ ಸದರಿ ಸ್ವತ್ತುಗಳ ಮಾರಾಟ ಸಂಬಂಧಪಟ್ಟ ಹಾಗೆ ಯಾರಿಗೂ ಯಾವುದೇ ರೀತಿಯಾದ ಅಭ್ಯಂತರವಿಲ್ಲವೆಂದು ಪರಿಗಣಿಸಿ ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳಲಾಗುವುದು. ಒಂದು ವೇಳೆ ಯಾರಾದರೂ ನಿಗಧಿತ ಕಾಲಾವಧಿ ಕಳೆದ ನಂತರ ಈ ಬಗ್ಗೆ ಪ್ರಶ್ನಿಸಿದ್ದಲ್ಲಿ ಅದಕ್ಕೆ ನಮ್ಮ ಕಕ್ಷಿದಾರರು ಯಾವುದೇ ರೀತಿಯಲ್ಲೂ ಹೊಣೆಯಾಗುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲೂಕು, ಜಯಪುರ ಹೋಬಳಿ, ಜಯಪುರ ಗ್ರಾಮದ ಸರ್ವೆ ನಂ.55/19 ರಲ್ಲಿ ವಿಸ್ತೀರ್ಣ 0–19 (ಹತ್ತೊಂಭತ್ತು) ಗುಂಟೆ ಖುಷ್ಕಿ ಜಮಿನಿಗೆ ಚಕ್ಕುಬಂದಿ:– ಪೂರ್ವಕ್ಕೆ : ಶಂಕರ ರವರ ಜಮೀನು, ಪಶ್ಚಿಮಕ್ಕೆ : ರವಿ ರವರ ಜಮೀನು, ಉತ್ತರಕ್ಕೆ : ರಸ್ತೆ ಮತ್ತು ದಕ್ಷಿಣಕ್ಕೆ: ಜೆ.ಎಸ್.ಎಸ್. ಬಡಾವಣೆ.

ಸಹಿ/– ನಾಗೇಶ ಕೆ, ಎಂ.ಬಿ.ಎ. ಎಲ್.ಎಲ್.ಬಿ.
ವಕೀಲರು, ನಂ. 1197, 12/2 ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಮೈಸೂರು ಟೆನ್ನಿಸ್ ಕೋರ್ಟ್ ಮುಂಭಾಗ, ಚಾಮರಾಜಪುರಂ, ಮೈಸೂರು
ಮೊ: 9538842045
ದಿನಾಂಕ : 28–01–2026, ಸ್ಥಳ: ಮೈಸೂರು

PUBLIC NOTICE

Notice is given to the general public at large that my client Sri.Maaz Ahmed, son of Late Sri. Abdul Azeez Subhan, aged about 32 years, residing at # 67, Ganesh Temple road, N.R.Mohalla. Mysuru has entered into a registered general power of attorney bearing document No.MYE-4-00576-2024-2025, book No.4 on 10-03-2025 with respect to the schedule property herein below mentioned with Sri.Syed Sadiq, Son of Sri.Syed Usman, Sri.Jabir Khan, Son of Sri. Abdul Sattar, Sri.Sameer Pasha Son of Sri.Riyaz Pasha and Sri.Shakeel Ahmed Son of Late Sri.Jameel Ahmed, all residents of Mysuru City. Since the above four did not perform any act as per the general power of attorney, my client vide legal notice dated 22-01-2026 has terminated/cancelled the registered Power of Attorney dated 10-03-2025.

Thus it is hereby bought to the kind notice of every person/company/bank that they shall refrain themselves from negotiating or entering into any kind of agreements or contracts with Sri.Syed Sadiq, Sri.Jabir Khan, Sri.Sameer Pasha and Sri.Shakeel Ahmed, their agents, servants or anybody claiming under them with respect to the schedule property as they are not having any power, right, title or interest over the schedule property. My client shall not be held responsible for the act and conduct of these individuals with regard to the schedule property.

SCHEDULE PROPERTY

All that piece and parcel of property bearing survey No.168/2, situated at Devanur village, Kasaba hobli, Mysuru Taluk to the extent of 04 acres 01 guntas bounded on:- East by: Drainage, West by: Property belonging to Mahadevamma and Swamy, North by: Property belonging to MUDA and road. South by: Drainage

SD/- SRI.K.G. APPANNA
Advocate, Law and Lawyers,
No1, first Floor, Karnataka Sangha building. Kittur Rani, Channamma road, Virajpet
Kodagu-571218. Mob : 9482273474
Date 29-01-2026

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ: 0821–2473923/2473933, ಫ್ಯಾಕ್ಸ್ ನಂ.0821–2472797
ಇ–ಮೇಲ್ : mymuladmn@gmail.com

ಟೆಂಡರ್ ಸಂಖ್ಯೆ:KMF/2025-26/SE4841 ದಿನಾಂಕ 27.01.2026

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ವ್ಯಾಪ್ತಿಗೊಳಪಡುವ ಕಟ್ಟಡ/ ಯಂತ್ರೋಪಕರಣಗಳು ಹಾಗೂ ಇತ್ಯಾದಿಗಳನ್ನು ಬೆಂಕಿ ಅಪಘಾತ/ ಕಳ್ಳತನ / ಎಂ.ಬಿ.ಡಿ/ ನಗದು ವಿಮಾ ಸುರಕ್ಷತೆಗೊಳಪಡಿಸಲು ಹಾಗೂ ಒಕ್ಕೂಟದ ನೌಕರರುಗಳಿಗೆ ಮತ್ತು ಅವರ ಅವಲಂಬಿತರಿಗೆ ಆರೋಗ್ಯ ವಿಮೆಯನ್ನು 2026–27 ನೇ ಸಾಲಿಗೆ ಐ.ಆರ್.ಡಿ.ಎ ನೋಂದಾಯಿತ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಿಂದ ಮಾಡಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ ಹಾಗೂ ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ 04.02.2026** ಸಂಜೆ 5.00 ಗಂಟೆಯವರಿವಿಗು.

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಆಡಳಿತ) ರವರನ್ನು ಮೊಬೈಲ್ ಸಂಖ್ಯೆ: 9845284700 ಮೂಲಕ ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

PUBLIC NOTICE

My client is intending to purchase, the below mentioned Schedule Property from **Sri. Mukundan R, son of Sri. Rangaiah L @ Rangaiah,** residing at Flat No. 05, Brundavana Apartment, K.R.S. Road, Yadavagiri, Mysore-570 020 (referred as "Owner"). The Owner has represented that he is the absolute owner of the Schedule Property having absolute, clear, marketable right, title and interest therein and that there are no other person/s having any right, claim over the Schedule Property apart from him. The Owner has further represented that he has not mortgaged, created a lien, encumbered the Schedule Property or part thereof in any manner and that the Owner has not entered into any agreement for Sale/MoU/Power of Attorney with any person's regard to the Schedule Property. Any person/s having any objection or claims shall with documentary evidence lodge their objections/claims within **7 (Seven) days** from the date of this notice to my office at situated at **No.1063/71A, F-3A, 2 Main, 8th Cross, Vidyaranyapuram, Mysore-570 008,** failing which my client shall proceed with the above mentioned transaction, without any reference and regard to such purported claim, interest, which shall be deemed to be waived off for all claims and purposes.

SCHEDULE PROPERTY

All that piece and parcel of Agricultural Land bearing Sy. No. 222, measuring an extent of 1 Acre 18 Guntas, situated at Dadadahalli Village, Jayapura Hobli, Mysore Taluk, Mysore District and bounded on the
East by: Land bearing Sy. No. 188 and Yenne Hole
West by: Yenne Hole and thereafter Sindhuvalli Village Boundary
North by: Land bearing Sy. No. 187/2
South by: Yenne Hole and thereafter Sindhuvalli Village Boundary

Sd/- Sri Laxmi Y.S, Advocate
#1063/71A, F-3A, 2nd Main, 8th Cross, Vidyaranyapuram, Mysore - 570008 **Mob: 9743476614**